keeping with the dignity of the House that he should treat the house so lightly. It is not fair. The Chief Minister must make alternative arrangements. He has been in bed for such a long time and the State must know who is the Chief Minister or who is acting on his behalf.

**Mr. SPEAKER.**—I thought, we had closed that matter.

**Sri S. SIVAPPA.**—How can we close it, Sir? It is a very important matter. Healthy functioning of Parliamentary Democracy needs that the House should have a Leader.

**Mr. SPEAKER.**—The first thing for a healthy democracy is that we observe the rules.

**Sri S. SIVAPPA.**—Sir, why not they copy the Prime Minister of our country? Is the Chief Minister greater than him? Has he not made alternative arrangement? He cannot treat this House so lightly by sending periodical information.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಮುಖ್ಯ ಮಂತ್ರಿಗಳು ಹೊರಗಡೆ ಕೆಲವು ಸಮಾರಂಭಗಳಲ್ಲಿ ಅಧ್ಯಕ್ಷತೆ ವಹಿಸುತ್ತಿದ್ದಾರೆ. ಆದರೆ......

**Mr. SPEAKER.**—Order, order. I thought we had finished the discussion about the health of the Chief Minister and that we were going to the other subject.

**Sri S. SIVAPPA.**—We all sympathise with him. Let him take rest and we do not come in his way. But, an alternative arrangement should be made. I pray to God that he should be given good health. But I want to know the alternative arrangement made by him.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ನಮ್ಮ ದೇಶದಲ್ಲಿ ಅನೇಕ ಕಡೆ ಬೆಂಕಿ ಅನಾಹುತ, ಎರಡು ಮೂರು ದಿವಸಗಳಿಂದ ಆಗುತ್ತಿದೆ.

**Mr. SPEAKER.**—Most of the Members that are getting up now seem to see that the Debate does not take place.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇದು ಬಹಳ ಮುಖ್ಯವಾದ ವಿಷಯ. ಸರ್ಕಾರದವರು ಇದನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮ, ಯೋಜನೆ ಕೈಕೊಂಡಿರುವರೇ ಎಂಬುದನ್ನು ತಿಳಿಸಬೇಕು.

**Mr. SPEAKER.**—Now, the Debate will continue. Sri B. L. Gowda will speak.

---

## BUDGET ESTIMATES FOR 1964-65

### Demands for Grants

*Debate Continued*

DEMANDS Nos. 31, 32, 43, 48 and 50.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸ್ವಾಮಿ, ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಯಮೇಲೆ ಮಾತನಾಡುತ್ತಾ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗಾಗಲೇ ನನಗಿಂತ ಮುಂಚೆ ಮಾತನಾಡಿದ ಮಾನ್ಯ ಸದಸ್ಯರು ಕೆಲವರು ಹಳೆಯ ಮೈಸೂರು ಮತ್ತು ಹೊಸ ಮೈಸೂರು ಇವುಗಳ ಬಗ್ಗೆ ಸರ್ಕಾರದವರು ತಾರತಮ್ಯವನ್ನು ತೋರಿಸುತ್ತಿದ್ದಾರೆ ಎಂದು ಹೇಳಿದರು. ನಾನೂ ಅದರ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ.

**Mr. SPEAKER.**—I have reserved the ruling with regard to that point raised by Sri A. Krishna Setty—the question of dividing the State.

**Sri B. L. GOWDA.**—I am not a champion of division, Sir. I am only making a passing remark.

**Sri G. V. GOWDA** (Palya).—The Chair must hear all the Members before it gives a ruling.

**Mr. SPEAKER.**—I will hear when that subject comes up.

ಶ್ರೀ ಬಿ. ಎಲ್. ಗೌಡ.—1964–65ನೆಯ ಸಾಲಿನ ಬಜೆಟ್ಟನ್ನು ನೋಡಿದರೆ ಹೆಚ್ಚು ಕಾಮಗಾರಿಗಳನ್ನು ಹೊಸ ಕರ್ಣಾಟಕ ಭಾಗಕ್ಕೆ ಒದಗಿಸಿ ಹಳೆಯ ಕರ್ಣಾಟಕದ ಭಾಗಗಳನ್ನು ಅಲಕ್ಷ್ಯ ಮಾಡಿದ್ದಾರೆ. ಇದು ನಿಜವಾಗಿಯೂ ವಿಷಾದಕರ. ಎಲ್ಲಾ ಪ್ರದೇಶಗಳಿಗೂ ಸಮನಾದ ಅವಕಾಶವಿರಬೇಕು, ಎಲ್ಲ ಕಡೆಯೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಸರಿಯಾದ ಕ್ರಮವನ್ನು ಕೈಕೊಳ್ಳಬೇಕಾದ್ದು ಅಗತ್ಯವಾದುದು, ಅದು ಸರ್ಕಾರದ ಕರ್ತವ್ಯ. ಆದರೆ ಹಾಗೆ ಮಾಡದೆ ಸರ್ಕಾರದವರು ತಮಗೆ ಬೇಕಾದ ಕೆಲವು ಭಾಗಗಳಲ್ಲಿ ಉತ್ತರ ಕರ್ಣಾಟಕದಲ್ಲಿ ಕಾಂಗ್ರೆಸ್ಸಿನವರು ಹೆಚ್ಚಾಗಿ ಆರಿಸಿ ಬಂದಿರುವುದರಿಂದ, ಅವರಿಂದ ಮುಖ್ಯ ಮಂತ್ರಿ ಪದವಿ ಖಾಯಂ ಆಗಿ ಉಳಿಯಬೇಕಾಗಿರುವುದರಿಂದ, ಅವರಿಂದ ಸರ್ಕಾರ ಮುಂದುವರೆಯಲು ಸಾಧ್ಯವಾಗಿರುವುದರಿಂದ ಒಂದು ಪಕ್ಷದ ಮನೋಭಾವನೆಯಿಂದ ಸರ್ಕಾರ ಈ ರೀತಿ ಮಾಡುತ್ತಿದೆ. ಈ ರೀತಿ ಮನೋಭಾವನೆ ಇರುವ ಸರ್ಕಾರ ಮುಂದುವರೆದರೆ ದೇಶಕ್ಕೆ ಹಾನಿ ಎಂದು ಹೇಳ ಬಯಸುತ್ತೇನೆ. ನಿಜವಾಗಿಯೂ ಇದನ್ನು ನೋಡಿದರೆ ಕರ್ಣಾಟಕ ಎರಡು ಭಾಗವಾಗಬೇಕು ಎಂದು ಕೆಲವರು ಹೇಳುವ ವಾದಕ್ಕೆ ಪುಷ್ಟೀಕರಣ ಕೊಟ್ಟಂತಾಗುತ್ತದೆ, ಬೆಂಬಲ ಕೊಟ್ಟಂತಾಗುತ್ತದೆ. ಈಗಲಾದರೂ ಮಂತ್ರಿಗಳು, ಅಧಿಕಾರಿಗಳು ಇದನ್ನು ಗಮನಿಸಿ ಹಿಂದುಳಿದ ಎಲ್ಲಾ ಭಾಗಗಳಿಗೂ ಒಂದೇ ರೀತಿಯಾದ ಆದ್ಯತೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಲೋಕೋಪಯೋಗಿ ಇಲಾಖೆಯಲ್ಲಿ ಸೇತುವೆ ಕಟ್ಟುವ ವಿಚಾರವನ್ನು ತೆಗೆದುಕೊಂಡರೆ ಹೊಸ ಮೈಸೂರಿನಲ್ಲಿ ಅನೇಕ ಯೋಜನೆಗಳಿವೆ; ಹಳೆಯ ಮೈಸೂರಿನಲ್ಲಿ ಬಹಳ ಮುಖ್ಯವಾದ ಕಾಮಗಾರಿಗಳನ್ನು ಕೈಬಿಟ್ಟಿದ್ದಾರೆ. ಇದನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ತಮ್ಮ ಮುಂದೆ ಇಡುವುದಾದರೆ ನಮ್ಮ ತಾಲ್ಲೂಕಿನಲ್ಲಿ ವೇದಾವತಿ ನದಿಗೆ ಜಾಜೂರಿನ ಬಳಿ ನಾಗಗೊಂಡಹಳ್ಳಿಯಲ್ಲಿ ಒಂದು ಸೇತುವೆಯನ್ನು ಕಟ್ಟಬೇಕೆಂಬ ಬೇಡಿಕೆ ಹತ್ತಾರು ವರ್ಷಗಳಿಂದ ಇದೆ. ಆ ಬಗ್ಗೆ ಅಂದಾಜು, ಪ್ಲಾನು ಎಲ್ಲಾ ಆಗಿದ್ದರೂ ಈವರೆಗೆ ಆ ಕೆಲಸ ಆರಂಭಿಸಿಲ್ಲ. ಆದರೆ ಉತ್ತರ ಕರ್ಣಾಟಕದಲ್ಲಿ ಕಾಮಗಾರಿಗಳನ್ನು ಕೈಕೊಂಡಿದ್ದಾರೆ. ಜಾಜೂರು ಸೇತುವೆಯ ಬಗ್ಗೆ ಮುಖ್ಯ ಮಂತ್ರಿಗಳು ಅದು ಬಹಳ ಮುಖ್ಯವಾದುದು, ಅದರ ಕೆಲಸ ಪ್ರಾರಂಭಿಸುತ್ತೇವೆ ಎಂದು ಆಶ್ವಾಸನೆ, ಭರವಸೆ ಕೊಟ್ಟಿದ್ದರೂ ಅದು ಹಾಗೆಯೇ ನಿಂತಿದೆ. ಆದುದರಿಂದ ಒಂದೇ ಸಮನಾಗಿ ಎಲ್ಲಾ ಭಾಗಗಳಿಗೂ ಆದ್ಯತೆ ಕೊಡಬೇಕೆಂದು ಒತ್ತಾಯಮಾಡುತ್ತೇನೆ.

ಈ ಒಂದು ಇಲಾಖೆಯಲ್ಲಿ ಎಲ್ಲದಕ್ಕಿಂತ ಮುಖ್ಯವಾದ ವಿಷಯ ಅಧಿಕಾರಿಗಳಿಗೆ ಬಡ್ತಿಯನ್ನು ಕೊಡುವಾಗ ತಾರತಮ್ಯ ತೋರುತ್ತಿರುವುದು. ಹಳೆಯ ಮತ್ತು ಹೊಸ ಮೈಸೂರಿನ ಅಧಿಕಾರಿಗಳ ವಿಷಯದಲ್ಲಿ ತಾರತಮ್ಯ ಬಹಳ ಹೆಚ್ಚಾಗಿದೆ. ಉನ್ನತ ಸ್ಥಾನಗಳಿಗೆ ಬಡ್ತಿ ಕೊಡುವಾಗ ಸೀನಿಯಾರಿಟಿ ಪ್ರಶ್ನೆಯನ್ನು ಬದಿಗೊತ್ತಿರುವ ಉದಾಹರಣೆಗಳಿವೆ. ಕೆಲವರಿಗೆ ಹೆಚ್ಚು ಜವಾಬ್ದಾರಿ ವಹಿಸುತ್ತಿದ್ದಾರೆ. ಈ ಇಲಾಖೆಯಲ್ಲಿ ಒಬ್ಬ ಚೀಫ್ ಎಂಜಿನಿಯರಿಗೆ ದೊಡ್ಡ ನೀರಾವರಿ ಯೋಜನೆ ಮತ್ತು ಟೆಕ್ನಿಕಲ್ ಇಲಾಖೆ ಡೈರೆಕ್ಟರ ಕೆಲಸ—ಈ ಎರಡನ್ನೂ ಸಹ ವಹಿಸಿದ್ದಾರೆ. ಏಕೆ? ನಮ್ಮ ರಾಜ್ಯದಲ್ಲಿ ಇಂಜಿನಿಯರುಗಳ ಅಭಾವವೇ? ನಮ್ಮಲ್ಲಿ ಎಷ್ಟೋ ಮೇಧಾವಿಗಳಿರುವಾಗ ಹೆಸರುವಾಸಿಯಾದ ಎಂಜಿನಿಯರು ಇರುವಾಗ ಒಬ್ಬರಿಗೇ ಎರಡು ಕೆಲಸಗಳನ್ನು ವಹಿಸುವುದೇಕೆ? ಇದರಿಂದ ಎರಡು ಇಲಾಖೆಗಳ ಕೆಲಸವೂ ಸರಿಯಾಗಿ ಆಗುತ್ತಿಲ್ಲ. ಇದರಿಂದ ಒಂದು ಕೋಟಿ ರೂಪಾಯಿ ಲ್ಯಾಪ್ಸ್ ಆಗಿದೆ; ಈ ವರ್ಷ ಕೂಡ ಲ್ಯಾಪ್ಸ್ ಆಗಿದೆ. ಈ ರೀತಿ ಮಾಡುವುದೇಕೋ ಅರ್ಥವಾಗುವುದಿಲ್ಲ. ಯಾವುದಾದರೂ ಒಂದು ಕೆಲಸ ಕೊಡಿ, ಇಂಜಿನಿಯರಾಗಿ ಅಥವಾ ಟೆಕ್ನಿಕಲ್ ಡೈರೆಕ್ಟರಾಗಿ ಮುಂದುವರೆಸಿ. ಈ ಎರಡೂ ಕೆಲಸಗಳ ಜೊತೆಗೆ ಅವರಿಗೆ ಪಿ. ಡಬ್ಲ್ಯು. ಸೆಕ್ರೆಟರಿ ಕೆಲಸವನ್ನೂ ಸಹ ವಹಿಸುವರೆಂಬ ವದಂತಿ ಇದೆ. ಮಂತ್ರಿಗಳು ಉತ್ತರ ಕೊಡುವಾಗ ಅದನ್ನು ವಿಶದಪಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಅಷ್ಟೇ ಅಲ್ಲ, ಈ ಇಲಾಖೆ ಹಳೇ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ಸಹ ವಹಿಸಿಕೊಂಡಿದೆ.

2-00 P.M.

ಸರ್ಕಾರದವರು ಹೊರಡಿಸಿರತಕ್ಕ ಒಂದು ನೋಟಿಫಿಕೇಷನ್ನಿನಲ್ಲಿ taking over of erstwhile district board roads ಎಂಬುದನ್ನು ನೋಡಿದರೆ ಅದರಲ್ಲೂ ಚಿತ್ರದುರ್ಗ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ನೋಡಿದರೆ ಯಾವ ಡಿಸ್ಟ್ರಿಕ್ಟ್ ಬೋರ್ಡುಗಳ ಹಾಗೂ ತಾಲ್ಲೂಕು ಬೋರ್ಡುಗಳು ರಸ್ತೆಗಳು ಚಳ್ಳಕೆರೆ ತಾಲ್ಲೂಕಿನಿಂದ ಸೇರಿಲ್ಲ ಎನ್ನುವುದು ತಿಳಿದು ಬರುತ್ತದೆ. ಅದರಲ್ಲೂ ಕೆಲವು ಕಡೆಗಳಲ್ಲಿ ಮಂತ್ರಿಗಳಿಗೆ ಬೇಕಾದವರು ಎಂದು ಅಂತಹ ರೋಡುಗಳನ್ನು ಮಾತ್ರ ತೆಗೆದುಕೊಂಡು ಇತರ ರಸ್ತೆಗಳನ್ನು ಹಾಗೇ ಕೈಬಿಟ್ಟಿದ್ದಾರೆ. ಈ ತರಹದಲ್ಲಿ ಸರಕಾರಕ್ಕೆ ಬೇಕಾದರೆ ಹತ್ತಾರು ನಿದರ್ಶನಗಳನ್ನು ಕೊಡಬಲ್ಲೆ. ಈ ಬಗ್ಗೆ ಹಿಂದೆ ಕೆಲವು ಸಾರಿ ಮಾನ್ಯ ಮಂತ್ರಿಗಳನ್ನು ಪ್ರಶ್ನೆ ಕೇಳಿದಾಗ ಅದಕ್ಕೆ ಸರಿಯಾದ ಜವಾಬನ್ನೂ ಕೊಡಲಿಲ್ಲ ಮತ್ತು ಸರಿಯಾದ ಸಮಜಾಯಿಷಿ ಯನ್ನೂ ಆಗ ಕೊಡಲಿಲ್ಲ. ಇದರಿಂದ ಸಾರ್ವಜನಿಕರ ಮನೋಭಾವನೆ ಯಾವ ರೀತಿಯಾಗುತ್ತದೆ ಎನ್ನುವುದನ್ನು ಸರಕಾರ ಗಮನಕ್ಕೆ ತೆಗೆದುಕೊಂಡಂತೆ ಕಾಣುವುದಿಲ್ಲ. ಈ ರೀತಿಯಾದ ನೀತಿಯನ್ನು ಸರಕಾರ ಅನುಸರಿಸುತ್ತಿದ್ದರೆ ಇದರಿಂದ ದೇಶಕ್ಕೆ ಕಲ್ಯಾಣವಾಗುವುದಿಲ್ಲ ಮತ್ತು ಜನತೆಗೂ ಒಳ್ಳೆಯದಾಗುವುದಿಲ್ಲ ಎಂದು ನಾನು ಇಲ್ಲಿ ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ. ನನ್ನ ಕ್ಷೇತ್ರದಲ್ಲೇ ಎಂದರೆ ಚಳ್ಳಕೆರೆ ತಾಲ್ಲೂಕಿನ ಬಗ್ಗೆ ಹೇಳುವುದಾದರೆ ದೇಶದ ಇತರ ಭಾಗಗಳಲ್ಲಿ ತೆಗೆದುಕೊಂಡಿರುವಂತೆ ಇಲ್ಲಿ ಒಂದು ಇಂಚು ರಸ್ತೆಯನ್ನೂ ಪಿ. ಡಬ್ಲ್ಯು. ಡಿ. ಗೆ ಸೇರಿಸಿಕೊಂಡಿಲ್ಲ. ಬೇರೆ ಇತರ ತಾಲ್ಲೂಕುಗಳಲ್ಲಿ ಹೆಚ್ಚು ಹೆಚ್ಚು ರಸ್ತೆಗಳನ್ನು ತೆಗೆದುಕೊಂಡಿದ್ದಾರೆ. ಅದೇ ರೀತಿ ದಾವಣಗೆರೆಯಲ್ಲೂ ನಮ್ಮ ಮಾನ್ಯ ಉಪಮಂತ್ರಿಗಳಾದ ಶ್ರೀ ಕೊಂಡಜ್ಜಿ ಬಸಪ್ಪನವರು ಬಂದ ಊರಿನಲ್ಲಿಯೂ ಹೆಚ್ಚಿನ ರಸ್ತೆಗಳನ್ನು ತೆಗೆದುಕೊಂಡಿಲ್ಲ. ಆದರೆ ಹಿರಿಯೂರು ಹಾಗೂ ಹರಿಹರ ಗಳಲ್ಲಿ ಹೆಚ್ಚಿನ ರಸ್ತೆಗಳ ಕೆಲಸಗಳಾಗಿವೆ. ಅಲ್ಲಿ ಹುಲ್ಲುಕೊಟ್ಟು—ಮೋಟಕುರ್ಕೆಗಾಗಿ ಒಂದು ರಸ್ತೆ ಯೋಜನೆ ಮಾಡಿದ್ದಾರೆ. ಆದರೆ ಮುಖ್ಯವಾದ ಯಾವ ರಸ್ತೆಗಳನ್ನೂ ಇಲ್ಲ ತೆಗೆದುಕೊಂಡಿಲ್ಲ. ರಸ್ತೆಗಳಿಗಾಗಿ ಬೇಡುತ್ತಿದ್ದರೂ ಅಂತಹ ರಸ್ತೆಗಳನ್ನು ತೆಗೆದುಕೊಂಡು ಅಲ್ಲಿ ಕೆಲಸಗಳನ್ನು ಮಾಡುತ್ತಿಲ್ಲ.

ಈ ಇಲಾಖೆಯಲ್ಲಿರುವ ಮೇಸ್ತ್ರಿಗಳು ಹಾಗೂ ಡ್ರೈವರುಗಳು ಬಹಳ ದಿವಸಗಳಿಂದಲೂ ಹಂಗಾಮಿಯಾಗಿಯೇ ಕೆಲಸ ಮಾಡುತ್ತಿದ್ದಾರೆ. ಬಹಳ ಜನ ಇದರಲ್ಲಿ ಸುಮಾರು 30 ವರ್ಷಗಳಷ್ಟು ಸರ್ವೀಸನ್ನು ಮಾಡಿದ್ದರೂ ಇವರನ್ನು ಖಾಯಂ ಮಾಡದೇ ಇರುವುದರಿಂದ ಇವರಿಗೆ ವೃದ್ಧಾಪ್ಯದಲ್ಲಿ ಸಿಗುವ ವಿರಾಮ ವೇತನಗಳು ನಿಯಮದಂತೆ ಸಿಗಲು ಕಷ್ಟವಾಗಿದೆ. ಅದ್ದರಿಂದ ಇವರೆಲ್ಲರನ್ನೂ ಖಾಯಂ ಮಾಡಿಸಿ ಅವರಿಗೆಲ್ಲ ವಿರಾಮ ವೇತನ ಸಿಗುವ ವ್ಯವಸ್ಥೆಮಾಡಬೇಕೆಂದು ಇದೆ: ಸಭೆಯಲ್ಲಿ ಹತ್ತಾರು ಸಾರಿ ಸರಕಾರದ ಗಮನಕ್ಕೆ ತಂದರೂ ಕೂಡ ಯಾವ ಕಾರ್ಯಕ್ರಮವನ್ನೂ ತೆಗೆದು ಕೊಂಡಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬಯಸುತ್ತೇನೆ.

ಈ ಇಲಾಖೆಯಲ್ಲಿ ಅನೇಕ ಕಡೆಗಳಲ್ಲಿ ಕಾಮಗಾರಿಗಳಾಗಬೇಕೆಂದು ಯೋಜನೆ ಹಾಕಿ ಕೊಂಡಿದ್ದರೂ ಅದಕ್ಕೆ ಹಣವನ್ನು ಒದಗಿಸುವಾಗ ಕಡಿಮೆಯಾಗಿ ಒದಗಿಸಿರುವುದರ ಕಾರಣದಿಂದಾಗಿ ಎಷ್ಟು ಕೆಲಸಗಳಾಗಬೇಕಾಗಿತ್ತೋ ಅಷ್ಟು ಕೆಲಸಗಳು ನಡೆಯದೇ ಹಾಗೆ ನಿಂತು ಹೋಗುತ್ತವೆ. ಇಂತಹ ಎಷ್ಟೋ ನಿದರ್ಶನಗಳನ್ನು ಬೇಕಾದರೆ ನಾನು ಇಲ್ಲಿ ಕೊಡಬಹುದು. ಅದ್ದರಿಂದ ನಾನು ಸೂಚನೆ ಮಾಡುವುದು ಯಾವ ಯಾವ ರಸ್ತೆಗಳನ್ನು ಪ್ರಯಾರಿಟಿಮೇಲೆ ತೆಗೆದುಕೊಳ್ಳಬೇಕು ಮತ್ತು ಅವುಗಳಿಗೆ ಎಷ್ಟು ಹಣವನ್ನೊದಗಿಸಬೇಕು ಎನ್ನುವುದನ್ನು ಮೊದಲೇ ನಿರ್ಧಾರ ಮಾಡಿಕೊಂಡು ಕೆಲಸಗಳನ್ನು ಮಾಡಿದರೆ ಎಷ್ಟೋ ಕೆಲಸ ಕಾರ್ಯಗಳು ಜಾಗ್ರತೆಯಾಗಲು ಅವಕಾಶವಾಗುತ್ತದೆ ಮತ್ತು ಜನರಿಗೂ ಉಪಯೋಗವಾಗುತ್ತದೆ ಮತ್ತು ಯೋಜನೆಗೆ ತಕ್ಕ ಪ್ರತಿಫಲವೂ ದೊರೆಕಿದಂತಾಗುತ್ತದೆ ಮತ್ತು ಇಂತಹ ಮುಖ್ಯ ಉದ್ದೇಶದಿಂದ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯಪಡಿಸುತ್ತೇನೆ.

ಕೆಲವು ಇನ್‌ವೆಸ್ಟಿಗೇಷನ್ ಸಬ್‌ಡಿವಿಜನ್‌ಗಳೆಂದು ಮಾಡಿ ಕೆಲವಾರು ಪ್ರಾಜೆಕ್ಟುಗಳನ್ನು ನಿರ್ಮಿಸಬೇಕೆಂದು ಯೋಚಿಸಿದ್ದರೂ ಅದರಲ್ಲಿ ಮುಖ್ಯವಾದ ಎಷ್ಟೋ ಪ್ರಾಜೆಕ್ಟುಗಳ ಕೆಲಸವನ್ನೇ ತೆಗೆದುಕೊಂಡಿಲ್ಲ. ನನ್ನ ತಾಲ್ಲೂಕಿನಲ್ಲೇ ಇರುವ ನಾಯಕನಹಟ್ಟಿ ದೊಡ್ಡಕೆರೆ ಫೀಡರು ಛಾನಲ್ಲನ್ನು ಜಿನಿಗೆಹಳ್ಳದಿಂದ ಮಾಡಬೇಕೆಂದು ನಮ್ಮ ಬೇಡಿಕೆ ಬಹಳ ಕಾಲದಿಂದಲೂ ಈ ಅಸೆಂಬ್ಲಿ ಮುಂದೆ ಇದೆ. ಹಿಂದೆ ಇದ್ದ ಅಸೆಂಬ್ಲಿ ಸದಸ್ಯರೂ ಮತ್ತು ಈಗಿರುವ ಸದಸ್ಯರೂ ಕೂಡ ಇದರ ಬಗ್ಗೆ ಒತ್ತಾಯ ಮಾಡುತ್ತಿದ್ದರೂ ಇದುವರೆಗೆ ಈ ಕೆಲಸವನ್ನು ಇನ್ನೂ ತೆಗೆದುಕೊಂಡಿಲ್ಲ. ಇದನ್ನು ತೆಗೆದುಕೊಳ್ಳಬೇಕೆಂದು ತತ್ವಶಃ ಒಪ್ಪಿಕೊಂಡಿದ್ದಾರೆ. ಆದರೆ ಇದರ ಬಗ್ಗೆ ಇಲ್ಲಿಯವರೆಗೂ ಯಾವ ತನಿಖೆ ಕೆಲಸವನ್ನಾಗಲೀ ಅಥವಾ ಬೇರಾವ ಕಾರ್ಯಕ್ರಮವನ್ನಾಗಲೀ ತೆಗೆದುಕೊಂಡಿಲ್ಲ.

(ಶ್ರೀ ಬಿ. ಎಲ್. ಗೌಡ)

ಆದುದರಿಂದ ನಾನು ಸರಕಾರಕ್ಕೆ ಹೇಳುವುದು ಯಾವ ಯಾವ ಭಾಗದಲ್ಲಿ ಯಾವ ಯಾವ ನೀರಾವರೀ ಯೋಜನೆಗಳಾಗಬೇಕು ಅವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಒಂದು ಮಾಸ್ಟರು ಪ್ಲಾನನ್ನು ತಯಾರುಮಾಡಬೇಕು. ಅಂತಹ ಒಂದು ಪಟ್ಟಿಯನ್ನು ಈಗಲಾದರೂ ಬೇಗನೆ ತಯಾರುಮಾಡಿ ಮುಂದಿನ ವರ್ಷಕ್ಕೆ ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಇಲ್ಲಿ ಒತ್ತಾಯ ಮಾಡುತ್ತೇನೆ. ಮುಂದೆ ಈ ಸಭೆಯಲ್ಲಿ ಶರಾವತಿ ಬಗ್ಗೆ ಚರ್ಚೆ ಬರುವಾಗ ನನಗೆ ಅಧ್ಯಕ್ಷರು ಅವಕಾಶಕೊಡುತ್ತಾರೆಂದು ನಂಬುತ್ತೇನೆ. ಈಗ ಇಷ್ಟು ಮಾತನಾಡುವುದಕ್ಕೆ ಅವಕಾಶಮಾಡಿಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **Sri S. S. KOLKEBAIL** (Coondapur).—Mr. Speaker, Sir, I rise to support this demand which has been put forward by the Minister for Public Works. I find that along with the demand the Department has supplied to the Members a Brochure on the Road Development in Mysore State. In that Brochure we have facts and figures which will throw sufficient light as to in which Districts this Government has spent money for the development of the roads. I am sorry to say that the Public Works Department have not spent one Naya paisa in my constituency from 1st November 1956 up to this date. I am saying this particularly with regard to my constituency and in general for the District of South Canara. Of course, it may be seen from the Budget figures that crores of rupees have been spent on projects and roads. Unfortunately, that is not the money from the State funds, but it is a money supplied by the Central Government long before we joined this State. That money has been allotted by the Central Government and roads have been aligned and everything was completed, and thereafter we joined this State. Some Members were saying that in South Canara some crores of rupees are spent. We find that there are distinct divisions in the Central and State funds. This could be found from the Brochure itself. We are paying both to the State and also to the Centre from the State revenue which has been collected from the District. Nothing has been spent for the last so many years for our District, and if you just see Table III of the Brochure, it is said that only seven miles of road has been constructed under the Public Works Department after 1st November 1956 to 31st March 1963 and the money that had been spent has been shown in the Table as 5 crores. But that amount must have been spent by the Central Government. As it now stands, I find that this particular District has been neglected, most probably under the impression that there is one west-coast road passing through that particular district and some crores of rupees have been spent there by the Central Government and hence no development work is necessary in this District. It is a known fact that this District is in the Malnad region and it is also conceded by the Government in the Brochure itself that malnad region has to be specially treated, especially in view of the heavy rainfall. The rain fall here is 250 inches per year and the roads become unpassable during monsoons. Though we have got four Ministers and one Deputy Minister in the Mysore Government representing the malnad region, I find that these malnad districts have been completely neglected and

this particular fact has been voiced by almost all the Members of the malnad region. Even the other day, the Hon'ble Minister for Co-operation said that it is for those people to live without communication in that particular region. But some how we find that whenever we approach the Minister, specially the Minister for P.W.D. he is very courteous. He says: 'yes, I shall do it', 'but I have got no money'. My submission is that enough money can be found if there is only the mind to do it. Especially in the Public Works Department, lots of money are wasted on jeeps, vans, and petrol expenses. If that amount could be conserved, all the roads in the malnad region could have been improved. In my constituency, as I already submitted for the last 10 years,—unfortunately I was elected in 1952 from Bramhavar Constituency and then in 1962 from Coondapur Constituency. I am unfortunate in both these areas. The voters in both the constituency have made one request to me and that is to see that these roads are repaired immediately. I made a promise during my election campaign. During the election campaign, I could not go to voters by using any motor vehicle. I had to walk long distances—60-70 miles, I had to walk from house to house because there is no single motorable road in the 66 villages of Bramhavar and 76 villages of Coondapur constituency. After the election, both myself and Sri Manjayya Setty were taken in procession in bullock cart, because they could not use any motor vehicles because it is impossible to use motor vehicles on these roads. The bridges that are there are in a damaged condition. This fact has been brought to the notice of the Government persistently and consistently. But nothing has been done on the plea that money could not be found for it.

In this connection, I find from the Brochure that Government had found that the present road development in the State is not *uniformly* distributed throughout the Districts. And this is more so, especially in the districts of Bidar, Gulbarga, Raichur and Bellary. They have stated only these four districts. I also request that South Kanara and North Kanara may also be added to this list. Because, they are very backward in regard to communication. There is absolutely no communication at all. In Coondapur and Brahmavar Assembly Constituency areas, from 1st November 1956 nothing has been done; even the existing roads have not been repaired. Even the P.W.D. roads which have been taken over prior to 1st November 1956 have become very bad and no attention is paid to them.

ಶ್ರೀ ಅಂಗಡಿ ಚನ್ನಬಸಪ್ಪ.—ಒಂದಾವರ್ತಿ ಬ್ರಹ್ಮಾವರ ಆಯಿತು. ಅನಂತರ ಕುಂದಾಪುರಕ್ಕೆ ಬಂದಿರಿ.

**Sri S. S. KOLKEBAIL.**—I am going to contest from any constiuency in the Mysore State.

So, in these constituencies, there are some very important roads. And the bridges in those roads are stated to be in a very dangerous condition. Government have also advised the bus-owners to withdraw their buses from the roads because they find that the bridges are damaged and they are in a dangerous condition. I understand that

(SRI S. S. KOLKEBAIL)

permits have been refused to bus-owners. The villagers have to pass through these roads about nearly 52 villages. There are only a few bridges on these roads—one major bridge, 3 medium bridges and two culverts. After all, the cost that may be involved may be not more than 25 lakhs. There is one particular road on which there is only one bridge. If that bridge is repaired, the entire road is complete. But it is not possible for a period of six months during the monsoon and even after the monsoon, people cannot pass through, it is not possible to cover the distance even on foot. When the Hon'ble Minister for Public Works had come to my district, I requested him to visit these particular localities. But that day he had very heavy work and he promised that he would permit a sum of Rs. 50 lakhs at the disposal of South Kanara people and that money can be utilised. So far, it has not been given to South Kanara at all. Even in this Budget, I find not a single pie has been allotted to my constituency, namely, Coondapur and Bramhavar and even now, I don't think there is any chance. I do not want any fresh roads to be laid. At least the existing roads which are unusable during summer and during monsoon months, may be taken up for improvements by the Government. Most of the engineers who are in that district have not even gone to those areas. A number of letters which have been written in this behalf, have been forwarded to the respective Heads of Departments. As soon as we write a letter to the Minister, he sends it to the Secretary, the Secretary to the Under Secretary, the Under Secretary to the Superintendent, the Superintendent to the Clerk in the Branch and from there, it goes to the Head of the Department and it takes such a long time–it takes 2½ months to reach district level. Again, if you write, it takes another 2½ months. This particular fact I am bringing to the notice of the Public Works Minister who keeps a regular file for each Member. I wrote a letter on 27th August 1963 to the Minister and that letter was not replied to by the Head of the Department till December. Then I approached the Hon'ble Minister; he asked his office to remind the Department and in the month of January 1964, I received a reply that it is under consideration. That is how the Department is working. I brought to notice that this particular road is in a dangerous condition, and should there be no enquiry at all? After all these officers are permanent officers and they may have some technical knowledge. But they have absolutely no regard or sympathy for the grievances of the public of the locality. They do not make any report. When bridges in any road are unfit, and when even permits for running buses have been withdrawn, do they think that the people should go there and die there? After all, I am not asking for new roads to be constructed. At least the existing roads could be made good for traffic. If you continue to neglect them, a number of people may die. On account of heavy rainfall, these roads have become unusable.

In other areas we have got 60–70 miles concrete road, but there are not even 2 miles of concrete road especially in areas where there is

heavy rainfall. Even in Coimbatore District where they have a rainfall of about 50 inches, they have constructed concrete roads; but in this particular district where we are having 250 inches of rain, we have not got concrete roads, though they could have made the provision either in the Third Plan or in the Fourth Plan. This area is supplying a lot of mineral things to railways and also exporting them to outside countries. We are supplying iron ore and we are also supplying fish. If our Government is very keen, they could get assistance from the Centre to make these roads concrete, especially on the West Coast, especially in the Malnad region, where there is heavy rainfall. The road even if asphalted becomes completely damaged on occount of heavy rainfall. Before I close, I want to bring to the notice of Government that certain bridges.........

Sri B. D. JATTI.—Why the Hon'ble Member is so serious? Why should he not speak calmly and quietly so that we can follow what he says?

Sri ANGADI CHANNABASAPPA.—On a point of order. Now I am hearing the Hon'ble Member criticising the Government. I believe he is a Member of the Congress Party. Whatever it is, it must be discussed in the party meeting. Whatever transpires between the Minister and the Hon'ble Member should not be brought in here.

Sri S. S. KOLKEBAIL.—I do not want any lecture on parliamentary practice. I was just bringing to the notice of Government through you that three bridges and two culverts are in damaged condition. About the reconstruction or improvement of these bridges I have been writing to the Minister since 1962. But I am told that no provision is made in the Budget for the same. This is an important road connecting the West Coast and the State Highway—Brahmavar-Nannadi Road. Hence I expected the Minister to make some provision to see that these bridges are constructed immediately. There is the other bridge in the area from which two Members of the Congress Party have been returned. They had promised during the election time that if the Congress would come to power, they would see that these bridges were taken up immediately. Some provision was made in the last year's budget, but unfortunately that work was not taken up. This particular matter was also brought to the notice of the Hon'ble Minister. There is Halady-Amasebail Road. That particular reserve forest is infested with tigers, bisons and other wild animals. Many a time I had to face the tiger. Because I could not go in a car, I had to walk through the forest. Amasebail Road passes through this thick forest. These reserve forests yield to the State an income of nearly one crore of rupees. I would request the Public Works Minister to prevail upon Mr. Rachiah to release a portion of the forest so that these roads may be taken up immediately.

Coondapur Port is both in my constituency and also in Baindur constituency. For the development of that Port, Rs. 24 lakhs was provided last year, but that money has not been spent by the port authorities. Nearly, Rs. 18 to 20 lakhs were allowed to lapse and

(SRI S. S. KOLKEBAIL)

when a question was asked, the particular Port Officer reported through the Government that there were no contractors available. This is far from truth. If this Port Officer is not interested in the development of the port, he may be asked to retire and be given pension. All the minor ports for which money was provided, have been taken up. In 1962-63 the money provided has not been spent at all by the port authorities for the development of this port.

MR. SPEAKER.—For the development of ports and navigational aid, a lot of foreign exchange is wanted.

SRI S. S. KOLKEBAIL.—Rs. 24 lakhs was provided in the budget in 1961-62. That money was not spent. Again in 1962-63 the money was provided for this purpose. As a matter of fact, provision has been made for the Coondapur port for the last 3 or 4 years. That is why I brought to the notice of the Government, the inefficiency of the particular Port Officer.

MR. SPEAKER.—But I am told by the Minister for Ports that something extraordinary happened with regard to the Port. No big foreign steamer was calling there at all.

2-30 P.M.

SRI S. S. KOLKEBAIL.—Japanese ships and even Chinese Ships had come and taken iron ore.

About rural communication, in my taluk, Coondapur-Brahmawar constituency, only 10 to 12 miles have been taken up, though work was started in 1959-60.

MR. SPEAKER.—Is the Member aware that other Members are saying that Sri Kolkebail is a great man, but he has somehow become parochial?

SRI S. S. KOLKEBAIL.—My first duty is to the constitution and my second duty is to my constituency. Unless I take care of my constituency, it is not necessary for me to continue here. I must represent their grievances.

SRI G. V. GOWDA.—About 83 miles of rural roads have been completed in Coondapur.

SRI S. S. KOLKEBAIL.—Coondapur taluk consists of two constituencies, Mr. Manjayah Shetty's and mine. He took care of his constituency. He got 70 miles of road whereas in my part of the constituency only 3 miles where taken up. Not a single pie has been spent.

SRI SANJIVANATHA IKALA (Suratkal).—What is the use of these roads without culverts or bridges?

SRI S. S. KOLKEBAIL.—I bring to the notice of Government the urgency of repairing the following roads in Coondapur-Bramhawar constituency:

1. Brahmawar—Jannadi Road.
2. Halady—Amasebail Road
3. Kota—Goliangadi Road

4. Kokarne—Kalthur Road.
5. Kokarne—Pethri—Madi—Kukehalli Road
6. Uppoor—Perdoor road
7. Halady—Kakunje—Vandar Road
8. Bilve—Hengavalli—Rathadi Road
9. Manur—Thagadi Road
10. Hunsemakki—Molahalli—Sowda Road.

These are to be completed.

One important road was done half and because of the Emergency it was stopped and left there. Even the bridge is half-done. I do not know which Department ordered the stoppage. I hope the PWD Minister will find some money to repair and reconstruct these bridges and roads.

ಶ್ರೀ ಕೃಷ್ಣಶೆಟ್ಟಿ.—ಅಧ್ಯಕ್ಷ ಮಹಾಶಯರೇ, ನಾನು ಈ ಪಬ್ಲಿಕ್ ವರ್ಕ್ಸ್ ಖಾತೆಯ ಖೋತಾ ಸೂಚನೆಯ ಬಗ್ಗೆ ಒಂದೆರಡು ವಿಷಯಗಳನ್ನು ತಮ್ಮ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಈಗಾಗಲೇ ಕೆಲವು ವಿಷಯಗಳನ್ನು ಶ್ರೀಮಾರ್ ಕೊಳ್ಕೇಬೈಲ್ ಅವರು ಮಾತನಾಡಿದರು. ಅವರು ಹೇಳಿದ ಮಾತುಗಳನ್ನು ಕೇಳಿ ನನಗಾದರೂ ಕಾಣುವುದು ಏನೆಂದರೆ ಅವರ ಮಾತುಗಳು ಒಂದು ರೀತಿಯ ವಿಂಡೋ ಡ್ರೆಸಿಂಗ್ ಇದ್ದ ಹಾಗೆ ಕಾಣುತ್ತದೆ. ಏತಕ್ಕೆಂದರೆ ಅವರು ಅವರ ಪಾರ್ಟಿ ವಿಷಯದಲ್ಲಿ ಬಹಳ ಶ್ರದ್ಧೆಯಿಂದ ಚೆನ್ನಾಗಿ ನಡೆದುಕೊಳ್ಳುತ್ತಿದ್ದಾರೆ. ಹೀಗಿರುವ ಕಾಲಕ್ಕೆ ಅವರು ಈ ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸಕಾರ್ಯಗಳಿಗೆ ವರ್ಷೇ ವರ್ಷೇ ಸ್ಯಾಂಕ್ಷನ್ ತೆಗೆದುಕೊಂಡು ತಮ್ಮ ಹಿತಕ್ಕಿಂತ ಜನರ ಹಿತ ದೊಡ್ಡದು ಎನ್ನುವಂಥಾ ರೀತಿಯಲ್ಲಿ ಸಾರ್ವಜನಿಕ ಕೆಲಸಗಳನ್ನು ಮಾಡಿಸತಕ್ಕಂಥ ಮನೋಭಾವನೆಯನ್ನು ಇಟ್ಟುಕೊಂಡು ಈ ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸಕಾರ್ಯಗಳು ಆಗುತ್ತಾ ಇದ್ದರೆ, ಇಂಥಾ ಒಂದು ಪರಿಸ್ಥಿತಿ ಒದಗುತ್ತಾ ಇರಲಿಲ್ಲ ಎಂದು ನನ್ನ ಭಾವನೆ. ಈ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಕನ್ನಡದಲ್ಲಿ ಅರ್ಥ ಲೋಕೋಪಯೋಗಿ ಖಾತೆ ಎಂದು. ಇಡೀ ದೇಶದ ಉಪಕಾರಕ್ಕೆ ಒಂದು ಸೇವಾ ದೃಷ್ಟಿಯಿಂದ ಆಗುವ ಒಂದು ಕೆಲಸ ಎಂದು ಇದರ ಮುಖ್ಯ ಅರ್ಥ. ಇದು ರಾಜ್ಯದ ಒಂದು ಜೀವ ನಾಡಿ ಎಂದೂ ರಕ್ತ ಚಲನೆಯಾಗುವ ನಾಡಿ ಎಂದೂ ಹೇಳುತ್ತಾರೆ. ಈ ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಜೀವನಾಡಿಯಲ್ಲಿ ರಕ್ತ ಚಲನೆಯಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಇದರಲ್ಲಿ ವಿಷ ಚಲನೆಯಾಗುತ್ತಿದೆ ಎಂದು. ಇಲಾಖೆಯ ಕೆಲಸಗಳು ಸಾಮಾನ್ಯವಾಗಿ ಕಂಟ್ರಾಕ್ಟ್ ಕೊಡುವ ಪದ್ಧತಿಯಲ್ಲಿ ನಡೆದು ಸಾಧಾರಣವಾಗಿ ಲಂಚರುಷವತ್ತುಗಳಿಗೆ ಮೂಲವಾಗಿ ಇದರಲ್ಲಿ ಹೆಚ್ಚಿನ ಒಂದು ಹಣ ಪೋಲಾಗುತ್ತಿದೆ. ಯಾವ ಒಂದು ಕೆಲಸವೂ ಸರಿಯಾಗಿ ಆಗಬೇಕೋ ಅದು ಆಗದೇ ಇದರಿಂದ ಹೆಚ್ಚಿನ ಪ್ರಯೋಜನ ಬರುವ ಬದಲು ದೇಶಕ್ಕೆ ತುಂಬಾ ನಷ್ಟವಾಗುತ್ತಿದೆ. ಲಂಚರುಷವತ್ತುಗಳಿಗೆ ಈ ಪಬ್ಲಿಕ್ ವರ್ಕ್ಸ್ ಇಲಾಖೆ ತೌರುಮನೆಯಾಗಿ ಹೋಗಿ ನೆಲೆಯವೀಡಾಗಿದೆ ಎಂದು ನಾನು ಹೇಳಬಯಸುತ್ತೇನೆ. ಈ ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸಕಾರ್ಯಗಳನ್ನು ಕಟ್ರ್ಯಾಕ್ಟರುಗಳ ಮುಖಾಂತರ ಮಾಡಿಸುವುದು ಸರಿಯಲ್ಲ. ಇದರ ಬದಲು ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಎಂದು ಮಾಡಿ ಅದರ ಮುಖಾಂತರ ಈ ಇಲಾಖೆಯ ಕೆಲಸಕಾರ್ಯಗಳನ್ನು ಮಾಡಿಸಬೇಕೆಂದು ನನ್ನ ಅಭಿಪ್ರಾಯವನ್ನು ಇಡಲಿಕ್ಕೆ ಬಯಸುತ್ತೇನೆ. ನ್ಯಾಷನಲ್ ಹೈವೇಸ್ ವಿಷಯದಲ್ಲಿ ಮದ್ರಾಸು ಮತ್ತು ಕೇರಳದಲ್ಲಿ ಸಾಧಿಸಿರುವಷ್ಟು ಕೆಲಸವನ್ನು ನಮ್ಮ ರಾಜ್ಯದಲ್ಲಿ ಸಾಧಿಸಿಲ್ಲ. ಹೀಗಿರುವಾಗ ನಮ್ಮ ಪ್ರಾಂತದಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಮಾಡಬೇಕಾದ ಕೆಲಸಕಾರ್ಯಗಳಿಗೆ ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಿಲ್ಲ. ಪ್ರತಿ ವರ್ಷವೂ ಹೆಚ್ಚು ಹೆಚ್ಚು ಕೆಲಸಗಳನ್ನು ಮಾಡಬೇಕೆಂದಿರುವಾಗ ಆ ಭಾಗಕ್ಕೆ ಕಡಿಮೆ ಹಣವನ್ನು ಒದಗಿಸಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ರಸ್ತೆಗಳಿಗೋಸ್ಕರ ನಮ್ಮ ಪ್ರಾಂತದ ಮಟ್ಟಿಗೆ ಹೆಚ್ಚಿಗೆ ಹಣವನ್ನು ಇಡದೆ ಬಹಳ ಕಡಿಮೆ ಹಣವನ್ನು ಇಟ್ಟಿದ್ದಾರೆ. ನಾವು ಪ್ರತಿ ವರ್ಷವೂ ಈ ಸಭೆಯಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸಕಾರ್ಯಗಳಿಗೆ ಹೆಚ್ಚು ಹಣವನ್ನು ಒದಗಿಸಬೇಕು, ಹೆಚ್ಚು ಹೆಚ್ಚು ಕೆಲಸಗಳನ್ನು ಮಾಡಿಸಬೇಕೆಂದು ಹೇಳುತ್ತಿದ್ದರೂ ಕೂಡ ಅಲ್ಲಿಗೆ ಕಡಿಮೆ ಹಣವನ್ನು ಒವಗಿಸುವುದಕ್ಕೆ ಕಾರಣವೇನು ? ಇದಕ್ಕೆ ಯಾರು ಜವಾಬ್ದಾರರು ? ಈ ರೀತಿ ಕಡಿಮೆ ಹಣವನ್ನು ಒದಗಿಸುವುದಕ್ಕೆ ಮಂತ್ರಿಮಂಡಲದವರು ಜವಾಬ್ದಾರರೇ ? ಮಾರ್ಗಗಳ ಕೆಲಸ ನಮ್ಮ ದಕ್ಷಿಣ ಕನ್ನಡಜಿಲ್ಲೆಯಲ್ಲಿ ಬಹಳ ಹಿಂದೆಬಿದ್ದಿದೆ. ಈ ರೀತಿ ಅದು ಹಿಂದೆ ಬೀಳುವುದಕ್ಕೆ ಸರ್ಕಾರದವರು ಜವಾಬ್ದಾರರೇ,

(ಶ್ರೀ ಕೃಷ್ಣಶೆಟ್ಟಿ)

ಶ್ರೀಮಾನ್ ಕೊಳ್ಕೆಬೈಲ್ ಅವರು ಕಾರಣರೇ, ಅಥವಾ ಬಾಕಿಯವರು ಕಾರಣರೇ ಎಂದು ನಾನು ಕೇಳಬಯಸುತ್ತೇನೆ.

ಇದರಲ್ಲಿ ರೂರಲ್ ಕಮ್ಯುನಿಕೇಷನ್ ಮಟ್ಟಿಗೆ, ಬಾಕಿ ಕೆಲಸದ ಮಟ್ಟಿಗೆ ನೋಡುವಾಗ ಸ್ವಲ್ಪ ಹಣ ಉಳಿದಿದೆ. ಈ ಹಣದ ಉಳಿದಮಟ್ಟಿಗೆ ಇನ್ನೊಂದು ಸೂಚನೆಯನ್ನು ಇಲ್ಲಿ ಕೊಟ್ಟಿದ್ದಾರೆ. ನಮ್ಮ ಪ್ರಾಂತದಲ್ಲಿ ಶೇಕಡ 1.4 ರಷ್ಟು ಮಾರ್ಗ ಉಂಟು. ರಾಜ್ಯದ ಸರಾಸರಿಯೇ ಕಡಮೆ ಇರುವಾಗ ಹೈದರಾಬಾದು ಕರ್ಣಾಟಕದಲ್ಲಿ ಬಹಳ ಕಡಮೆ ಉಂಟು ಎಂದು ಅಲ್ಲಿ ಜಾಸ್ತಿ ಮಾಡುವ ಅಗತ್ಯ ಉಂಟು ಎಂದು ಹೇಳುತ್ತಾರೆ. ಒಂದು ಕಡೆಯಲ್ಲಿ ಹಣ ಕೊಟ್ಟಿಲ್ಲ, ಇನ್ನೊಂದು ಕಡೆಯಲ್ಲಿ ಕೆಲವು ಕೆಲಸ ಆಗಿಲ್ಲ ಇನ್ನೊಂದು ಕಡೆ ಹೆಚ್ಚು ಹಣ ಖರ್ಚು ಮಾಡುತ್ತಿದ್ದಾರೆ. ಹೀಗಿರುವಾಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಈ ಮಲೆನಾಡು ಜಿಲ್ಲೆಗಳ ಪಾಡು ಏನು? ಅದರ ಮಟ್ಟಿಗೆ ನಾವು ನೋಡತಕ್ಕದ್ದೂ ಸೂಕ್ಷ್ಮವಾಗಿ ವಿಚಾರಿಸತಕ್ಕದ್ದೂ ಅಗತ್ಯವುಂಟು. ಏಕೆಂದರೆ ಹಿಂದುಳಿದ ಪ್ರದೇಶಗಳು ಮುಂದೆ ಬರಬೇಕು. ಆದರೆ ಮಲೆನಾಡು ಪ್ರದೇಶಗಳು ಅಲ್ಲಿಯೇ ನಿಲ್ಲಬೇಕು ಎಂದು ಹೇಳುವುದು ಎಲ್ಲಿಯ ನ್ಯಾಯ ! ದಕ್ಷಿಣ ಕನ್ನಡ ಜಿಲ್ಲೆ ಮುಂದುವರೆದಿದೆ ಎಂದು ಅಲ್ಲಿ ಕೆಲಸ ಕಾರ್ಯಗಳಾಗುವುದಕ್ಕೆ, ಅಡ್ಡಿ ಮಾಡಬಾರದು. ಅಲ್ಲ ಕೆಲವು ಕೆಲಸಗಳಾಗಬೇಕಾಗಿದೆ. ಅದನ್ನು ತೆಗೆದುಕೊಂಡು ಮಾಡದೆ ಹೋದರೆ ದೊಡ್ಡ ಅಡ್ಡಿಯನ್ನು ಸರ್ಕಾರ ಮಾಡಿದ ಹಾಗೆ ಆಗುತ್ತದೆ. ಇಂಥ ಪರಿಸ್ಥಿತಿ ದಕ್ಷಿಣ ಕನ್ನಡ ಜಿಲ್ಲೆಯ ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟ್ ಮಾಡುವ ಕೆಲಸದಮಟ್ಟಿಗೆ ಬಂದಿದೆ. ಸರ್ಕಾರ ಈ ಬಗ್ಗೆ ಹೆಚ್ಚಿನಗಮನವನ್ನು ಕೊಡುವುದು ಅಗತ್ಯವುಂಟು ಎಂದು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹಣ ನಿಜವಾಗಿಯೂ ಇಲ್ಲಿಂದ ಖರ್ಚಾಗುತ್ತಿಲ್ಲ. ಕೇಂದ್ರ ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಕೇಂದ್ರದಲ್ಲಿ ನಮ್ಮ ಪ್ರತಿನಿಧಿಗಳು ಬಹಳ ಕೆಲಸಮಾಡಿ ಈ ವಿಚಾರದಲ್ಲಿ ಹೆಚ್ಚು ನಿಧಿಯನ್ನು ಒದಗಿಸುತ್ತಿದ್ದಾರೆ. ಆದರೆ ನಮ್ಮ ಸರ್ಕಾರ ಒಳ್ಳೆಯ ರೀತಿಯಲ್ಲಿ ಸಹಾಯ ಮಾಡುತ್ತಿಲ್ಲ. ಈಗ ದಕ್ಷಿಣ ಕನ್ನಡ ಜಿಲ್ಲೆಗೆ ಕೇಂದ್ರದಿಂದ ಸಹಾಯ ಬಂದು ಹೆಚ್ಚಿನ ಪ್ರಯೋಜನ ಸಿಕ್ಕಿದ್ದರೆ ಆ ಪ್ರಯೋಜನವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಲು ಸರ್ಕಾರ ಪ್ರಯತ್ನ ಮಾಡುವುದಿಲ್ಲ. ಇದು ಶ್ರೀ ಕೊಳ್ಕೆಬೈಲ್ ಮತ್ತು ಬಾಕಿ ಕೆಲವು ಕಾಂಗ್ರೆಸ್ ಪ್ರತಿನಿಧಿಗಳ ಪ್ರಭಾವಕ್ಕೆ ಒಳಪಟ್ಟು ಆ ಕೆಲಸವನ್ನು ಸರಿಯಾಗಿ ಮಾಡುವುದಿಲ್ಲ. ನಮ್ಮ ಜಿಲ್ಲೆಯ ಕೆಲವು ಜನ ಶಾಸನ ಸಭಾ ಸದಸ್ಯರು ಕಂಟ್ರಾಕ್ಟರುಗಳ ಜೀಪಿನಲ್ಲಿ ಓಡಾಡುತ್ತಾರೆ...

**Mr. SPEAKER.**—There need not be any personal allegations.

**Sri A. KRISHNA SETTY.**—Alright, Sir.

ಆದುದರಿಂದ ಈ ರೀತಿ ಒಂದು ಕೆಲಸದ ಮಟ್ಟಿಗೆ ಇದೆ. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ವೆಸ್ಟ್ ಕೋಸ್ಟ್ ಮಾರ್ಗವನ್ನು ತೆಗೆದುಕೊಳ್ಳೋಣ. ಇದರಲ್ಲಿ ಪಾಲಘಾಟ್‌ನಲ್ಲಿ ಕೇರಳ ಸರ್ಕಾರದವರು ಹಣ ಖರ್ಚು ಮಾಡುತ್ತಿದ್ದಾರೆ? ಅವರು ಹಣ ಖರ್ಚು ಮಾಡುವುದು ಮಾತ್ರ ವಲ್ಲ ಅದರ ಮಟ್ಟಿಗೆ ಸ್ಪೆಸಿಫಿಕೇಷನ್ ಕೊಟ್ಟು ಕೆಲವು ಅಭಿಪ್ರಾಯಗಳನ್ನು ಕೊಡುವುದಕ್ಕೆ ಸಾಧ್ಯ ವಾಗಿದೆ. ಇಲ್ಲಿ ನಾವು ಕೇಂದ್ರ ಸರ್ಕಾರದವರು ಕೊಟ್ಟ ಹಣವನ್ನು ಖರ್ಚು ಮಾಡುತ್ತೇವೆ. ಒಂದು ಹೊತ್ತಿಗೆ ಯಾವ ರೀತಿಯಲ್ಲಿ ತಮಗೆ ತರಬೇಕು ಎಂದು ಅಭಿಪ್ರಾಯವಿತ್ತೋ ಆ ರೀತಿ ತರುವುದಕ್ಕೆ ಸಫಲವಾಗಲಿಲ್ಲ. ಇದಕ್ಕೆ ಕಾರಣವೇನು ? ಈ ದೊಡ್ಡ ಮಾರ್ಗದಲ್ಲಿ ಮರೋಡಿ ಹತ್ತಿರ ಈ ಮಾರ್ಗ 52 ಅಡಿ ಎತ್ತರ ಇದೆ, ಕದರಿ 'ಬಿ' ಗ್ರಾಮದ ಹತ್ತಿರ 48 ಅಡಿ ಎತ್ತರವಿದೆ. ಅಷ್ಟು ಎತ್ತರ ಇರು ವುದಕ್ಕೆ ರ್‍ಯಾಂಪ್ ಕೂಡ ಹಾಕಿಲ್ಲ. ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿರಲಿಲ್ಲವೇ ? ಇದಕ್ಕೆ ಎಷ್ಟು ಮಣ್ಣು ಬೇಕು, ಎಷ್ಟು ಸ್ಥಳದಲ್ಲಿ ತೆಗೆಯಬೇಕು ? ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿರಲಿಲ್ಲವೇ ಎಂದು ಕೇಳುತ್ತೇನೆ. ಕೆಲವು ಕಡೆಗಳಲ್ಲಿ ಬೆಸ್ಟ್ ಅಪ್ ಏರಿಯಾಎಂದು ತೆಗೆದುಕೊಳ್ಳುತ್ತಾರೆ. ಇದನ್ನು ಯಾರು ತೀರ್ಮಾನ ಮಾಡಬೇಕು ? ಯಾರಿಗೂ ಅನುಕೂಲವಾಗಿಲ್ಲ ಎಂದು ಕೆಳಗಿನ ಜಾಗ ವನ್ನು ಬಿಟ್ಟು ಈ ರೀತಿ ಮಾಡುತ್ತಿದ್ದಾರೆ. ಇದಕ್ಕೆ ಸರಿಯಾದ ಏರ್ಪಾಡನ್ನು ಮಾಡಬೇಕಾಗಿತ್ತು. ಆ ಪ್ರಕಾರ ಕೆಲಸ ಮಾಡುತ್ತಿಲ್ಲವಾದ್ದರಿಂದ ಸರ್ಕಾರದ ತೀರ್ಮಾನ ಸಫಲವಾಗಲಿಲ್ಲ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕೈದು ತಿಂಗಳ ಕಾಲ ಮಾತ್ರ ಕೆಲಸ ನಡೆಯುತ್ತದೆ, ಬೇರೆ ಸಮಯದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಮೇ ತಿಂಗಳಿನಿಂದ ಅಕ್ಟೋಬರ್ ತಿಂಗಳವರೆಗೆ ಯಾವ ಕೆಲಸವನ್ನೂ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಮಳೆಗಾಲದಲ್ಲಿ ಕೂಡ ಕೆಲವು ಸಲ ಯಾರಾದರೂ ಮಂತ್ರಿಗಳು ಬರುತ್ತಾರೆಂದರೆ ಮಣ್ಣು ಹಾಕುವುದುಂಟು. ಇದನ್ನು ನಿಲ್ಲಿಸುವುದು ಅಗತ್ಯವುಂಟೋ ಇಲ್ಲವೋ ಎಂದು ನೋಡಬೇಕು.

ನಮ್ಮ ಜಿಲ್ಲೆಯ ಮಟ್ಟಿಗೆ ಹೆಚ್ಚಿನ ಮಾರ್ಗಗಳ ಅಗತ್ಯವುಂಟು. ಈಗ ಮಾನ್ಯ ಜಿ. ವಿ. ಗೌಡರು ಹೇಳಿದರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲ ಮಾರ್ಗಗಳೂ ಮುಗಿದಿವೆ ಎಂದು. ಲೆಕ್ಕದ ಪ್ರಕಾರ ಮುಗಿದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿಗೂ ರಾಜ್ಯದ ಬೇರೆ ಜಿಲ್ಲೆಯ ಪರಿಸ್ಥಿತಿಗೂ ವ್ಯತ್ಯಾಸ ಇದೆ. ಅಲ್ಲಿ ಮಳೆ ಸಾಧಾರಣವಾಗಿ 250 ಇಂಚುಗಳಿಗೆ ಮೇಲ್ಪಟ್ಟು ಬೀಳುತ್ತದೆ. ಹಾಗೆಯೇ ಅಲ್ಲಿನ ಬಯಲು ಸೀಮೆಯಲ್ಲಿ 140 ಇಂಚು ಮಳೆ ಬರುತ್ತದೆ. ಇಲ್ಲ ಜನ ಹೊಲಗಳಿಗೆ, ಗದ್ದೆಗಳಿಗೆ ಹೋಗು ವುದಕ್ಕೆ ಸಾಧ್ಯವಿಲ್ಲ. ಒಂದು ಕಡೆ ಮಲೆನಾಡು ಪ್ರದೇಶ, ಒಂದು ಕಡೆ ಬಯಲು ಪ್ರದೇಶ, ಇನ್ನೊಂದು ಕಡೆ ಕರಾವಳಿ ಪ್ರದೇಶ ಇದೆ. ಮಲೆನಾಡು ಪ್ರದೇಶದಲ್ಲಿ ಐದಾರು ತಿಂಗಳು ಮಳೆ ಸುರಿಯುವುದ ರಿಂದ ರಸ್ತೆಗಳು ಬೇಗ ಕೆಟ್ಟು ಹೋಗುತ್ತವೆ. ರೂರಲ್ ಕಮ್ಯುನಿಕೇಷನ್ ತೆಗೆದುಕೊಂಡರೆ, ಆ ಜಿಲ್ಲೆಯ ಮಟ್ಟಿಗೆ ಸಮಾಧಾನವಾಗುವುದಿಲ್ಲ. ಈಗ ಕೇವಲ 50 ಮೈಲಿ ಇರುವ ರಸ್ತೆಯನ್ನು ಹೆಚ್ಚಿಗೆ ಮಾಡಬೇಕು. ಸಾಧಾರಣ 80 ಮೈಲಿಗಾದರೂ ಆ ಮಾರ್ಗಗಳನ್ನು ತೆಗೆದುಕೊಂಡು ಹೋಗುವ ಅಗತ್ಯವುಂಟು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಅದೇ ಹೊತ್ತಿಗೆ ಪುತ್ತೂರು, ಬೆಳ್ತಂಗಡಿ ತಾಲ್ಲೂಕುಗಳಲ್ಲಿ, ಘಟ್ಟಗಳ ಭಾಗಗಳಲ್ಲಿ ನೂರು ಮೈಲಿಯಾದರೂ ರಸ್ತೆ ಆಗಬೇಕು. ಇದಕ್ಕೆ ನಾನು ಒಂದು ಸೂಚನೆಯನ್ನು ಕೂಡ ಇಡಲಿಕ್ಕೆ ಬಯಸುತ್ತೇನೆ. ಬಯಲು ಪ್ರದೇಶದ ಜಿಲ್ಲೆಗಳಲ್ಲಿ ಮಾಡುವಂತೆ ನಮ್ಮ ಜಿಲ್ಲೆಯಲ್ಲಿ ಮಾಡಿದರೆ ಸಾಲದು. ಅದನ್ನು ಜಾಸ್ತಿ ಮಾಡಬೇಕು. ಅಲ್ಲದೆ ಈಗಾಗಲೇ ಮಾಡಿರುವ ರೂರಲ್ ಕಮ್ಯುನಿ ಕೇಶನ್ ಮಾರ್ಗಗಳು ಕೆಲವು ಹಾಗೆಯೇ ಉಳಿದಿವೆ. ಅವುಗಳಿಂದ ಉಪಕಾರ ಆಗುವ ಬದಲು ತೊಂದರೆಯಾಗಿದೆ, ಇದು ಒಂದು ಶಾಪದ ರೀತಿಯಾಗಿ ಬಿದ್ದಿದೆ. ಇವುಗಳಿಗೆ ತಾಯಿ ಯಾರು, ತಂದೆ ಯಾರು, ಹೆತ್ತವರು ಯಾರು, ಅದರ ರಕ್ಷಕರು ಯಾರು ಎನ್ನುವುದು ಗೊತ್ತಿಲ್ಲದೆ ಅನಾಥ ಶಿಶು ವಾಗಿದೆ. ಇದಕ್ಕೆ ರಕ್ಷಣೆ ಕೊಡುವವರು ಯಾರು ? ಸರ್ಕಾರವೇ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ಲೇ, ತಾಲ್ಲೂಕು ಬೋರ್ಡೋ ಅಥವಾ ಪಂಚಾಯಿತಿಯೋ ಯಾರು ಈ ರಸ್ತೆಗಳನ್ನು ನೋಡ ಬೇಕು ಎನ್ನುವುದು ಗೊತ್ತಿಲ್ಲ. ಅಲ್ಲಿ ಮಣ್ಣು ರಾಶಿಯಾಗಿ ಬಿದ್ದಿದೆ, ವಾಹನ ಸಂಚಾರಕ್ಕೆ ಅವಕಾಶ ವಿಲ್ಲದಿರುವ ಸ್ಥಿತಿಗೆ ಬಂದಿದೆ. ಇದರ ಕಡೆಗೆ ಸರ್ಕಾರ ಗಮನ ಕೊಡಬೇಕೆಂದು ಹೇಳಬಯಸುತ್ತೇನೆ.

ಬೆಳವಿ, ಮುನ್ನೂರು ಈ ಎರಡು ಮಾರ್ಗಗಳು ಗದ್ದೆಯಲ್ಲಿ ಸಾಗುತ್ತಿವೆ. ಆದರಿಂದ ಜನರಿಗೆ ಪ್ರಯೋಜನವಾಗುವುದರ ಬದಲು ತೊಂದರೆಯಾಗಿದೆ. ಈ ಸ್ಥಿತಿಯನ್ನು ಬದಲಾಯಿಸಿ ಆ ಮಾರ್ಗ ಗಳನ್ನು ಮುಗಿಸಬೇಕು. ಅದರ ಮಟ್ಟಿಗೆ ಹಣವಿಲ್ಲ ಎಂದು ನೋಡದೆ ಕೆಲಸವನ್ನು ಪ್ರಾರಂಭ ಮಾಡಿ ಬೇಗ ಮುಗಿಸಬೇಕು. ಆದರೆ ಹಾಗೆ ಮಾಡುತ್ತೀರಾ ಎನ್ನುವುದು ಈ ಬಡ್ಜೆಟ್ಟನ್ನು ನೋಡುವುದ ರಿಂದ ಸಂಶಯವಾಗುತ್ತದೆ. ಇದರ ಬಗ್ಗೆ ಭರವಸೆಯನ್ನು ಕೊಡುವುದು ಅಗತ್ಯವಿದೆ.

ಇನ್ನೊಂದು ವಿಷಯವನ್ನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅದು ಬಂದರುಗಳ ವಿಚಾರ. ಪಣಂಬೂರು ವಿಷಯ ಸ್ವಲ್ಪ ಮಟ್ಟಿಗೆ ಹೇಳುತ್ತೇನೆ. ಅಲ್ಲಿಂದ ಜನಗಳು ಸ್ಥಳ ಬಿಡುವ ಒಂದು ಪ್ರಶ್ನೆ ಇದೆ.

ಅವರಿಗೆ ಪುನರ್ನಿವೇಶನ ಕಲ್ಪನೆ ಮಾಡಬೇಕು. ಮಾಡಿದ್ದೇವೆ, ಮಾಜಿ ಮಂತ್ರಿಗಳ ಮನೆಗೆ ಹೋಗುವ ಮಾರ್ಗದಲ್ಲಿ ಬಹಳ ಚೆನ್ನಾಗಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಈಗ ಮೊದಲ ಗಿಂತ ಭಿಕ್ಷುಕರು ಹೆಚ್ಚಾಗಿ ಮಾರ್ಗದಲ್ಲೇ ಮಲಗುವವರಿದ್ದಾರೆ. ಹೀಗಾಗಿದೆಯೆಂದು ಹೇಳಿದ್ದೇನೆ. ಸ್ಥಿತಿ ಹೀಗಾಗಬಾರದು. ಅವರನ್ನು ಒಳ್ಳೆಯ ರೀತಿಯಲ್ಲಿ ಪುನರ್ನಿವೇಶನ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಪರಿಹಾರ ಕೊಡಬೇಕಾದವರಿಗೆ ಹೆಚ್ಚಿನ ಪರಿಹಾರಕೊಟ್ಟು ಸಹಾಯಮಾಡಬೇಕು. ಅವರು ಈ ಯಾವ ಕಸಬನ್ನು ಅನುಸರಿಸುತ್ತಿದ್ದಾರೋ ಅದನ್ನು ಅನುಸರಿಸಲು ಅಲ್ಲಿ ಏರ್ಪಾಡು ಮಾಡಿ ಅವರು ಮುಂಚಿಗಿಂತ ಉತ್ತಮವಾಗಿ ಜೀವನ ನಡೆಸುವುದಕ್ಕೆ ಸಾಧ್ಯವಾಗುವಂತೆ ಮಾಡ ಬೇಕು.

ಇನ್ನು ಸಣ್ಣ ಬಂದರುಗಳ ಅಭಿವೃದ್ಧಿಯ ಬಗ್ಗೆ ಎರಡು ಮಾತು ಹೇಳುತ್ತೇನೆ. ಸಣ್ಣ ಬಂದರು ಗಳನ್ನು ಮಾಡಬೇಕು. ಮಂಗಳೂರು ದೊಡ್ಡ ಬಂದರು, ಅದು ಆಗಬೇಕಾದರೆ ಕೆಲವು ಸಮಯ ಬೇಕಾಗುತ್ತದೆ ; ಸಣ್ಣ ಬಂದರಿನ ಸಂಬಂಧವಾಗಿ ಮೀನುಗಾರಿಕೆ ಅಭಿವೃದ್ಧಿಯ ಪ್ರಶ್ನೆಯೂ ಬರು ತ್ತದೆ. ಆಮದು ರಫ್ತಿಗೂ ಸಹಾಯಕವಾಗಿರುವ ಕುಂದಾಪುರ ಬಂದರನ್ನು ಅಭಿವೃದ್ಧಿಮಾಡುವುದಕ್ಕೆ ಬೇಕಾದ ಆಸಕ್ತಿಯನ್ನು ಸರಕಾರ ವಹಿಸಲಿಲ್ಲ. ಈಗಲಾದರೂ ವಹಿಸಬೇಕು. ಇದಕ್ಕೆ ಬೇಕಾದ ಸಹಾಯವನ್ನು ಕೇಂದ್ರ ಸರಕಾರದಿಂದಲಾದರೂ ಪಡೆದು ಇದನ್ನು ಮಾಡಬೇಕು. ಬಂದರುಗಳನ್ನು ಮಾತ್ರ ಮಾಡಿದರೂ ಸಾಲದು ; ಅವುಗಳಿಗೆ ಬೇಕಾದ ಮಾರ್ಗಗಳನ್ನೂ ಮಲೆನಾಡು ಪ್ರದೇಶಗಳ ಮೂಲಕ ಮಾಡಬೇಕು. ಫಾರೆಸ್ಟಿನಿಂದ ಮರಗಳನ್ನು ತರುವುದಕ್ಕೆ ಹತ್ತು ಹನ್ನೆರಡು ಮೈಲು ಮಾರ್ಗಗಳನ್ನು ಅರ್ಧಲಕ್ಷ ರೂಪಾಯಿವರೆಗೆ ಖರ್ಚುಮಾಡಿ ಮಾಡುವುದುಂಟು. ನಾನು ಹೇಳುವುದು, ಸರಕಾರ ಬಂದರುಗಳನ್ನು ಅಭಿವೃದ್ಧಿಮಾಡುವ ಹೊತ್ತಿಗೆ ಇತರ ವಹಿವಾಟುಗಳನ್ನು ಮಾಡುವ ಹಾಗೆ

(SRI A. KRISHNA SETTY)

ಫಾರೆಸ್ಟ್ ಇಲಾಖೆಯೊಡನೆ ಸಮಾಲೋಚನೆಮಾಡಿ ಅವರ ಅಭಿಪ್ರಾಯವನ್ನು ಪಡೆದು ಈ ಮಾರ್ಗಗಳನ್ನು ಮಾಡಬೇಕು. ಇವುಗಳಿಂದ ಹೆಚ್ಚು ಉಪಯೋಗವಾಗುತ್ತದೆ. ಈ ಮಾರ್ಗಗಳು ಘಟ್ಟಗಳಲ್ಲಿ ಆಗಬೇಕು. ಬಂದರುಗಳನ್ನು ಮಾಡುವಂತೆ ಈ ಮಾರ್ಗಗಳನ್ನೂ ಮಾಡಬೇಕು. ಬಂದರುಗಳಾಗುವ ಹೊತ್ತಿಗೆ ಮಲೆನಾಡಿನ ಈ ಮಾರ್ಗಗಳೂ ಆಗಬೇಕು.

ಈ ಸಂದರ್ಭದಲ್ಲಿ ಇನೊಂದು ವಿಷಯ ಹೇಳಬೇಕಾಗಿದೆ. ಸರಕಾರಕ್ಕೆ ನಾವು ಕಾಗದ ಬರೆದರೆ ಮಂತ್ರಿಗಳಿಂದ ಬೇಗ ಉತ್ತರ ಬರುತ್ತದೆ. ಇದಕ್ಕಾಗಿ ಅಭಿನಂದಿಸಬೇಕಾಗಿದೆ. ಆದರೆ ಆ ಕಾಗದಗಳು ಎರಡು ಮಾತುಗಳಲ್ಲಿ ಮುಗಿಯುತ್ತವೆ. 'The matter will be considered,' 'It will be immediately looked into' ಎಂದಿರುತ್ತದೆ. ಹೀಗೆ ಹೇಳುವುದು ಸುಲಭ. ಆದರೆ ನಮಗೆ ಬೇಕಾದ ವಿಷಯದಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಹೇಳಿದರೆ ಜನರಿಗೆ ಅನುಕೂಲವಾಗುತ್ತದೆ. ಉದಾಹರಣೆಗೆ ಕೋಲಾರ, ಬಂಡೀಪುರ ಮತ್ತು ಬೆಳಗಾಮ್‌ಗಳಲ್ಲಿ ಗೇಟುಗಳಿವೆ, ಹಾಗೆಯೇ ಕೇರಳದಿಂದ ನಮ್ಮ ರಾಜ್ಯಕ್ಕೆ ಪ್ರವೇಶ ಮಾಡುವಾಗ ಗೇಟ್ ಮಾಡಬೇಕೆಂದು ಹೇಳಿದೆ. ಇದುವರೆಗೆ ಏನೂ ಮಾಡಿಲ್ಲ. ಮಾಮೂಲಿನಂತೆ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇದು ಸಾಲದು. ಏನು ಕೆಲಸ ನಡೆಯಿತು, ನಿಮ್ಮ ಅಭಿಪ್ರಾಯವೇನು ಎನ್ನುವುದನ್ನು ತಿಳಿಸಬೇಕು. ನಮ್ಮ ಕ್ಷೇತ್ರವಾದ ಕೋಟೆಕಾರ್‌ನ ಜನರು ಅಭಿಪ್ರಾಯವನ್ನು ಕೊಟ್ಟರು, ಆ ಬಗ್ಗೆ ಏನು ಮಾಡಿದ್ದಾರೆಂಬುದನ್ನು ತಿಳಿಸುವ ಜವಾಬ್ದಾರಿ ಇದೆ. ಜನತೆಯ ಅಭಿಪ್ರಾಯವನ್ನು ನಾನು ತಿಳಿಸಿದ್ದೇನೆ. ಆದಕಾರಣ ನಾವು ಅಲ್ಲಿ ಏನು ಹೇಳುತ್ತೇವೆಯೋ ಅದನ್ನು ಸರಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ಅಲ್ಲಿ ನಮ್ಮ ಭಾಗಕ್ಕೆ ಸರಕಾರ ಕೊಡುವ ಹಣ ಕಡಮೆ, ಮಾಡಬೇಕಾಗಿರುವ ಕೆಲಸ ಹೆಚ್ಚಾಗಿದೆ. ಅಲ್ಲದೆ ಹಣ ಪೋಲಾಗುತ್ತಿದೆ. ಕಂಟ್ರಾಕ್ಟರುಗಳನ್ನು ನೇಮಕ ಮಾಡುವ ಪದ್ಧತಿಯನ್ನು ರದ್ದು ಮಾಡಬೇಕು. ನೂರಕ್ಕೆ ಹತ್ತು ರೂಪಾಯಿ ಒಂದು ರೀತಿಯಲ್ಲಿ, ಹದಿನೈದು ರೂಪಾಯಿ ಇನ್ನೊಂದು ರೀತಿಯಲ್ಲಿ ಕಂಟ್ರಾಕ್ಟರುಗಳ ಮೂಲಕ ಹೋಗುವುದನ್ನು ಉಳಿಸುವುದಕ್ಕೆ ಸಾಧ್ಯವಿದೆ. ಸರಕಾರ ಹೀಗೆ ಮಾಡಿ ಶೇಕಡ 25 ರಷ್ಟು ಹಣವನ್ನುಳಿಸಿದರೆ ಜನರಮೇಲೆ ಹಾಕುವ ತೆರಿಗೆಯನ್ನು ಕೂಡ ಕಡಮೆ ಮಾಡಬಹುದು. ಕಂಟ್ರಾಕ್ಟರ ಲಾಭ; ಬೇರೆ ರೀತಿಯಲ್ಲಿ ಹೋಗುವ ಭಾಗ ಹತ್ತರಷ್ಟು, ಒಟ್ಟು 25 ರಷ್ಟು ಉಳಿಸುವುದಕ್ಕೆ ಸಾಧ್ಯವುಂಟು. ಸರಕಾರ ಈ ಶಾಖೆಗೆ ಖರ್ಚು ಮಾಡುವುದರಲ್ಲಿ ಎಂಟು ಕೋಟಿ ರೂಪಾಯಿಗಳನ್ನು ಉಳಿಸುವುದಕ್ಕೆ ಸಾಧ್ಯವಿದೆ, ಹೀಗೆ ಮಾಡುವುದು ಅಗತ್ಯ. ಅಲ್ಲದೆ ಕಂಟ್ರಾಕ್ಟರುಗಳು, ಇಂಜಿನಿಯರು, ಸಬ್ ಇಂಜಿನಿಯರ್ ಮತ್ತು ಸೂಪರ್‌ವೈಜರುಗಳ ಮೇಲೆ ಅಧಿಕಾರ ನಡೆಸುತ್ತಾರೆ. ಇನ್ನು ಮುಂದಾದರೂ ಇದು ತಪ್ಪಬೇಕು. ಕಂಟ್ರಾಕ್ಟರುಗಳು ತಮಗೆ ಬೇಡವಾದ ಅಧಿಕಾರಿಗಳನ್ನು ವರ್ಗ ಮಾಡಿಸುತ್ತಾರೆ. ಸರಕಾರದಲ್ಲಿ ಅವರ ಪ್ರಭಾವವಿದೆ. ಇದಕ್ಕೆ ದೊಡ್ಡ ಇಂಜಿನಿಯರು ಕೂಡ ಕುಮ್ಮಕ್ ಕೊಡುತ್ತಾರೆ. ಇದು ಸರಿಯಲ್ಲ. ಹಿಂದಿನಿಂದ ಮೈಸೂರು ರಾಜ್ಯದಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಒಂದು ವಿಶಿಷ್ಟ ಸ್ಥಾನವಿದೆ. ವಿಶ್ವೇಶ್ವರಯ್ಯನವರ ಪಾರಂಪರ್ಯವಿದೆ. ಇದಕ್ಕೆ ಕುಂದು ತರಬಾರದು. ಈಗಲೂ ಕೂಡ ಈ ಇಲಾಖೆಯಲ್ಲಿ ನಡೆಯುವ ಕೆಲಸ ದಕ್ಷತೆಯಿಂದ ನಡೆಯಬೇಕು. ಲಂಚರುಷುವತ್ತುಗಳನ್ನು ಈ ಇಲಾಖೆಯಿಂದ ತೆಗೆಯಬೇಕು. ನಮ್ಮ ಜಿಲ್ಲೆಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕು. ಎಲ್ಲಕ್ಕೂ ಕೇಂದ್ರ ಸರಕಾರವನ್ನು ನೋಡಿಕೊಂಡು ಕುಳಿತುಕೊಳ್ಳುವುದು ಒಳ್ಳೆಯದಲ್ಲ, ನಮ್ಮ ರಾಜ್ಯ ಸರಕಾರವೂ ಪ್ರಯತ್ನಮಾಡಿ ಕೆಲಸ ಮಾಡಬೇಕು. ಬಂದರು ಮಾರ್ಗಗಳ ಅಭಿವೃದ್ಧಿ ಜಾಗ್ರತೆ ಆಗಲು ಹೆಚ್ಚಿನ ಸಹಾಯ ಮಾಡಬೇಕೆಂದು ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಮಾನ್ಯ ಸಭಾಪತಿಗಳೆ, ಲೋಕೋಪಯೋಗಿ ಶಾಖೆಗೆ ಸಂಬಂಧಪಟ್ಟಹಾಗೆ ಮಂತ್ರಿಗಳು ಸಭೆಯಲ್ಲಿ ಮಂಡಿಸಿರುವ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

[SRI S. M. GURADDI (CHAIRMAN) in the Chair].

ಇದು ಅತಿ ಮುಖ್ಯವಾದ ಶಾಖೆ. ಈಹೊತ್ತು ರಾಜ್ಯದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಜನತೆ ಸುಖವಾಗಿರುವಂತಾಗಿರುವುದಕ್ಕೆ ಕಾರಣವಾಗಿರುವುದು ಈ ಇಲಾಖೆ. ಈ ಇಲಾಖೆ ಒಳ್ಳೆಯ ಕೆಲಸ ಮಾಡಿಕೊಂಡು ಬರುತ್ತಿದೆ. ಮಾನ್ಯ ಸದಸ್ಯರನೇಕರು ರಾಜ್ಯದಲ್ಲಿ, ಹಳೆಯ ಮೈಸೂರು ಭಾಗದಲ್ಲಿ ಕೆಲಸಗಳೇನೂ ಆಗಿಲ್ಲ ಮುಂತಾಗಿ ಇನ್ನೂ ಅನೇಕ ಟೀಕೆಗಳನ್ನು ಮಾಡಿದರು. ಸಾಕಷ್ಟು ಕೆಲಸಗಳಾಗಿವೆ, ಇನ್ನೂ ಆಗಬೇಕಾಗಿದೆ ಎಂದು ನಾನಾದರೂ ಹೇಳುತ್ತೇನೆ. ಅನೇಕ

ರಸ್ತೆಗಳನ್ನು ಮಾಡಿದ್ದಾರೆ ; ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿದ್ದಾರೆ ; ಇದಕ್ಕೆ ನಾವು ಕುಳಿತು ಕೊಂಡಿರುವ ವಿಧಾನಸೌಧವೇ ಸಾಕ್ಷಿ. ಈಗಾಗಿರುವುದನ್ನು ತಿಳಿದುಕೊಂಡು ಇನ್ನೂ ಆಗಬೇಕೆಂದು ಕೇಳುವುದು ಸರಿ, ಆದರೆ ಏನೂ ಆಗಿಲ್ಲವೆಂದು ಹೇಳುವುದು ಸರಿಯಲ್ಲ. ಅನೇಕ ಯೋಜನೆಗಳನ್ನು ಕಾರ್ಯಗತ ಮಾಡಿದ್ದಾರೆ.

3-00 P.M.

ಅನೇಕ ದೊಡ್ಡ ದೊಡ್ಡ ರಸ್ತೆಗಳಾಗಿವೆ. ಇವತ್ತಿನ ದಿವಸ ಪಟ್ಟಣಗಳಲ್ಲಿ ಅನೇಕ ರಸ್ತೆಗಳ ರಚನೆಯ ಕಾರ್ಯ ನಡೆದಿರಬಹುದು. ಗ್ರಾಮಾಂತರ ಪ್ರದೇಶದಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳ ಕಾರ್ಯ ನಡೆದಿರಬಹುದು. ಆದರೆ ಗ್ರಾಮಾಂತರ ಪ್ರದೇಶದ ಜನ ಅಲ್ಲಿಗೆ ಬರುವುದಕ್ಕೆ ಮುಖ್ಯವಾಗಿ ಬೇಕಾಗಿರುವ ರಸ್ತೆಗಳಿಲ್ಲ. ಅತಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿ ಬೇಕಾಗಿರುವುದು ಅಂದರೆ ಒಂದು ರಸ್ತೆ, ಒಂದು ಬಾವಿ, ಒಂದು ಶಾಲೆ. ಇಷ್ಟನ್ನು ಮೂರನೇ ಯೋಜನೆಯೊಳಗಾಗಿ ಸರಕಾರ ಪೂರೈಸಿ ಕೊಡಬೇಕಾಗಿತ್ತು. ಗ್ರಾಮಾಂತರ ಪ್ರದೇಶಕ್ಕಾಗಿ ಒಂದು ಪ್ರತ್ಯೇಕ ಪ್ಲಾನ್ ಮಾಡ ಬೇಕು. ರಸ್ತೆ, ಬಾವಿ, ಶಾಲೆ ಮಾಡಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಬೆಂಗಳೂರು ನಗರಕ್ಕೆ 23 ಕೋಟಿ ರೂಪಾಯಿ ಯೋಜನೆ ಮಾಡಿ ಕಾವೇರಿ ನೀರು ಹರಿಸುವುದಕ್ಕೆ ಯೋಜನೆ ಹಾಕಿಕೊಂಡಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಕ್ಕಾಗಿ ಅಂಥ ಯಾವ ಒಂದು ಯೋಜನೆ ಇಲ್ಲ. ಈ ಪ್ರದೇಶದ ಬಗ್ಗೆ ನಿರ್ಲಕ್ಷ ಮಾಡುತ್ತಿದ್ದಾರೆ. ಈ ರೀತಿ ಆಗಕೂಡದು ಎಂದು ಹೇಳುತ್ತೇನೆ. ಕಾವೇರಿ ನೀರು ಒದಗಿಸುವುದಕ್ಕೆ ಒಂದು ಮಾಸ್ಟರ್ ಪ್ಲಾನ್ ತಯಾರಮಾಡಿ ಕಾರ್ಯಗತ ಮಾಡುವ ಹಾಗೆ ಗ್ರಾಮಾಂತರ ಪ್ರದೇಶಕ್ಕೂ ನೀರು ಒದಗಿಸಬೇಕು. ರೈತ ದೇಶದ ಬೆನ್ನು ಮೂಳೆಯಾಗಿದ್ದಾನೆ. ಅವನ ಕೊಲೆ ಮಾಡಬಾರದು. ಆದುದರಿಂದ ಒಂದು ಸರಿಯಾದ ಮಾಸ್ಟರ್ ಪ್ಲಾನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಮೇಜರ್ ಇರಿಗೇಶನ್‌ಕ್ಕೆ ಸಂಬಂಧಪಟ್ಟ ಕೆಲಸವು ಮೇಜರ್ ಇರಿಗೇಶನ್ ಇಲಾಖೆಗೆ ಒಳಪಟ್ಟಿವೆ. ರಸ್ತೆ ರಚನೆ ಕಾರ್ಯವನ್ನು P.W.D. ಇಲಾಖೆ ಅವರಿಗೆ ಕೊಟ್ಟಿದ್ದಾರೆ. ಇದು ಅಷ್ಟು ಸರಿಯಲ್ಲ ಎಂದು ಹೇಳುತ್ತೇನೆ. ಯಾಕಂದರೆ ಇರಿಗೇಶನ್ನಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ಅವರು ನೋಡುವುದು ಒಳ್ಳೆಯದು. ಆದರೆ ರಸ್ತೆ ರಚನೆ ಮುಂತಾದ ಕಾರ್ಯ ಅವರಿಗೆ ವಹಿಸಿ ಕೊಟ್ಟರೆ ಅದು ಸರಿಯಾಗಲಾರದು. ರಸ್ತೆ ಕೆಲಸವನ್ನು ಅವರು ಸರಿಯಾಗಿ ಮಾಡುವುದಿಲ್ಲ. ಅದನ್ನು ಪ್ರತ್ಯೇಕವಾಗಿ ಇನ್ನೊಂದು ವಿಭಾಗದವರು ನೋಡಿಕೊಳ್ಳಬೇಕು. ಇದನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಮೇಜರ್ ಇರಿಗೇಶನ್ನಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ಆ ಇಲಾಖೆಯವರೇ ಇಟ್ಟುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ನನ್ನ ಕ್ಷೇತ್ರವಾದ ಭದ್ರಾವತಿ ತಾಲ್ಲೂಕಿನಲ್ಲಿ B.H. ರೋಡ್-ತರಿಕೆರೆ ರೋಡ್‌ನಿಂದ ಉಬ್ರಾಣಿ ಹೋಬಳಿಗೆ 21 ಮೈಲಿ ಸ್ಟೇಟ್ ಫಂಡ ರೋಡ ನಾಲ್ಕಾರು ವರ್ಷಗಳ ಹಿಂದೆ ತೆಗೆದುಕೊಂಡು ಮಾಡಿದೆ. ಈಗ ಅದನ್ನು ಪೂರ್ತಿ ಕೆಲಸ ಮಾಡಲು ಹಣ ಒದಗಿಸಿಲ್ಲ. ಅಲ್ಲಿ ಸಂಚಾರ ವ್ಯವಸ್ಥೆಗೆ ಅನುಕೂಲ ಮಾಡಿಕೊಟ್ಟರೆ ಸರಕಾರಕ್ಕೆ ಯಥೇಚ್ಛವಾಗಿ ಟ್ಯಾಕ್ಸ್ ಬರುತ್ತದೆ. ಆದರೆ ರಸ್ತೆ ದುರಸ್ತಿಯಾಗಿಲ್ಲ. ಆದುದರಿಂದ ಸಾಕಷ್ಟು ಹಣ ಒದಗಿಸಿ ರಸ್ತೆ ದುರಸ್ತಿ ಮಾಡಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಚಾರ ತಿಳಿಸಲು ಬಯಸುತ್ತೇನೆ. ಭದ್ರಾ ಯೋಜನೆಯಲ್ಲಿ ಸಿಬ್ಬಂದಿಗೆ ಬೇಕಾಗಿರತಕ್ಕಂಥ ಅನೇಕ ಕಟ್ಟಡಗಳನ್ನು ಕಟ್ಟಿದ್ದಾರೆ. ಈಗ ಈ ಪ್ರಾಜೆಕ್ಟಿನ ಕೆಲಸ ಪೂರೈಸುತ್ತಾ ಬಂದಿದೆ. ಈ ಡಿವಿಜನ್ ಬೇರೆ ಕಡೆ ವರ್ಗ ಮಾಡತಕ್ಕದ್ದು ಇದೆ. ಅಲ್ಲಿ ಕೆಲವು ಸಣ್ಣ ಸಣ್ಣ ಮನೆಗಳಿವೆ, ದೊಡ್ಡ ದೊಡ್ಡ ಮನೆಗಳು ಇವೆ. ಕೆಲವು ಪಾಳು ಬಿದ್ದು ಹಾಳಾಗುತ್ತವೆ. ದಯವಿಟ್ಟು ಈ ಮನೆ ಗಳನ್ನು ಅಲ್ಲಿಯ ಪಂಚಾಯತಿಯವರಿಗೆ ವಹಿಸಿ ಕೊಡಬೇಕು. ಈ ಮನೆ ಕಟ್ಟುವುದಕ್ಕೆ ವೆಚ್ಚ ಮಾಡಿರುವ ಹಣದಲ್ಲಿ ಡೆಪ್ರಿಸಿಯೇಶನ್ ಕಳೆದು ಬೆಲೆ ನಿಗದಿ ಮಾಡಬೇಕು. ಅಲ್ಲಿ ಒಂದು ನ್ಯಾಷನಲ್ ಹೈಸ್ಕೂಲು ಇದೆ. ಒಂದು ಜನರಲ್ ಹಾಸ್ಟೆಲ್ ಮಾಡಬೇಕೆಂಬ ಯೋಜನೆ ಇದೆ. ಅವರಿಗೆ ಈ ಬಿಲ್ಡಿಂಗ್‌ಗಳನ್ನು ವಹಿಸಿಕೊಟ್ಟರೆ ಬಹಳ ಅನುಕೂಲವಾಗುವುದು. ಆದುದರಿಂದ ಸರಕಾರ ಇದಕ್ಕೆ ಗಮನ ಕೊಟ್ಟು ಪಂಚಾಯತಿಗೂ ನ್ಯಾಷನಲ್ ಎಜ್ಯುಕೇಶನ್ ಸ್ಕೂಲ್ ಅವರಿಗೂ ಈ ಕಟ್ಟಡಗಳನ್ನು ವಹಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ.

ಇನ್ನೊಂದು ವಿಚಾರ ಸರಕಾರದ ಗಮನಕ್ಕೆ ತರುತ್ತೇನೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಉಂಬಳಿ ರಸ್ತೆ ಪಕ್ಕದಲ್ಲಿ ಇಲೆಕ್ಟ್ರಿಸಿಟಿ ರಿಸೀವಿಂಗ್ ಸ್ಟೇಶನ್ ಕಟ್ಟಿದ್ದಾರೆ. ಇಲಾಖೆಯವರು ಈ ರಸ್ತೆ ಉಪಯೋಗಿಸಿಕೊಂಡಮೇಲೆ ಅಲ್ಲಿ ರಸ್ತೆ ಕೆಲಸ ಸರಿಯಾಗಿ ಮಾಡಿಲ್ಲ. ಈ ರಸ್ತೆ ಕೆಲಸ ಪೂರ್ತಿ

(ಶ್ರೀ ಟಿ. ಡಿ. ದೇವೇಂದ್ರಪ್ಪ)

ತೆಗೆದುಕೊಂಡು ಸರ್ವಿಸ್ ರೋಡ್ ಮಾಡಿಕೊಡಬೇಕೆಂದು ಹೇಳುತ್ತೇನೆ. ಸರಿಯಾಗಿ ರಸ್ತೆ ಇಲ್ಲದ ಮೂಲಕ ನಾಲ್ಕಾರು ಆಕ್ಸಿಡೆಂಟುಗಳು ಆಗಿವೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ಗಮನಕೊಟ್ಟು ವಿಚಾರ ಮಾಡಿ ತಕ್ಷಣ ಈ ಭಾಗದಲ್ಲಿ ರೋಡ್ ಮಾಡಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಸ್ವಾಮಿ, ಕಂಟ್ರಾಕ್ಟು ವಿಷಯದಲ್ಲಿ ಎ ಕ್ಲಾಸು, ಬಿ ಕ್ಲಾಸು, ಸಿ ಕ್ಲಾಸು ಅಂತ ಮಾಡಿದ್ದೀರ. ನನಗೆ ತಿಳಿದಮಟ್ಟಿಗೆ ಎ ಕ್ಲಾಸ್ ಅನ್ನತಕ್ಕಂಥಾದ್ದನ್ನು ತೆಗೆಯಬೇಕು, ಸಡಿಲಪಡಿಸಬೇಕು ಎಂಬ ಒಂದು ವಿಚಾರವನ್ನು ನಿಮ್ಮ ಮುಂದೆ ತರುತ್ತಿದ್ದೇನೆ. ಏಕೆಂದರೆ ಎ ಕ್ಲಾಸಿನ ಕೆಲಸವನ್ನು ತೆಗೆದು ಕೊಳ್ಳುವವರು ಬಂಡವಾಳಶಾಹಿಗಳಾದ್ದರಿಂದ, ಅವರು ಒಂದು ಹೆಚ್ಚಿನ ರೇಟನ್ನು ಹಾಕುವ ಅವಕಾಶವಿದೆ. ಬಿ ಕ್ಲಾಸಿನಲ್ಲಿ ಕೆಲಸ ಮಾಡತಕ್ಕಂಥ ಕೆಲಸಗಾರರಿಗೆ ಎ ಕ್ಲಾಸಿನ ಕೆಲಸವನ್ನು ಕೊಟ್ಟಿದ್ದೆ ಆದರೆ ಅದನ್ನು ಎಷ್ಟೋ ಶ್ರೇಷ್ಠವಾಗಿ ಮಾಡುವವರಿದ್ದಾರೆ. ಅವರಿಗೂ ಕೂಡ ಎ ಕ್ಲಾಸಿನ ಅವಕಾಶಕೊಡುವಂತೆ ನೋಡಿಕೊಳ್ಳಬೇಕು. ಈ ಸಲಹೆಯನ್ನು ಪರಿಶೀಲನೆ ಮಾಡ ಬೇಕು. ಎ ಕ್ಲಾಸಿನಬಗ್ಗೆ ಇರುವ ನಿಯಮಗಳನ್ನು ಸ್ವಲ್ಪ ಸಡಿಲಪಡಿಸಬೇಕು ಮತ್ತು ಸರಿಪಡಿಸ ಬೇಕು ಅನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ.

ಮೊನ್ನೆ ಮಾನ್ಯ ಸದಸ್ಯರಾದ ಮುಕ್ಕಣ್ಣಪ್ಪನವರು ಹಳೆ ಮೈಸೂರಿನಲ್ಲಿ ಏನೇನೂ ಕೆಲಸಗಳು ಆಗಿಲ್ಲ, ತಿರುಗ ಹೊಸ ರಾಜ್ಯವನ್ನು ಹರಿದು ಹಂಚಬೇಕು ಎಂದು ಮೈಸೂರಿನಬಗ್ಗೆ ಚಿಂತಾಜನಕ ವಾಗಿ ಹೇಳಿದರು. ನಾನಾದರೂ ಅವರಿಗೆ ಸವಲತ್ತು ಹಾಕಿ ಹೇಳುವುದೇನೆಂದರೆ ಇದು ಎಂದಿಗೂ ಆಗದು, ಆಗುವುದಕ್ಕೆ ಬಿಡುವುದಿಲ್ಲ. ಅದು ಅಸಾಧ್ಯ. ಈ ಮೈಸೂರನ್ನು ವಿಶಾಲ ಮೈಸೂರಾಗಿಯೆ ಶತಾಯಗತಾಯ ಉಳಿಸಿಕೊಳ್ಳಲು ಪ್ರಯತ್ನ ಮಾಡುತ್ತೇವೆಂದು ಸ್ಪಷ್ಟಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಬೋಗಳೆ (ಸಂಕೇಶ್ವರ).—ಸ್ವಾಮಿ, ನಾನು ಲೋಕೋಪಯೋಗಿ ಶಾಖೆಯ ಡಿಮ್ಯಾಂಡನ್ನು ಅನುಮೋದಿಸುತ್ತಾ ನನ್ನ ಒಂದೆರಡು ಸಲಹೆಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ನನ್ನ ಏರಿಯಾದಲ್ಲಿ ನಿಡಸೊಶಿ ನಾಲಾ ಕಟ್ಟಿಕೊಡುವ ವಿಚಾರದಲ್ಲಿ ಬಹಳ ಅನ್ಯಾಯವಾಗಿದೆ. ಹರಿಜನ ಮಕ್ಕಳು ಶಾಲೆಗೆ ಹೋಗಬೇಕಾದರೆ ಮಳೆಗಾಲದಲ್ಲಿ 2 ತಿಂಗಳತನಕ ಊರೊಳಗೆ ಹೋಗಗೊಡುವುದಿಲ್ಲ. ಈಗ ರೋಡು ರಸ್ತೆಗಳನ್ನು ಮಾಡುವುದರಲ್ಲಿ ಬಹಳ ಅನ್ಯಾಯ ಆಗಲಿಕ್ಕೆ ಹತ್ತಿದೆ. ನಮ್ಮ ತಾಲ್ಲೂಕಿನೊಳಗೆ ಹರಿಜನರ ಸಲುವಾಗಿ 10 ಸಾವಿರ ರೂಪಾಯಿಗೆ ಪ್ಲಾನು ಎಸ್ಟಿಮೇಟು ಮಾಡಿ 2 ವರ್ಷವಾಯಿತು. ಅದು ನಿಡುಸಸಿಯೊಳಗೆ. ನಾಳೆ ಇಲ್ಲಿತನಕ ಆ ಪ್ಲಾನು, ಎಸ್ಟಿಮೇಟುಗಳು ಬರುತ್ತಿವೆ, ಹಿಂದಕ್ಕೆ ಹೋಗುತ್ತಿವೆ. ನನ್ನ ಕಡೆಯ ಜನರು ಏಕೆ ಹಿಂದಕ್ಕೆ ಮುಂದಕ್ಕೆ ಹೀಗೆ ಅವು ಹೋಗುತ್ತಿವೆ, ಮಂಜೂರಾಗಿದೆಯೊ ಇಲ್ಲವೊ ಎಂದು ಪ್ರಶ್ನೆ ಕೇಳುತ್ತಾರೆ. ಕೇವಲ 10 ಸಾವಿರ ರೂಪಾಯಿನ ಎಸ್ಟಿಮೇಟು ತಿರುಗಿ ಹಿಂದಕ್ಕೆ ಹೋಗುವುದೆಂದರೆ ಬಹಳ ಕಠಿಣವಾಗುತ್ತದೆ. ಎಷ್ಟೋಸಲ ಈ ವಿಚಾರದಲ್ಲಿ ನಾನು ವಿನಂತಿ ಮಾಡಿಕೊಂಡರೂ ಏನೂ ಆಗಿಲ್ಲ. ತಾವು ಈ ಪ್ಲಾನು ಎಸ್ಟಿಮೇಟನ್ನು ಮಂಜೂರು ಮಾಡ ಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ಸೆಟ್ಟಿಹಳ್ಳಿ, ಸಲಾಮವಾಡಿ, ಬಿದರೆವಾಡಿಯಲ್ಲಿ ಸ್ವಲ್ಪ ಸ್ವಲ್ಪ ರೋಡು ಮಾಡಿದ್ದಾರೆ. ಡೆವಲಪ್‌ಮೆಂಟ್ ಶಾಖೆಯವರು ಶುರು ಮಾಡಿ 6 ಫರ್ಲಾಂಗ್ ರೋಡು ಆಗಿ, ಹಾಗೇ ಅಲ್ಲಿಗೇ ನಿಂತುಹೋಗಿದೆ. ಪಿ.ಡಬ್ಲು.ಡಿ.ಯವರು ತೆಗೆದುಕೊಂಡು ಬೇಗ ಪೂರೈಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಸಣ್ಣಸಣ್ಣ ಗವರ್ನ್‌ಮೆಂಟ್ ಸರ್ವೆಂಟ್ಸ್‌ನ್ನು ಜಿಲ್ಲೆಯಿಂದ ಜಿಲ್ಲೆಗೆ ವರ್ಗಮಾಡಿದ್ದಾರೆ. ಕ್ಲಾರ್ಕುಗಳಿಗೆ 70 ರೂಪಾಯಿ ಸಂಬಳ ಬರುತ್ತಿದೆ. ಅವರಿಗೆ ಬೇರೆಕಡೆಗೆ ವರ್ಗ ಮಾಡಿದರೆ ಮನೆ ಸಿಗುವುದಿಲ್ಲ, ಖಾನಾವಳಿ ಸಿಗುವುದಿಲ್ಲ, ಊಟ ಸಿಗುವುದಿಲ್ಲ. ಹೀಗೆ ವರ್ಗ ಮಾಡಿದರೆ ಅವರು 70 ರೂಪಾಯಿನಲ್ಲಿ ಜೀವನ ಮಾಡುವುದು ಹೇಗೆ? ಬೆಳಗಾಂ ಡಿಸ್ಟ್ರಿಕ್ಟಿನಿಂದ ಧಾರವಾಡ ಡಿಸ್ಟ್ರಿಕ್ಟ್‌ಗೆ ಧಾರವಾಡ ಡಿಸ್ಟ್ರಿಕ್ಟಿನಿಂದ ಕಾರವಾರಕ್ಕೆ, ಕಾರವಾರದಿಂದ ಬೆಂಗಳೂರಿಗೆ ವರ್ಗ ಮಾಡಿದರೆ ಈ ಬಡ ನೌಕರರು ಜೀವನ ಮಾಡುವುದು ಹೇಗೆ? ಅವರು ಸಾಮಾನ್ಯವಾಗಿ ಕ್ಲಾರ್ಕುಗಳು, ಪೀವನ್ನುಗಳು ಇರುತ್ತಾರೆ. ಪಿ.ಡಬ್ಲು.ಡಿ. ಯಲ್ಲಿ ಇಂಥ ಅನ್ಯಾಯವಾಗದಂತೆ ನೋಡಿಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ. ಅವರನ್ನು ಆಯಾಯ ಜಿಲ್ಲೆಯೊಳಗೇ ಇಡಬೇಕು.

ಈಗ ಈ ಪ್ಲಾನು ಎಸ್ಟಿಮೇಟುಗಳು ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ, ಜಿಲ್ಲಾ ಮಟ್ಟದಿಂದ ಪ್ರಾಂತ್ಯ ಮಟ್ಟಕ್ಕೆ ಪಾದಯಾತ್ರೆ ಮಾಡಲಿಕ್ಕೆ ಹತ್ತಿವೆ. ಇದರಲ್ಲಿ ನಮ್ಮ ಇಂಜನಿಯರುಗಳ ತಪ್ಪಿದೆಯೊ, ಯಾರ ತಪ್ಪಿದೆಯೊ ಗೊತ್ತಿಲ್ಲ, ಅದನ್ನು ಸರಕಾರದವರು ಹೇಳಬೇಕು. ಏಕೆ ಈ ಪ್ಲಾನು ಎಸ್ಟಿಮೇಟುಗಳು ಹೀಗೆ ಹಿಂದಕ್ಕೆ ಮುಂದಕ್ಕೆ ಓಡಾಡುತ್ತವೆ ಎಂದು ನನ್ನನ್ನು, ಹೆಣ್ಣು ಮಗಳನ್ನು ಕೇಳುತ್ತಾರೆ, ನನಗೆ ಉತ್ತರ ಹೇಳಲಿಕ್ಕೆ ಆಗುವುದಿಲ್ಲ. ಬಹಳ ಕಠಿಣ ಬಂದು ಬಿಟ್ಟಿದೆ. ಈ ಹಣವನ್ನು ಬೇಗ ಸ್ಯಾಂಕ್ಷನ್‌ಮಾಡಿ, ಇಲ್ಲವಾದರೆ ಇಲ್ಲ ಅಂತ ಸ್ಪಷ್ಟವಾಗಿ ಹೇಳಿಬಿಡಿ. ಈ ವಿಚಾರದಲ್ಲಿ ಅಧಿಕಾರವರ್ಗದವರಿಗೆ ಸರಿಯಾದ ಸಲಹೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ನಾಲ್ಕನೆಯದಾಗಿ ಹಿಡಕಲೆ ಡ್ಯಾಮಿನಿಂದ 27 ಊರುಗಳು ಮುಳುಗುತ್ತವೆ. ಅದರ ಸಲುವಾಗಿ ಜನಗಳಿಗೆ ಲುಕ್ಸಾನು ಆಗುತ್ತಿದೆ. ಅವರಿಗೆ ನಿಲ್ಲಲು ಜಾಗವಿಲ್ಲ. ಅವರಿಗೆ ಬೇರೆ ಜಮೀನು ಕೊಡುವುದಕ್ಕೆ ಅನುಕೂಲ ಮಾಡಿಲ್ಲ. ಈ ಮುಳುಗಡೆಯಿಂದ ತೊಂದರೆಯಾದವರಿಗೆ ಎಲ್ಲಾ ಸೌಕರ್ಯಗಳನ್ನೂ ಒದಗಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೆ ಕಟ್ಟಡ ಶುರುವಾಗಿದೆ. ಕಟ್ಟಡ ಶುರುವಾದರೆ ಓಡಾಡಲಿಕ್ಕೆ ಕಷ್ಟವಾಗಿದೆ. ದನಗಳೂ ಲುಕ್ಸಾನಾಗಿವೆ, ಜನಗಳಿಗೆ ಲುಕ್ಸಾನು ಆಗುತ್ತಿದೆ. ಜನಗಳನ್ನು ಸೆಟಲ್‌ಮಾಡುವ ವ್ಯವಸ್ಥೆಮಾಡಬೇಕು. ಈ ಡ್ಯಾಮ್ ಕೆಳಗೆ 300 ಎಕರೆ 2,000 ಎಕರೆ ಸಾಗುವಳಿಯಾಗುತ್ತದೆಂದು ಹೇಳುತ್ತೀರ. ಆದರೆ ಡಿಸ್ಟ್ರಿಕ್ಟು ಆಫೀಸರುಗಳಿಗೆ ಹೇಳಿ, ಜನಗಳಿಗೆ ಆಗುವ ಎಲ್ಲಾ ರೀತಿಯ ಲುಕ್ಸಾನನ್ನೂ ತುಂಬಿ, ಅವರನ್ನು ಸೆಟಲ್‌ಮಾಡಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯ ಹೇಳಬೇಕೆಂದರೆ, ನಮ್ಮ ಶರಾವತಿ ಯೋಜನೆಯಲ್ಲಿ ಬಹಳ ಚಲೋ ರೀತಿಯ ಕೆಲಸವಾಗುತ್ತಿದೆ, ಅದರ ಸಲುವಾಗಿ ತುಂಬ ಸಂತೋಷವಾಗುತ್ತಿದೆ. ಆದರೆ ಅದರಿಂದ ಎಲೆಕ್ಟ್ರಿಸಿಟಿ ನಮ್ಮ ಏರಿಯಾಕ್ಕೆ ಬರಬೇಕು ಮತ್ತು ನಮ್ಮ ಬೆಳಗಾಂ ಡಿಸ್ಟ್ರಿಕ್ಟ್ ಹುಕ್ಕೇರಿ ತಾಲ್ಲೂಕಿಗೆ ಲಘುವಾಗಿ ಅನುಕೂಲಮಾಡಿಕೊಡಬೇಕು.

ಕೊನೆಯದಾಗಿ, ನಮ್ಮ ಸ್ನೇಹಿತರಾದ ಮುಕ್ಕಣ್ಣಪ್ಪನವರು ಹಳೆಮೈಸೂರು, ಹೊಸಮೈಸೂರು ಅಂತ ಹೇಳಿ ವಾದ ವಿವಾದ ಮಾಡಿದ್ದನ್ನು ಕೇಳಿದೆ. ನಾವು ವಿಶಾಲ ಮೈಸೂರು ಮಾಡಲಿಕ್ಕೆ ಬಂದಿದ್ದೇವೆ. ನಾವು ನಮ್ಮ ಹಕ್ಕು ಬಾಧ್ಯತೆಗಳನ್ನು ಬಿಟ್ಟು ಬಂದಿಲ್ಲ. ತೆಗೆದುಕೊಂಡು ಬಂದಿದ್ದೇವೆ. ಈ ವಿಶಾಲ ಮೈಸೂರನ್ನು ಅಭಿವೃದ್ಧಿ ಮಾಡುತ್ತೇವೆ. ಪ್ರತಿಯೊಬ್ಬರೂ ಹಳೆಮೈಸೂರು, ಹೊಸ ಮೈಸೂರು ಎಂಬ ವಾದವಿಲ್ಲದೇನೆ ಕೆಲಸಮಾಡಬೇಕು. ಅದೇ ಮನೋಭಾವದಿಂದ ಪಿ.ಡಬ್ಲ್ಯು.ಡಿ. ಇಲಾಖೆ ಏನು ಕೆಲಸ ಮಾಡಲಿಕ್ಕೆ ಹತ್ತಿದೆ, ಆ ಒಳ್ಳೆಯ ಕೆಲಸವನ್ನು ಮುಂದುವರಿಸಿಕೊಂಡು ಹೋಗಬೇಕು.

ಇಷ್ಟು ಹೇಳಿ, ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮಿ, ಈ ಲೋಕೋಪಯೋಗಿ ಸಚಿವ ಶಾಖೆಯ ಸುಮಾರು 30 ಕೋಟಿ ರೂಪಾಯಿಯ ಬೇಡಿಕೆಯನ್ನು ಈ ಸಭೆ ಎರಡು ದಿವಸಗಳಿಂದ ಚರ್ಚೆ ಮಾಡುತ್ತಾ ಇದೆ. ಈ ಚರ್ಚೆಯ ಕಾಲದಲ್ಲಿ ಲೋಕೋಪಯೋಗಿ ಶಾಖೆಯಲ್ಲಿ ಇರುವಂಥ ಲಂಚ ರುಶುವತ್ತುಗಳು, ಸಮಸ್ಯೆಗಳು, ಅನುಮಾನಗಳಬಗ್ಗೆ ಹಲವಾರು ಮಾನ್ಯ ಸದಸ್ಯರುಗಳು ಈ ಸಭೆಯ ಗಮನವನ್ನು ಸೆಳೆದಿದ್ದಾರೆ.

ಈ ಚರ್ಚೆಯ ಕಾಲದಲ್ಲಿಯೇ ಈ ರಾಜ್ಯ ಈಗಿರುವಂತೆ ಉಳಿಯಬೇಕೆ ಅಥವ ಈ ರಾಜ್ಯದ ರೂಪುರೇಖೆಯಬಗ್ಗೆ ಪುನರ್ವಿಮರ್ಶನೆ ಆಗಬೇಕೆ ಅನ್ನುವ ಬಗ್ಗೆಯೂ ಕೂಡ ಹಲವಾರು ಮಾನ್ಯ ಸದಸ್ಯರುಗಳು ವಾದ ವಿವಾದಗಳನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಬಹಳ ವರ್ಷಗಳಿಂದ ಲೋಕಕ್ಕೆ ಉಪಕಾರ ಮಾಡುವುದಕ್ಕೋಸ್ಕರ ಅಸ್ತಿತ್ವಕ್ಕೆ ಬಂದಿರುವಂಥ ಈ ಇಲಾಖೆಯ ಬಗ್ಗೆ ನಾವು ಹಲವಾರು ಟೀಕೆಗಳನ್ನು ಮಾಡಿದ್ದೇವೆ. ಈ 30 ಕೋಟಿ ರೂಪಾಯಿಗಳು ಜನ ಕಲ್ಯಾಣಕ್ಕೋಸ್ಕರ ಖರ್ಚಾಗಬೇಕು; ಈ 30 ಕೋಟಿ ರೂಪಾಯಿಗಳಲ್ಲಿ ಶೇಕಡ ಎಷ್ಟು ಹಣ ಮಧ್ಯಸ್ತಿಕೆಗಾರರು ಅಥವಾ ಕಂಟ್ರಾಕ್ಟುದಾರರ ವಶಕ್ಕೆ ಹೋಗುತ್ತಿದೆ ಅನ್ನುವುದನ್ನು ಈ ದಿವಸ ವಿವೇಚನೆ ಮಾಡಬೇಕು. ಪ್ರಜಾರಾಜ್ಯ ಬಂದಮೇಲೆ ಈ ಒಂದು ಹೊಸ ವರ್ಗವನ್ನು ಸೃಷ್ಟಿಸಿಯಾಗಿದೆ. ಈ ಒಂದು ಹೊಸ ವರ್ಗ ಈ ದಿವಸ ಬಹು ಪ್ರಭಾವಶಾಲಿಯಾದಂಥ ವರ್ಗವಾಗಿ ಪರಿಣಮಿಸಿದೆ ಅಂತ ಹೇಳಿದರೆ ಅದು ಅತಿಶಯೋಕ್ತಿಯಾದಂಥ ಮಾತು ಆಗಲಾರದು ಅಂತ ನಾನಾದರೂ ಭಾವನೆ ಮಾಡುತ್ತೇನೆ.

ಬಹು ಹಿಂದಿನಿಂದಲೂ ಕೂಡ ನಮ್ಮ ರಾಜ್ಯದಲ್ಲಿ ಈ ಕಂಟ್ರಾಕ್ಟುದಾರರುಗಳ ಅವಶ್ಯಕತೆಯನ್ನು ನಾವು ಹಿಂದೆ ಗಮನಿಸಿದ್ದೇವೆ. ದಿನ ದಿನಕ್ಕೆ ಈ ಕಂಟ್ರಾಕ್ಟುದಾರರುಗಳ ವರ್ಗ ಈ ರಾಜ್ಯದಲ್ಲಿ ಜಾಸ್ತಿಯಾಗುತ್ತಾ ಇದೆ. ಅಭಿವೃದ್ಧಿಯಾಗುತ್ತಾ ಇದೆ, ಇದಕ್ಕೆ ಕಾರಣವಾದರೂ ಕೂಡ ಸರ್ವೇಸಾಮಾನ್ಯವಾಗಿ ಜನಗಳಲ್ಲಿ ಒಂದು ಅಭಿಪ್ರಾಯ ಬಂದಿದೆ, ಅದು ಏನೆಂದರೆ ಸುಲಭವಾಗಿ

(ಶ್ರೀಮತಿ ಚಂಪಾಬಾಯಿ ಬೋಗಳೆ)

ಹಣ ಉಳ್ಳವರಾಗುವುದಕ್ಕೆ ಇರತಕ್ಕ ಒಂದು ಮಾರ್ಗ ಎಂದರೆ ಕಂಟ್ರ್ಯಾಕ್ಟು ಕೆಲಸ ಮಾಡುವುದು, ಕಂಟ್ರ್ಯಾಕ್ಟ್‌ದಾರರಾಗಿ ರಿಜಿಸ್ಟರ್ ಮಾಡಿಸಿಕೊಳ್ಳುವುದು, ಇದು ಬಹುಶಃ ಈ ಸಭೆಯಲ್ಲಿ ಉಪಸ್ಥಿತರಾಗಿರತಕ್ಕ ಎಲ್ಲ ಸದಸ್ಯರುಗಳ ಗಮನಕ್ಕೂ ಕೂಡ ಬಂದಿದೆ ಎಂದು ನಾನು ಭಾವನೆ ಮಾಡುತ್ತೇನೆ. ಇದಕ್ಕೆ ಕಾರಣವಾದರೂ ಏನಿದೆ—ನಮ್ಮ ರಾಜ್ಯದ ಉತ್ತರೋತ್ತರ ಭವಿತವ್ಯದ ದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆಯೇ, ನಮ್ಮ ರಾಜ್ಯಕ್ಕೆ ಇದು ಆರೋಗ್ಯಕರವಾದ ಬೆಳವಣಿಗೆಯೇ ಎಂಬುದನ್ನು ನಾನು ಪ್ರಶ್ನೆ ಮಾಡುತ್ತೇನೆ. ಈ ಕಾಂಟ್ರ್ಯಾಕ್ಟ್‌ದಾರರುಗಳು ಆಗುವವರು ಯಾವ ರೇಟ್‌ಗೆ ಕೆಲಸವನ್ನು ಮಾಡುತ್ತೇವೆ ಎಂದು ಒಪ್ಪಿಕೊಳ್ಳುತ್ತಾರೆಯೋ ಅದೇ ರೇಟಿಗೆ ಅವರು ಕೆಲಸವನ್ನು ಪ್ರಮಾಣಿಕವಾಗಿ ಮಾಡಿಸಿದರೆ ಅವರಿಗೆ ಅದರಿಂದ ಯಾವ ವಿಧವಾದ ಪ್ರಯೋಜನವೂ ಕೂಡ ಅಥವಾ ಲಾಭವೂ ಕೂಡ ಆಗಲಿಕ್ಕೆ ಸಾಧ್ಯವಿಲ್ಲ. ಕಂಟ್ರ್ಯಾಕ್ಟ್‌ದಾರರುಗಳು ದೇಶದ ಹೆಸರಿನಲ್ಲಿ ದೇಶದ ಬೊಕ್ಕಸವನ್ನು ಜನರ ಕಲ್ಯಾಣಕ್ಕೆ ಬರಿದು ಮಾಡುವುದಕ್ಕೆ ಹೊರಟವರಲ್ಲ. ತಮ್ಮ ಸ್ವಂತ ಹಿತಕ್ಕೆ, ತಮ್ಮ ಸ್ವಂತ ಅಪೇಕ್ಷೆಗಳಿಗೆ ಶೇಕಡ ನೂರರಷ್ಟು ಗಮನವನ್ನು ಅವರು ಕೊಡುವುದರಿಂದ ಲೋಕಕ್ಕೆ ಉಪಯೋಗವಾಗುವುದಿಲ್ಲ, ಅವರಿಂದ ಲೋಕಕ್ಕೆ ದೇಶಕ್ಕೆ ಹೆಚ್ಚು ಅನರ್ಥವುಂಟಾಗುತ್ತದೆ ಎಂದು ಹೇಳಬೇಕಾಗಿದೆ. ಈ ಕಂಟ್ರ್ಯಾಕ್ಟ್‌ದಾರರುಗಳ ಲಕ್ಷಣ ಏನು ಎಂದರೆ ಆಳುವ ಪಕ್ಷವನ್ನು, ಆಡಳಿತ ಮಾಡತಕ್ಕ ಸರಕಾರವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆಂಬಲ ಮಾಡಿಕೊಳ್ಳುವುದು ಮತ್ತು ಅವರಿಗೆ ಕಾಲ ಕ್ರಮೇಣ ಆಶ್ರಯವನ್ನು ಕೊಡುವುದು ಈ ಎರಡೂ ಕೂಡ ಕಂಟ್ರ್ಯಾಕ್ಟ್‌ದಾರರುಗಳಿಗೆ ಬಹಳ ಚೆನ್ನಾಗಿ ಗೊತ್ತಿರತಕ್ಕ ಸಾಧನಗಳು. ನಾವು ಇದೇ ಸಭೆಯಲ್ಲಿ ಹಿಂದೆ ಒಂದು ಕಾಲದಲ್ಲಿ—ಕೆಲವು ವರ್ಷಗಳ ಚುನಾವಣೆಯ ಸಮಯದಲ್ಲಿ ಕೆಲವು ಇಂಜಿನಿಯರುಗಳು, ಕಂಟ್ರ್ಯಾಕ್ಟ್‌ದಾರರುಗಳನ್ನು ಹಿಡಿದು ಇಂತಹವರು ದೇಶಕ್ಕೆ ಇಷ್ಟು ದುಡ್ಡು ಕೊಡಬೇಕೇ ಎಂದು ಡಿಮ್ಯಾಂಡ್ ಮಾಡಿದಂತಹ ಹಲವಾರು ಪ್ರಸಂಗಗಳನ್ನು ಸಭೆಯ ಗಮನಕ್ಕೆ ತಂದುಕೊಟ್ಟಿದ್ದೇವೆ. ಈ ದಿವಸ ಬಹು ಮುಖ್ಯವಾಗಿ ನಾನು ಪ್ರತಿಪಾದನೆ ಮಾಡಬೇಕೆಂದು ಮನಸ್ಸಿನಲ್ಲಿರತಕ್ಕ ವಿಷಯವಾದರೂ ಕೂಡ ಇಷ್ಟೆ. ಆದಷ್ಟು ಈ ಕಂಟ್ರ್ಯಾಕ್ಟ್‌ದಾರರುಗಳ ವರ್ಗವನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ಅಗತ್ಯವಾದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿದೆ. ಶರಾವತಿಯಾಗಲಿ ಅಥವಾ ಒಂದು ಜಿಲ್ಲೆಯಲ್ಲಿ ಒಂದು ಕೆರೆಯನ್ನು ಒಂದು ಕಟ್ಟಡವನ್ನು ಕಟ್ಟಿಸತಕ್ಕ ಕೆಲಸವಾಗಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಲೋಕೋಪಯೋಗಿ ಶಾಖೆಯ ನೆರವನ್ನು ತಗೆದುಕೊಂಡು ಆ ಕೆಲಸಗಳನ್ನು ನಿರ್ವಹಣೆ ಮಾಡುವುದು ಬಹಳ ನಾಜೂಕಿನ ನೀತಿಯಾಗುತ್ತದೆ ಎಂದು ಹೇಳಬೇಕಾಗಿದೆ. ಒಂದು ಸರ್ವೇ ಏನಾದರೂ ನಾವು ಮಾಡಿದರೆ ಈ ಕಾಂಟ್ರ್ಯಾಕ್ಟ್‌ದಾರರು, ಅವರು ಕಾಂಟ್ರ್ಯಾಕ್ಟ್‌ದಾರರುಗಳು ಆದಮೇಲೆ ಗಳಿಸಿರುವ ಹಣದ ಲೆಕ್ಕವನ್ನು ಈ ದಿವಸ ನಮ್ಮ ಸಂಸ್ಥಾನದಲ್ಲಿ ಕಂಡುಹಿಡಿಯುವ ಪ್ರಯತ್ನವನ್ನು ಮಾಡಿದ್ದೇ ಆದರೆ ನಮಗೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಲೋಕೋಪಯೋಗಕ್ಕೆ ಏನು ನಾವು ಹಣವನ್ನು ಈ ಸಭೆಯಲ್ಲಿ ಬೇಡಿಕೆಯ ರೂಪದಲ್ಲಿ ಕೊಡುತ್ತೇವೆಯೋ ಅದರಲ್ಲಿ ಬಹುತೇಕ ಭಾಗ ಕಂಟ್ರಾಕ್ಟ್‌ದಾರರ ಮನೆಯನ್ನು ಅಲಂಕರಿಸುತ್ತದೆ ಎಂದು ನಾನು ಹೇಳಬೇಕಾಗಿದೆ. ಈ ಲೋಕೋಪಯೋಗಿ ಶಾಖೆಯ ಸಚಿವರ ಬಗ್ಗೆ ಒಂದು ಸ್ಪಷ್ಟವಾದ ಮತ್ತು ನಿರ್ದಿಷ್ಟವಾದ ಆಪಾದನೆ ಬಂದಿದೆ ಅದೇನೆಂದರೆ ಹಿಂದುಳಿದ ಜಿಲ್ಲೆಗಳ ಹೆಸರಿನಲ್ಲಿ ಈ ದಿವಸ ಬಹುತೇಕ ಹಣವನ್ನು ಕೆಲವೇ ಕೆಲವು ಜಿಲ್ಲೆಗಳಲ್ಲಿ ಖರ್ಚು ಮಾಡಿದ್ದಾರೆ ಎಂದು. ಅದರಿಂದಾಗಿ ಹಲವಾರು ಜಿಲ್ಲೆಗಳಲ್ಲಿ ಅಸಮಾಧಾನ ಪರಿಸ್ಥಿತಿ ಉಂಟಾಗಿ ಅವರಲ್ಲಿ ಸಂಶಯ ಅಥವಾ ಅನುಮಾನ ಉಂಟಾಗಿದೆ ಎಂಬುದಾಗಿ ಕೆಲವರು ಸದಸ್ಯರು ಅವರ ಭಾಷಣದಲ್ಲಿ ಹೇಳಿದ್ದಾರೆ. ನಮ್ಮ ಅನುಮಾನ ನಿವಾರಣೆಯಾಗಬೇಕಾಗಿದ್ದರೆ 1956 ನೇ ಇಸವಿಯಿಂದ 1964 ನೇ ಇಸವಿಯವರಿಗೂ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎನ್ನುವ ಸ್ಥೂಲವಾದ ವಿವರಣೆಯನ್ನು ಸಭೆಯ ಮುಂದೆ ಇಟ್ಟರೆ ಆಗ ಚೆನ್ನಾಗಿ ಅರ್ಥವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—1956 ರಿಂದ 1963ನೇ ಮಾರ್ಚಿ ಕೊನೆಯವರೆಗೂ ಪ್ರತಿಯೊಂದು ಜಿಲ್ಲೆಯಲ್ಲೂ ಮಾಡಿದಂತಹ ಖರ್ಚು ಎಷ್ಟಾಗಿದೆ ಎಂಬುದನ್ನು ಕೊಟ್ಟಿದ್ದೇವೆ. ತಾವು ಹತ್ತು ನಿಮಿಷ ಸಮಾಧಾನದಿಂದ ನೋಡಿದರೆ ಎಲ್ಲಿ ನ್ಯಾಯವಾಗಿ ಆಗಿದೆ, ಎಲ್ಲಿ ಅನ್ಯಾಯವಾಗಿ ನಡೆದಿದೆ ಎಂಬುದು ಪ್ರತಿಯೊಂದೂ ಅರ್ಥವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಹಣವನ್ನು ಖರ್ಚು ಮಾಡಿರತಕ್ಕ ರೀತಿಯಲ್ಲೇ ಯಾವ ಯಾವ ಭಾಗಕ್ಕೆ ಅನ್ಯಾಯವಾಗಿದೆ, ಯಾವ ಯಾವ ಭಾಗಕ್ಕೆ ಹೆಚ್ಚಾಗಿ ಖರ್ಚಾಗಿದೆ ಎಂದು ಅರ್ಥವಾಗುತ್ತದೆ. ಶ್ರೀಮಾನ್ ಕೃಷ್ಣ ಶೆಟ್ಟರು ಒಂದು ಮಾತನ್ನು ಹೇಳಿದರು ಹಿಂದುಳಿದಿರತಕ್ಕ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ಎರಡು ಅಭಿಪ್ರಾಯಗಳು ಇಲ್ಲ ಆದರೆ ಯಾವ ಪ್ರದೇಶಗಳು ಮುಂದುವರಿದಿವೆ

ಅವುಗಳ ಮುಂದುವರಿಕೆಯನ್ನು ತಡೆ ಹಿಡಿಯತಕ್ಕ ಕೆಲಸಕಾರ್ಯಗಳು ನಡೆಯಬಾರದು. ಮತ್ತೊಂದು ಆಪಾದನೆ ಏನೆಂದರೆ ಕೆಲವು ಪ್ರದೇಶಗಳಲ್ಲಿ ಅವಕ್ಕೆ ಬಡ್ಜೆಟ್‌ನಲ್ಲಿ ಸಾಕಾದಷ್ಟು ಹಣ ವನ್ನು ಕೊಟ್ಟಿದ್ದೀರಿ. ಆ ಹಣ ಖರ್ಚಾಗುವುದಿಲ್ಲ. ಎಷ್ಟೋ ಕಡೆಗಳಲ್ಲಿ ಕೊಟ್ಟಂತಹ ಹಣ ಲ್ಯಾಪ್ಸ್ ಆಗುತ್ತದೆ ಅಂತಹ ಹಲವಾರು ನಿದರ್ಶನಗಳನ್ನು ಕೊಡಬಲ್ಲೆ. ಇದಕ್ಕೆ ಕಾರಣವಾದರೂ ಕೂಡ ಇಷ್ಟೆ. ನಾವು ಯಾರಿಗೆ ಜವಾಬ್ದಾರಿಯನ್ನು ವಹಿಸುತ್ತೇವೆ ಆ ಜನ ಅಥವಾ ನೌಕರರು ತಮ್ಮ ಜವಾಬ್ದಾರಿಯನ್ನು ವಹಿಸದೇ, ಜವಾಬ್ದಾರಿಯಿಂದ ವಿಮುಖವಾಗಿ ನಿಯಮಿತವಾದ ಕಾಲದಲ್ಲಿ ಹಣ ಖರ್ಚಾಗದೇ ಇರುವುದೂ ಕೂಡ ಇದೆ. ಈ ಲ್ಯಾಪ್ಸ್‌ಸ್ ಬಗ್ಗೆ ಮತ್ತು ಈ ಸರಕಾರದ ಬಡ್ಜೆಟ್ ಮೇಕಿಂಗ್ ಬಗ್ಗೆ ನಮ್ಮ ಸರಕಾರದ ಚೀಫ್ ಇಂಜಿನಿಯರು ಸುಮಾರು ಕೆಲವು ತಿಂಗಳುಗಳ ಕೆಳಗೆ ಒಂದು ಭಾಷಣವನ್ನು ಮಾಡಿದರು. ಇನ್‌ಸಿಟ್ಯೂಷನ್ ಆಫ್ ಇಂಜಿನಿಯರ್ಸ್ ಮೈಸೂರು ಸೆಂಟರ್ ಅವರ ಅನ್ಯುಯಲ್ ಸೆಷನ್‌ನಲ್ಲಿ ಅವರು ಭಾಷಣ ಮಾಡುತ್ತಾ ಸರಕಾರದವರು ಎಷ್ಟು ವಿವೇಕ ರಹಿತವಾದ ರೀತಿಯಲ್ಲಿ ಬಡ್ಜೆಟ್‌ನ್ನು ತಯಾರು ಮಾಡುತ್ತಾರೆ ಎಂಬುದರ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಆ ದಿವಸ ಅವರು ಭಾಷಣ ಮಾಡಿದಂತಹ ಸಂದರ್ಭದಲ್ಲಿ ನಮ್ಮ ಲೋಕೋಪಯೋಗಿ ಸಚಿವರೂ ಕೂಡ ಆ ಸಭೆಯಲ್ಲಿ ಉಪಸ್ಥಿತರು ಇದ್ದರು ಎಂಬುದಾಗಿ ನಾನು ವರ್ತಮಾನ ಪತ್ರಿಕೆಗಳಲ್ಲಿ ಓದಿದೆ. ಅವರ ಭಾಷಣದ ಒಂದೆರಡು ಭಾಗಗಳನ್ನು ಈ ಸಭೆಯ ಮುಂದೆ ಉಲ್ಲೇಖ ಮಾಡುವುದಕ್ಕೆ ನಾನು ತಮ್ಮ ಅನುಮತಿಯನ್ನು ಬೇಡುತ್ತೇನೆ.

"These irregularities are not on account of the carelessness on the part of the engineers but it is due to defective budgetting in a democratic set-up. In the anxiety to develop our State, people in power, Legislators and others, include in the budget estimates, items not envisaged. The include works costing several lakhs of rupees and provide token grants. Persons with authority induce the engineers to start works pending sanction. Sometimes they lay the foundation stone for works which are not sanctioned. Grants are not intimated in time. Often additional grants are given at the fag-end of the year. These are the causes for the various irregularties. The remedy lies in framing the budget with an out look of reality".

Further he says: "I want to make this statement before the Minister for Public Works who should protect the interest and welfare of the Engineers".

3-30 P.M.

ಇದು ಬಹಳ ಮೂಲಭೂತವಾದ ಪ್ರಶ್ನೆ. ಈ ಒಂದು ಭಾಷಣದಲ್ಲಿ ಚೀಫ್ ಇಂಜಿನಿಯರೇ ಒಪ್ಪಿದ್ದಾರೆ. ಎಷ್ಟೋ ಸಾರಿ ಸರ್ಕಾರದವರು ಟೋಕನ್ ಗ್ರ್ಯಾಂಟ್ ಕೊಟ್ಟರೂ ಟೆಕ್ನಿಕಲ್ ಅಥವಾ ಅಡ್ಮಿನಿಷ್ಟ್ರೇಟಿವ್ ಸ್ಯಾಂಕ್‌ಷನ್ ದೊರಕಿರುವುದಿಲ್ಲ. ಹಾಗಿದ್ದರೂ ಕೂಡ ಅಂಥವುಗಳ ಸಂಬಂಧದಲ್ಲೂ ಅಸ್ತಿ ಭಾರಶಿಲೆ ಹಾಕಿದ್ದಾರೆ. ಎರಡನೆಯದಾಗಿ ಎಷ್ಟೋ ಸಲ ಯಾವ ವಿಧವಾದ ಇನ್‌ವೆಸ್ಟಿ ಗೇಷನ್ ಸಹ ಆಗದೆ ಎಷ್ಟೋ ಪ್ರಾಜೆಕ್ಟ್‌ಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸಿಕೊಳ್ಳುವಂತೆ ಚೀಫ್ ಇಂಜಿನಿಯರಿಗೆ ಇನ್‌ಸ್ಟ್ರಕ್ಷನ್ ಕೂಡ ಹೋಗಿದೆಯೆಂದು ಪ್ರಸ್ತಾಪ ಮಾಡಿದ್ದಾರೆ. ಅವರು ಇದನ್ನು ಹೇಳಿದಾಗ ಬಹಳ ಗಂಭೀರವಾಗಿ ಹೇಳಿದರು ಮತ್ತು ಜವಾಬ್ದಾರಿಯುತವಾಗಿ ಹೇಳಿದರು. ಒಟ್ಟಿನಲ್ಲಿ ಇದರಿಂದಾಗುವ ಪರಿಣಾಮವೇನು ಎಂದು ತಮ್ಮನ್ನು ಪ್ರಶ್ನೆ ಮಾಡಬೇಕಾಗಿದೆ. ಹಿಂದೆ ಹಲವಾರು ಸಾರಿ ಇದೇ ಸಭೆಯಲ್ಲಿ ಪ್ರಶ್ನೆಗಳಿಗೆ ಉತ್ತರ ಸಹ ಕೊಟ್ಟಿದ್ದಾರೆ. ಹಿಂದೆ ಹಾಕಿದ ಶಂಖುಸ್ಥಾಪನೆ ಇನ್ನೂ ಅದೇ ಮಟ್ಟದಲ್ಲಿದೆ. ಇಂಥಾದ್ದಕ್ಕೆ ಬೇಕಾದಷ್ಟು ಸೇತುವೆ ಮತ್ತು ಕಟ್ಟಡ ಗಳ ಉದಾಹರಣೆ ಕೊಡಬಹುದು. ಇದಕ್ಕೆ ಒಳ್ಳೆಯ ನಿದರ್ಶನ ಚೀಫ್ ಇಂಜಿನಿಯರ ಭಾಷಣ ದಿಂದಲೇ ಕೊಡಬಹುದು. ಎರಡನೆಯದು ಚೀಫ್ ಇಂಜಿನಿಯರು ಇಂಜಿನಿಯರುಗಳ ಕರ್ತವ್ಯ ಭ್ರಷ್ಟತೆ ಏನೆಂದು ಹೇಳುವುದು ಎಂದರೆ ಒಂದು ಪ್ರಾಜೆಕ್ಟಿನ ಇನ್‌ವೆಸ್ಟಿಗೇಷನ್ ಕೂಡ ಸರಿಯಾಗಿ ಆಗದಿರುವಾಗ ಮಂತ್ರಿಗಳು ಅಥವಾ ಮುಖ್ಯ ಮಂತ್ರಿಗಳು ಅದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ, ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಪ್ರಾಮಾಣಿಕರಾದ ಇಂಜಿನಿಯರುಗಳು

(ಶ್ರೀ ಎಸ್. ಎಂ. ಕೃಷ್ಣ)

ಉಪೇಕ್ಷಿಸಲ್ಪಡುತ್ತಾರೆ. ಸರ್ಕಾರ ಅವರನ್ನು ಕೈಬಿಟ್ಟರೆ ಅವರಿಗೆ ಜೀವನ ಮಾಡುವುದಕ್ಕೆ ಈ ದೇಶದಲ್ಲಿ ಬೇಕಾದಷ್ಟು ಅವಕಾಶವಿದೆ. ಅವರಿಗೆ ಬೇಕಾದಷ್ಟು ಹಣ ಸಂಪಾದನೆ ಮಾಡುವ ಮಾರ್ಗವಿದೆ. ಆದುದರಿಂದ ಕೇವಲ ಒಂದು ಸ್ಥಾನಕ್ಕೆ ಅವರು ಅಂಟಿಕೊಂಡಿರಬೇಕಾಗಿಲ್ಲ. ಯಾವ ಕಾನೂನು ಕಟ್ಟಳೆಗೆ ಯಾವ ವಿಧವಾದ ಗೌರವ ಇಲ್ಲದಿರುವ ರೀತಿಯಲ್ಲಿ ಒಬ್ಬ ಚೀಫ್ ಇಂಜಿನಿಯರು ವರ್ತಿಸಿದರೆ ಅವರ ಬಗ್ಗೆ ಗೌರವ ಜಾಸ್ತಿಯಾಗದೆ ಅನುಮಾನ ಮತ್ತು ಶಂಕೆ ಜಾಸ್ತಿಯಾಗುತ್ತದೆ. ಎಲ್ಲಕ್ಕೂ ಕೂಡ ಅವರು ಸರ್ಕಾರವನ್ನು ಹೊಣೆ ಮಾಡಿದ್ದಾರೆ, ಶಾಸಕಾಂಗವನ್ನು ಹೊಣೆಮಾಡಿದ್ದಾರೆ ಮತ್ತು ಈ ದಿವಸ ಇರುವ ಆಡಳಿತ ಪಕ್ಷವನ್ನು ಹೊಣೆಮಾಡಿದ್ದಾರೆ. ಈ ಹೊಣೆಗಾರಿಕೆಯನ್ನು ಯೋಚನೆ ಮಾಡಬೇಕಾಗಿದೆ. ನಮ್ಮ ಬಗ್ಗೆ ಹೇಳುವುದಾದರೆ ನಾವು ಏನಾದರೂ ಮನವಿಯನ್ನು ಚೀಫ್ ಇಂಜಿನಿಯರಿಗೆ ಕೊಟ್ಟರೆ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸುವ ನಮ್ಮ ಬಗ್ಗೆ ಅಷ್ಟು ಗೌರವವಾಗಲಿ, ಮಾನ್ಯತೆಯಾಗಲಿ ದೊರೆಯದಿರಬಹುದು. ಆದರೆ ಅವರ ಆಪಾದನೆಗಳಿಗೆ ನಾವು ತಲೆಬಾಗಬೇಕಾಗಿವೆ. ಅವರು ಹೇಳುವ ಮಾತುಗಳು ಸಾಕಾದಷ್ಟು ಆಧಾರರಹಿತವಾದುವೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಈ ಸರ್ಕಾರದಲ್ಲಿ ಮಂತ್ರಿಗಳಿಗೂ ಆಡಳಿತ ಪಕ್ಷಕ್ಕೂ, ಸರ್ಕಾರಕ್ಕೂ ಮತ್ತು ಇಂಜಿನಿಯರುಗಳಿಗೂ ಏನು ಸಮನ್ವಯವಿದೆ, ಎಷ್ಟುಮಟ್ಟಿಗೆ ಸೌಹಾರ್ದವಿದೆ ಎನ್ನುವುದು ಚೀಫ್ ಇಂಜಿನಿಯರ ಭಾಷಣದಿಂದ ನಮಗೆಲ್ಲರಿಗೂ ಚೆನ್ನಾಗಿ ಅರ್ಥವಾಗುತ್ತದೆ. ನನಗೆ ತಿಳಿದ ಹಾಗೆ ಮೇಲ್ಮನೆಯಲ್ಲಿ ಇದರ ಬಗ್ಗೆ ಪ್ರಶ್ನೆ ಬಂದಾಗ ಜತ್ತಿಯವರು ಚೀಫ್ ಇಂಜಿಯನರು ಮಾಡಿರುವ ಆರೋಪ ನೇರವಾಗಿ ಸರ್ಕಾರದ ಮೇಲಿದೆ, ಅದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ ಮತ್ತು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿರುವುದಾಗಿಯೂ ಹೇಳಿದ್ದಾರೆ. ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದು ನಾನು ಕೇಳುತ್ತೇನೆ. ಆ ರೀತಿ ಅವರ ಮೇಲೆ ಶಿಸ್ತಿನ ಕಾರ್ಯಕ್ರಮ ತೆಗೆದುಕೊಳ್ಳುವ ಮನಸ್ಸಿರುವುದಾದರೆ ಮೊದಲು ನಮ್ರತೆಯಿಂದ ಇರಬೇಕು, ಈ ರೀತಿ ಮಾಡಿ ಎಂದು ಹೇಳಬೇಕು. ಯಾವತ್ತೂ ನೀವು ಹಾಗೆಮಾಡಿಲ್ಲ. ಈ ಒಂದು ಆಧಾರದ ಮೇಲೆ ಮಾತ್ರ ನೀವು ಅವರನ್ನು ದೂಷಣೆ ಮಾಡಬೇಕು. ಒಟ್ಟಿನಲ್ಲಿ ಹೇಳಬಹುದು, ಈ ಪ್ರಕರಣ ನಿಮಗೆ ಒಳ್ಳೆಯದಲ್ಲ, ಇದರಿಂದಾಗಿ ಸರ್ಕಾರದ ಘನತೆಯಾಗಲಿ ಅಥವಾ ಗೌರವವಾಗಲಿ ಹೆಚ್ಚುವುದಿಲ್ಲ, ಜನರು ನಿಮ್ಮ ಬಗ್ಗೆ, ಎಂಜಿನಿಯರುಗಳ ಬಗ್ಗೆ ಸಂಶಯ ಪಡುತ್ತಾರೆ ಎಂದು ಇಷ್ಟು ನಾನು ಅರಿಕೆಮಾಡುತ್ತೇನೆ.

ಇನ್ನು ಕೆಲವು ಕಟ್ಟಡಗಳನ್ನು ಕಟ್ಟಿರುವ ವೈಭವ, ವೈವಿಧ್ಯತೆ ಮತ್ತು ಅವು ಎಷ್ಟು ಗಟ್ಟಿಯಾಗಿವೆ ಎಂಬ ವಿಚಾರದಲ್ಲಿ ನಿದರ್ಶನ ಕೊಡುತ್ತೇನೆ. ಮಂಡ್ಯ ಜಿಲ್ಲೆಯಲ್ಲಿ ಫಸ್ಟ್‌ಗ್ರೇಡ್ ಕಾಲೇಜ್ ಕಟ್ಟಡ ಕಟ್ಟಿದ್ದಾರೆ. ಅದನ್ನು ಕಟ್ಟಿ ಇನ್ನೂ ಬಹಳ ವರ್ಷಗಳಾಗಿಲ್ಲ, 10-12 ವರ್ಷಗಳು ನರಳಿದಮೇಲೆ ಈಗ ಒಂದು ಕಟ್ಟಡ ಎದ್ದು ನಿಂತಿದೆ. ಅದು ಎಷ್ಟು ದಿವಸ ನಿಲ್ಲುತ್ತದೆಂದು ಧೈರ್ಯದಿಂದ ಭವಿಷ್ಯ ಹೇಳುವುದಕ್ಕೆ ನನಗೆ ಶಕ್ತಿಯಿಲ್ಲ. ಅಲ್ಲಿ ಅಧ್ಯಯನ ಮಾಡುವ ವಿದಾರ್ಥಿಗಳು ಮತ್ತು ಪಾಠ ಪ್ರವಚನ ಮಾಡುವ ಉಪಾಧ್ಯಾಯರು ಬಂದು ಯಾವ ಸಮಯದಲ್ಲಿ ಮೇಲುಛಾವಣಿಯು ಕೆಳಗೆ ಬೀಳುವುದೋ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಇದನ್ನು ಯಾರು ಕಟ್ಟಿದರು, ಯಾರು ಸೂಪರ್‌ವೈಜ್ ಮಾಡಿದರು, ಯಾರಿಗೆ ಕಂಟ್ರಾಕ್ಟ್ ಕೊಟ್ಟಿದ್ದರು ಎಂದು ಈ ದಿವಸ ಯೋಚನೆ ಮಾಡಬೇಕಾದ ಕಾಲ ಬಂದಿದೆ. ನಾನು ಈ ಕಾಲೇಜಿನ ಬಗ್ಗೆ ಟೀಕಾತ್ಮಕ ದೃಷ್ಟಿಯಿಂದ ಹೇಳುತ್ತಿಲ್ಲ. ಟೀಕೆ ಇದೆ. ಅಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಗಳಿದ್ದಾರೆ ಎಂಬುದನ್ನು ಈ ದಿವಸ ಯೋಚನೆ ಮಾಡಬೇಕು. ಮಾನ್ಯ ಸಚಿವರು ಈ ಕಟ್ಟಡದ ಭದ್ರತೆ ಬಗ್ಗೆ ಸಾಕಾದಷ್ಟು ಅನುಭವವಿರುವ ಇಂಜಿನಿಯರಿಂದ ಪರಿಶೀಲನೆ ಮಾಡಿಸಿ ಎಷ್ಟು ದಿವಸ ನಿಲ್ಲುತ್ತದೆ ಎಂದು ಸಾಕಾದಷ್ಟು ವಿವರಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ಮೊದಲನೆಯ ಸಲ ಹೇಳುತ್ತಿದ್ದಾರೆ, ಅನೇಕ ಸಲ ಆ ಸ್ಥಳಕ್ಕೆ ನಾನು ಭೇಟಿ ಕೊಟ್ಟಾಗ ಈ ವಿಚಾರ ಹೇಳಲಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಈಚೆಗೆ 3–4 ತಿಂಗಳ ಕೆಳಗೆ ಯಾವುದೋ ಪಾಠ ಹೇಳುತ್ತಿದ್ದಾಗ ಪ್ಲಾಸ್ಟರ್ ಮಾಡಿದ ಭಾಗ ಕೆಳಗೆ ಬಿತ್ತು, ಅದರಿಂದ ಯಾರಿಗೂ ಅಪಾಯವಾಗಲಿಲ್ಲ ಎಂದು ತಿಳಿದುಬಂದಿದೆ. ಆದುದರಿಂದ ಸ್ವಲ್ಪ ನೋಡಬೇಕು.

ಎರಡನೆಯದಾಗಿ ಆಸ್‌ಫಾಲ್ಟ್ ಮಾಡುವಾಗ ಯಾವ ರಸ್ತೆಗಳಲ್ಲಿ ಹೆಚ್ಚು ಪ್ರಮಾಣ ಇರುತ್ತದೆಯೋ ಅಂಥ ರಸ್ತೆಗಳಿಗೆ ಮೊದಲು ಮಾನ್ಯತೆ ಕೊಡಬೇಕು. ಮದ್ದೂರು ತಾಲ್ಲೂಕಿನಲ್ಲಿ ಟಾರು ಮಾಡುವ ರೀತಿ ಬಹಳ ಹಾಸ್ಯಾಸ್ಪದವಾಗಿದೆ. ಯಾವುದೋ ಒಂದು ರಸ್ತೆಯಲ್ಲಿ ಯಾವ ಮೋಟಾರೂ ಕೂಡ ತಿರುಗುವುದಿಲ್ಲ, ಸರ್ಕಾರಿ ಬಸ್ಸುಗಲಿ ಅಥವಾ ಪ್ರೈವೇಟ್ ಬಸ್ಸುಗಲಿ ಓಡಾಡುವುದಿಲ್ಲ, ಅಂಥ

ರಸ್ತೆಗೆ ಆಸ್ಫಾಲ್ಟ್ ಮಾಡುತ್ತಾರೆ. ಆದರೆ ಮದ್ದೂರು—ಕೌಡ್ಲೆಗೆ ಮಾರ್ಗದಲ್ಲಿ ದಿನವಹಿ 20 ಬಸ್ಸುಗಳು ತಿರುಗಾಡುತ್ತಿದ್ದರೂ ಕೂಡ ಅದಕ್ಕೆ ಸರಿಯಾದ ರಿಪೇರಿ ಕೂಡ ಇಲ್ಲ. ಹಿಂದೆ ಮಂತ್ರಿಗಳಾಗಿದ್ದವರು ಒಂದು ಕಡೆ ಟಾರು ಮಾಡಿಸಿ ಪ್ರೀತಿ ವಿಶ್ವಾಸ ಪಡೆಯಬೇಕೆಂದು ಆರ್ಡರು ಮಾಡಿದ್ದರು. ಆದರೆ ಅದು ಕಾರ್ಯಗತವಾಗಿಲ್ಲ. ಪ್ರಮಾಣ ಹೆಚ್ಚಾಗಿರುವ ಕಡೆ ಮೊದಲು ಟಾರು ಮಾಡಿಸಬೇಕೆಂದು ಈ ಸಮಯದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ, ಮಾಜಿ ಲೋಕೋಪಯೋಗಿ ಖಾತೆಯ ಮಂತ್ರಿಗಳು ಈಗ್ಗೆ ಸುಮಾರು ಎಂಟು ದಿವಸಗಳ ಕೆಳಗೆ ಒಂದು ಆರೋಪಣೆಯನ್ನು ಮಾಡಿದರು. ಹಿಂದೆ ಇದ್ದ ಸರಕಾರ ಯಾವ ಯಾವ ಕಾರ್ಯಕ್ರಮಗಳಿಗೆ ಸ್ಯಾಂಕ್ಷನ್ನನ್ನು ಕೊಟ್ಟಿತ್ತೋ ಅವುಗಳನ್ನೆಲ್ಲಾ ಬದಲಾಯಿಸಿ ಹಳೆಯ ಮೈಸೂರಿನ ಭಾಗಗಳನ್ನು ನಿರ್ಲಕ್ಷ ಮಾಡಲಾಗಿದೆ ಎಂದು ಹೇಳಿದರು. ಇವರೂ ಕೂಡ ಈಗ ಏಕೆ ಹೇಳಿದರು ಎನ್ನುವುದಕ್ಕೆ ಕಾರಣ ನನಗೆ ಗೊತ್ತಾಗಲಿಲ್ಲ. ನಾನು ಸರಕಾರದಲ್ಲಿ ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ನಿಮ್ಮ ಪಕ್ಷಕ್ಕೆ ಸೇರಿದಂತಹವರು ಮತ್ತು ಇಂದು ಯಾವ ಮರಾಮತ್ತು ಶಾಖೆಯಲ್ಲಿ ಮಂತ್ರಿಗಳು ಯಾವ ಸ್ಥಾನದಲ್ಲಿದ್ದಾರೋ ಅಂತಹ ಸ್ಥಾನದಲ್ಲಿ ಹಿಂದೆ ಇದ್ದವರು ಇವೊತ್ತಿನ ದಿವಸ ಜನತೆಯ ಮುಂದೆ ಈ ಸರಕಾರದ ಮೇಲೆ ಇಂತಹ ಒಂದು ದೊಡ್ಡ ಆರೋಪಣೆ ಮಾಡಿದ್ದಾರೆ. ಬಹುಶಃ ನನ್ನ ಅಭಿಪ್ರಾಯದಲ್ಲಿ ಇದು ಬೊಳಾರೆ ಯೋಜನೆಗೆ ಸಂಬಂಧಪಟ್ಟಿದ್ದೋ ಏನೋ ಎನ್ನುವ ವಿಚಾರ ನನಗೆ ಇಲ್ಲಿ ಅನಿಸುತ್ತದೆ. ಆದರೆ ಅವರ ಕಾಲದಲ್ಲೇ ಬೊಳಾರೆ ಯೋಜನೆ ಸ್ಯಾಂಕ್ಷನ್ನು ಆಗಿತ್ತು ಮತ್ತು ಅವರಿಗೂ ಅದು ಬೇಕಾಗಿತ್ತು. ಅದೂ ಆಯಿತು. ಇವೊತ್ತು ಇನ್ನಾವ ದುರುದ್ದೇಶದಿಂದ ಮತ್ತು ರಾಜಕೀಯದ ಉದ್ದೇಶದಿಂದ ಹೇಳಿದರು ಎನ್ನುವುದಕ್ಕೆ ವೈಯುಕ್ತಿಕವಾಗಿ ಇಲ್ಲಿ ಸರಕಾರ ವಿವರಣೆ ಕೊಡಬೇಕಾಗುತ್ತದೆ. ಇದೇ ಅಭಿಪ್ರಾಯಗಳನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಮುಕ್ಕಣ್ಣಪ್ಪನವರೂ ಕೂಡ ಇಲ್ಲಿ ವ್ಯಕ್ತ ಮಾಡಿದರು. ಇದರ ಬಗ್ಗೆ ನಾನಿಲ್ಲಿ ವಿವಾದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಇಂತಹ ಅಪಶಕುನದ ಮಾತುಗಳು ಬರುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಸನ್ಮಾನ್ಯ ಸಭಾಪತಿಗಳೇ ನಮ್ಮ ಮುಂದೆ ಇಟ್ಟಿರುವ ಲೋಕೋಪಯೋಗಿ ಖಾತೆಯ ಡಿಮ್ಯಾಂಡುಗಳನ್ನು ಸ್ವಾಗತಿಸುತ್ತಾ ಈ ಇಲಾಖೆಯು ಸಮರ್ಪಕವಾಗಿ ದಕ್ಷತೆಯಿಂದ ಕೆಲಸಮಾಡುತ್ತಿದೆ ಎಂದು ಹೇಳುವುದಕ್ಕೆ ನಾನು ಸಂತೋಷಪಡುತ್ತೇನೆ. ಆದರೆ ಕೆಲವು ನ್ಯೂನತೆಗಳನ್ನು ಸರಿಪಡಿಸಬೇಕಾಗಿದೆ. ಕೆಲವು ಕಡೆಗಳಲ್ಲಿ ಅವಶ್ಯಕತೆಗಳಿಗಿಂತ ಹೆಚ್ಚು ಇಂಜನೀಯರುಗಳು ಮತ್ತು ನೌಕರರುಗಳು ಇರುತ್ತಾರೆ ಮತ್ತು ಕೆಲವು ಕಡೆಗಳಲ್ಲಿ ಕಮ್ಮಿ ಸಂಖ್ಯೆಯಲ್ಲಿರುವುದು ಕಂಡುಬರುತ್ತಿದೆ. ಅದುದರಿಂದ ಕೆಲಸಗಳ ಪ್ರಮಾಣಕ್ಕನುಗುಣವಾಗಿ ಇಲ್ಲಿ ಸ್ಟಾಫ್‌ಗಳನ್ನು ನೇಮಕಮಾಡಬೇಕಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಇಲಾಖೆಯಲ್ಲಿರುವ ಇಂಜನೀಯರುಗಳು ಕ್ವಾಲಿಟಿ ಆಫ್ ವರ್ಕ್ ಮತ್ತು ಕ್ವಾಲಿಟಿ ಆಫ್ ಮೆಟೀರಿಯಲ್ಸ್‌ಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನ ತೋರಬೇಕು. ಮತ್ತು ಈಗಿನ ಪರಿಸ್ಥಿತಿಯಲ್ಲಿ ತೀವ್ರ ಸುಧಾರಣೆಯಾಗಬೇಕು. ಚೀಫ್‌ಇಂಜನಿಯರಾಗಲೀ ಸೂಪರಿಂಟೆಂಡಿಂಗ್ ಇಂಜನೀಯರಾಗಲೀ ಎಕ್ಸಿಕ್ಯೂಟಿವ್ ಇಂಜನಿಯರಾಗಲೀ ತಮ್ಮ ಇನ್ಸ್‌ಪೆಕ್ಷನ್ನಿಗಾಗಿ ಹೋದಾಗ ಸ್ಪಾಟುಗಳಿಗೆ ಹೋಗಿ ಅಲ್ಲಿ ಕ್ವಾಲಿಟಿ ಆಫ್ ವರ್ಕು ಮತ್ತು ಕ್ವಾಲಿಟಿ ಆಫ್ ಮೆಟೀರಿಯಲ್ಲುಗಳು ಸ್ಪೆಸಿಫಿಕೇಷನ್ನು ಪ್ರಕಾರ ಕೆಲಸಗಳು ನಡೆದಿರುವುದೇ ಇಲ್ಲವೇ ಎಂಬುದರ ಬಗ್ಗೆ ಪರಿಶೀಲನೆ ಮಾಡಿ ಸರಕಾರಕ್ಕೆ ಒಂದು ವರದಿಯನ್ನು ಕಳುಹಿಸಿಕೊಡಬೇಕು. ಪ್ರತಿ ಸಂದರ್ಭದಲ್ಲೂ ಅಳತೆಗಳನ್ನು ಚೆಕ್ ಮಾಡುವ ಪದ್ಧತಿಯನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಮತ್ತು ಈ ಇಲಾಖೆಯಲ್ಲಿ ಕೆಲವು ಕೆಲಸಗಳನ್ನು ಸಿಮೆಂಟಿನ ಅಭಾವದಿಂದಾಗಿ ಬಹಳ ದಿವಸಗಳಿಂದಲೂ ನಡೆಯದೇ ನಿಂತುಹೋಗಿವೆ. ನಮ್ಮ ತುಮಕೂರು ತಾಲ್ಲೂಕಿನಲ್ಲಾಗುತ್ತಿರುವ ಫಸ್ಟ್ ಗ್ರೇಡು ಕಾಲೇಜು ಕಟ್ಟಡ ಸುಮಾರು ಮೂರು ವರ್ಷಗಳಿಂದಲೂ ಸಿಮೆಂಟಿನ ಅಭಾವದಿಂದಾಗಿ ಕೆಲಸಗಳು ಕುಂಠಿತವಾಗುತ್ತಿವೆ. ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಸಾಕಾದಷ್ಟು ಸಿಮೆಂಟನ್ನು ಒದಗಿಸಿ ಈ ಕಟ್ಟಡದ ಕೆಲಸವನ್ನು ಮುಗಿಸಿಕೊಡಬೇಕೆಂದು ಸರಕಾರದಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಕಟ್ಟಡಗಳಿಗೆ ಬೇಕಾಗಿರತಕ್ಕ ಅವಶ್ಯಕವಾದ ಮರದ ಸಾಮಾನುಗಳನ್ನು ಕೊಡುವುದರ ಕಡೆಗೆ ಅಧಿಕಾರಿಗಳು ಹೆಚ್ಚು ಗಮನಕೊಡಬೇಕು. ಈಗ ತೇಗದ ಮರ ಸಿಗುವುದು ಕಷ್ಟವಾಗಿದೆ ಎಂದು ಕಂಟ್ರಾಕ್ಟರುಗಳು ಯಾವುದೋ ಕೆಲಸಕ್ಕೆ ಬಾರದ ಮರಗಳನ್ನು ಉಪಯೋಗಿಸುತ್ತಿರುವುದರಿಂದ ಇಲಾಖೆಗೂ ಅದರಿಂದ ನಷ್ಟವಾಗುತ್ತದೆ. ಕಬ್ಬಿಣ ಇತ್ಯಾದಿ ಸಾಮಾನುಗಳನ್ನು ಇಲಾಖೆಯವರೇ ಒದಗಿಸುವಂತೆ ಈ ಮರದ ಸಾಮಾನಗಳನ್ನೂ ಒದಗಿಸಿಕೊಟ್ಟರೆ ಕಟ್ಟಡಗಳು ಬಂದೂಬಸ್ತಾಗಿರುತ್ತವೆ ಮತ್ತು ಇಲಾಖೆಯ ಹಣವೂ ಪೋಲಾಗದೆ ಇರುತ್ತದೆ ಎಂದು ನಾನಿಲ್ಲಿ ಸಲಹೆ ಮಾಡುತ್ತೇನೆ.

(ಶ್ರೀಮತಿ ಜಿ. ಸಿ. ಭಾಗೀರಥಮ್ಮ)

ನಮ್ಮ ತಾಲ್ಲೂಕಿನಲ್ಲಿ ಕೆಲವು ತಾಲ್ಲೂಕು ಬೋರ್ಡುರಸ್ತೆಗಳಿವೆ. ಇವುಗಳನ್ನು ಪಿ.ಡಬ್ಲ್ಯು.ಡಿ. ಇಲಾಖೆಯವರು ತೆಗೆದುಕೊಳ್ಳಬೇಕಾಗಿದೆ. ತಾಲ್ಲೂಕು ಬೋರ್ಡುಗಳಲ್ಲಿ ಅದಕ್ಕೆ ಬೇಕಾಗುವಷ್ಟು ಹಣ ಮತ್ತು ತಜ್ಞರ ನೆರವು ಇಲ್ಲ. ಈಗಾಗಲೇ ಕೆಲವು ರಸ್ತೆಗಳನ್ನು ಇಲಾಖೆಯವರೇ ತೆಗೆದುಕೊಂಡಿದ್ದಾರೆ. ಇನ್ನೂ ಉಳಿದಿರುವ ಹಾಗೂ ಕೆಲವು ಅವಶ್ಯಕವಾದ ರಸ್ತೆಗಳನ್ನು ಪಿ.ಡಬ್ಲ್ಯು.ಡಿ. ಇಲಾಖೆಗೆ ಸೇರಿಸಬೇಕೆಂದು ಸರಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಮತ್ತು ನಮ್ಮ ಮಾನ್ಯ ಮಂತ್ರಿಗಳು ಒಂದು ವರ್ಷದ ಕೆಳಗೆ ನಮ್ಮ ತಾಲ್ಲೂಕಿಗೆ ಬಂದಿದ್ದಾಗ ಅಲ್ಲಿದ್ದ ಕೆಲವು ದೊಡ್ಡ ದೊಡ್ಡ ಹಳ್ಳಗಳನ್ನು ನೋಡಿಕೊಂಡು ಬಂದಿದ್ದಾರೆ. ಬಳ್ಳಾರಿ ಹೋಬಳಿ ಮುದಿಗೆರೆ ಹತ್ತಿರ ಒಂದು ಹಳ್ಳಕ್ಕೆ ಒಂದು ಹೈ ಲೆವಲ್ ಕಾಸ್ ವೇ ಆಗಬೇಕೆಂದು ಮನವಿ ಮಾಡಿದ್ದೆವು. ಈಗ ಹಳ್ಳಿಗಳಿಗೆ ಹೋಗಬೇಕಾದರೆ 7-8 ಮೈಲಿಗಳಷ್ಟು ದೂರ ಬಳಸಿಕೊಂಡು ಹೋಗಬೇಕಾಗಿದೆ. ಇಲ್ಲಿನ ಹಳ್ಳಕ್ಕೆ ಒಂದು ಸೇತುವೆಯನ್ನು ಕಟ್ಟಿಸಿಕೊಟ್ಟರೆ ಇಲ್ಲಿನ ಜನಕ್ಕೆ ಓಡಾಡಲು ಬಹಳ ಅನುಕೂಲವಾಗುತ್ತದೆ. ರೈತರುಗಳಿಗೆ ಇಲ್ಲಿರುವ ಹಳ್ಳಗಳಿಂದ ಬಹು ತೊಂದರೆಯಾಗಿದೆ. ಇದನ್ನು ಆದಷ್ಟು ಬೇಗ ಮಾಡಿಸಿಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಇದೇ ರೀತಿ ಕೋರಾ ಹೋಬಳಿ ಅಹೋಬಲ ಅಗ್ರಹಾರದ ಹತ್ತಿರ ಒಂದು ದೊಡ್ಡ ಹಳ್ಳಕ್ಕೆ ಒಂದು ಸೇತುವೆ ಆಗಬೇಕೆಂದು ಕೇಳಿಕೊಂಡಿದ್ದರು. ಅದು ಈಗ ಯಾವ ಹಂತದಲ್ಲಿದೆಯೋ ನಮಗೆ ತಿಳಿಯದು. ಇಂತಹ ಹಳ್ಳಗಳಿಗೆ ಬೇಗನೆ ಸೇತುವೆಗಳನ್ನು ಮಾಡಿಸಿಕೊಡಬೇಕು.

ಕೊನೆಯದಾಗಿ, ಕೆಲವು ತಾಲ್ಲೂಕು ಬೋರ್ಡು ರಸ್ತೆಗಳನ್ನು ಪಿ.ಡಬ್ಲ್ಯು.ಡಿ. ಇಲಾಖೆಗೆ ತೆಗೆದುಕೊಂಡು ರೈತರಿಗೆ ಮತ್ತು ವಾಹನಗಳು ಓಡಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ವಿ. ಗೌಡ (ಪಾಳ್ಯಂ).—ಮಾನ್ಯ ಅಧ್ಯಕ್ಷರೇ 1960-61ನೇ ಮತ್ತು 61-62ನೇ ಆಡಿಟ್ಟು ವರದಿಯನ್ನು ಮತ್ತು ಅದಕ್ಕೆ ಸಂಬಂಧಪಟ್ಟಹಾಗೆ ನಮ್ಮ ಪಬ್ಲಿಕ್ಕು ಅಕೌಂಟು ಕಮಿಟಿಯವರು ಏನೊಂದು ವರದಿಯನ್ನು ಕೊಟ್ಟಿದ್ದಾರೋ ಮತ್ತು ಏನು ಅಭಿಪ್ರಾಯಗಳನ್ನು ಶ್ರೀಮಾನ್ ಎಸ್. ಎಂ. ಕೃಷ್ಣರವರು ಇಲ್ಲಿ ಪ್ರಸ್ತಾಪ ಮಾಡಿದರೋ ಅವುಗಳನ್ನು ಪುಷ್ಟೀಕರಿಸುತ್ತನೆ. ಚೀಫ್ ಇಂಜನಿಯರವರು ಏನೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದರೋ ಅವೆಲ್ಲವೂ ಕೂಡ ಈ ಆಡಿಟ್ಟು ವರದಿಯಲ್ಲೇ ಇವೆ. ಅನೇಕ ಕೆಲಸಗಳನ್ನು ನಮ್ಮ ಸರಕಾರದವರು ಅಂದಾಜು ಪೂರ್ಣವಾಗದೆ ಇದ್ದರೂ ಮಂಜೂರಾತಿ ಪಡೆಯದೇ ಇರುವಂತಹ ಕೆಲಸಗಳು ಇವುಗಳಿಗೆ ಸಂಬಂಧಪಟ್ಟಂತೆ ಆಯವ್ಯಯದ ಪಟ್ಟಿಯಲ್ಲಿರುವಂತೆ ಕೆಲಸ ಕಾರ್ಯಗಳನ್ನು ತೆಗೆದುಕೊಂಡಿದ್ದಾರೆಯೇ ಎನ್ನುವುದನ್ನು ನಾವು ಇಲ್ಲಿ ನೋಡಬೇಕು. ಅದನ್ನು ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಚೆನ್ನಾಗಿ ಪರಿಶೀಲನೆ ಮಾಡಿ ಮಾನ್ಯ ಸಭೆಯ ಒಪ್ಪಿಗೆ ಪಡೆದು ಮಾಡಿದ್ದಾರೆಯೇ ಇಲ್ಲವೇ ಅಥವಾ ಕಾನೂನು ನೀತಿ ನಿಯಮಗಳಿಗೆ ಅನುಗುಣವಾಗಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳದೇ ಇರುವುದು ಮತ್ತು ಸಕಾಲದಲ್ಲಿ ಮಾಡಿದ್ದರೆ ಅದಕ್ಕೆ ಅನುಮೋದನೆಯನ್ನು ಮಾಡುತ್ತೇವೆ. ಇಲ್ಲಿರುವ ನಾಲ್ಕು ಡಿಮ್ಯಾಂಡುಗಳಿಗಾಗಿ ಸುಮಾರು 22 ಕೋಟಿ 25 ಲಕ್ಷದಷ್ಟು ಬೇಕೆಂದು ಕೇಳಿದ್ದಾರೆ. ಹೋದ ಸಲ ಇದಕ್ಕಿಂತ ಹೆಚ್ಚಿಗೆ ಖರ್ಚು ಮಾಡಿದೆ ಎಂದು ರಿವೈಸು ಎಸ್ಟಿಮೇಟನ್ನೂ ತೋರಿಸಿದ್ದಾರೆ. ಅದರಲ್ಲಿರುವಂತೆ ರಿವೈಸ್ಡ್ ಎಸ್ಟಿಮೇಟು 63-64ನೇ ಸಾಲಿನಲ್ಲಿ 1,07,39,000 ಬರುತ್ತದೆ. ಆದರೆ ಇದೇ ವರ್ಷ 95,83,000 ಎಂದರೆ ಸುಮಾರು 11 ಲಕ್ಷದಷ್ಟು ಕಡಿಮೆ ಎಂದು ತೋರಿಸಿದ್ದಾರೆ. ಖರ್ಚಿನಲ್ಲಿ ಸುಮಾರು ನೂರು ಲಕ್ಷಕ್ಕಿಂತಲೂ ಹೆಚ್ಚಿಗೆ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ.

ಈ ಎಸ್ಟಾಬ್ಲಿಷ್‌ಮೆಂಟನ್ನು ನಾನು ಲೆಕ್ಕ ಹಾಕಿ ನೋಡಿದ್ದರಲ್ಲಿ ಇದು ಶೇಕಡ 9 ರಂತೆ ವರ್ಕ್ ಔಟ್ ಆಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಈ ಶಿಬ್ಬಂದಿವೆಚ್ಚವನ್ನು ಆದಷ್ಟು ಬೇಗ ತಗ್ಗಿಸಲು ಪ್ರಯತ್ನ ನಡೆಸಬೇಕೆಂದು ನಾನು ಸೂಚಿಸಲಿಚ್ಛಿಸುತ್ತೇನೆ. 62-63ಕ್ಕೆ 347 ಲಕ್ಷ ಖರ್ಚು ಮಾಡಿರುವಾಗ 63-64ಕ್ಕೆ 57 ಲಕ್ಷ ಖರ್ಚುಮಾಡಿದ್ದಾರೆ, ಈ ವರ್ಷಕ್ಕೆ ಕೇವಲ 97 ಲಕ್ಷ ಮಾತ್ರ ಕೇಳಿದ್ದಾರೆ. 100 ಕ್ಯಾಪಿಟಲ್ ಔಟ್‌ಲೇನಲ್ಲಿ 36 ಲಕ್ಷ ಕಡಮೆ ಕೇಳಿರುವುದೂ ಮತ್ತು ಹೋದ ವರ್ಷ ಕಡಮೆ ಕೇಳಿರುವುದನ್ನು ತಾವು ಆಯವ್ಯಯ ಪಟ್ಟಿಯಲ್ಲಿ ನೋಡಬಹುದು. ಆದರೆ ಈ ಪಂಚವಾರ್ಷಿಕ ಯೋಜನೆಯಲ್ಲಿ ಈ ಖಾತೆಗೆ ಒದಗಿಸಿರತಕ್ಕ ಹಣದಿಂದ ಸಮರ್ಪಕವಾಗಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ನಮ್ಮ ಗ್ರಾಮಾಂತರ ಪ್ರದೇಶಗಳ ಆರ್ಥಿಕ, ಸಾಮಾಜಿಕ ಮುನ್ನಡೆಗೆ ಈ ಸಂಚಾರ ಸೌಲಭ್ಯಗಳನ್ನು ಒದಗಿಸದೆ ಸಾಧ್ಯವಿಲ್ಲವೆಂಬ ಅಂಶ ಎಲ್ಲರಿಗೂ ತಿಳಿದಿರತಕ್ಕದ್ದೇ ಆಗಿದೆ. ಈ ವಿಚಾರವನ್ನು ಮಾನ್ಯ ಮಂತ್ರಿಗಳೂ ಒಪ್ಪಿದ್ದಾರೆ. ಈ

ವಿಚಾರವನ್ನು ಮಂತ್ರಿಗಳು ಮತ್ತೊಮ್ಮೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈ ದಿವಸ ಮೈಸೂರು ರಾಜ್ಯದಲ್ಲಿ 100 ಚ. ಮೈ.ಗಳಿಗೆ 40 ಮೈಲಿ ರಸ್ತೆ ಇರಬೇಕೆಂದು ಒಂದು ತೀರ್ಮಾನ ಮಾಡಿಕೊಂಡಿದ್ದೇವೆ. ಈಗ ಈ ವರದಿಯಲ್ಲಿ ಹೇಳಿರುವ ಪ್ರಕಾರ 16 ಮೈಲಿ ಸರ್‌ಫೇಸ್ ರೋಡಿದೆ, 26 ಮೈಲಿ ಸರ್‌ಫೇಸಿಲ್ಲದ ರೋಡಿದೆ. ಇದಕ್ಕೆಲ್ಲಾ ಈಗ ದುಡ್ಡನ್ನು ಖರ್ಚುಮಾಡಬೇಕಾಗಿದೆ. ನಾನು ನನ್ನ ಒಂದು ತಾಲ್ಲೂಕಿನ ವಿಚಾರವನ್ನು ಹೇಳುವುದಾದರೆ ಅದು 1 100 ಚ. ಮೈ. ವಿಸ್ತೀರ್ಣ ವಿದೆ. ಅಲ್ಲಿ 100 ಚ. ಮೈ. ಗಳಿಗೆ 6 ಮೈಲಿ ಸರ್‌ಫೇಸ್ ರೋಡ್, ಇನ್ನು 13 ಮೈಲಿ ಸರ್‌ಫೇಸಿಲ್ಲದ ರೋಡು ಇರಬೇಕಾಗುತ್ತದೆ. ಹೀಗೇ ನಮ್ಮ ದೇಶದಲ್ಲಿ ಇನ್ನೂ ಎಷ್ಟೋ ಕೆಲಸಗಳಾಗಬೇಕಾಗಿದೆ. ಆದ್ದರಿಂದ ಮಾನ್ಯ ಸಚಿವರು ಈ ವಿಚಾರವನ್ನು ಮತ್ತೊಮ್ಮೆ ಪರಿಶೀಲನೆಮಾಡಬೇಕೆಂದು ಹೇಳುತ್ತೇನೆ. ಇನ್ನು ಈಗ ಅವರ ವರದಿಯಲ್ಲೇ ಹೇಳಿರುವಂತೆ ಗ್ರಾಮಾಂತರ ರಸ್ತೆಗಳನ್ನು ಈಗ 6,700 ಮೈಲಿಗಳವರೆಗೆ ಪೂರ್ಣಮಾಡಲಾಗಿದೆ ಎಂದು ತಿಳಿಸಿದೆ. ಈ ರಸ್ತೆಗಳಿಗಿನ್ನೂ 5 ಕೋಟಿ 9ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಇದರಲ್ಲಿ ಹೇಳಿದ್ದಾರೆ. ಈ ವರದಿಯಲ್ಲೀಗ ಮಾನ್ಯ ಮಂತ್ರಿಗಳು ನಮ್ಮಲ್ಲಿ 9,700 ಮೈಲಿ ರಸ್ತೆ ಪೂರ್ಣವಾಗಿದೆ ಎಂದು ಹೇಳಿರತಕ್ಕದ್ದು ನಿಜ ವಾಗಿಯೂ ಅಷ್ಟು ರಸ್ತೆ ಆಗಿದೆಯೋ ಎಂಬ ಅನುಮಾನ ಬರುತ್ತಿದೆ. ಕಾರಣವೇನೆಂದರೆ—ಒಂದು ಮೈಲಿಗೆ 6 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ ಲೆಕ್ಕ ಬರುತ್ತದೆ. ಆದರೆ ಇಷ್ಟೊಂದು ದುಡ್ಡನ್ನು ಅಲ್ಲಿ ಖರ್ಚುಮಾಡಿಲ್ಲ. ಅಲ್ಲಿ ನಡೆದಿರತಕ್ಕ ಕೆಲಸವೆಲ್ಲಾ ಎರಡು ಕಡೆ ಚರಂಡಿಯನ್ನು ತೆಗೆದು ಆ ಮಣ್ಣನ್ನು ಎತ್ತಿ ರಸ್ತೆಯ ಮಧ್ಯಕ್ಕೆ ಹಾಕಿರತಕ್ಕದ್ದು ವಿನಾ ಅಲ್ಲಿನ್ನೇನೂ ಕೆಲಸಮಾಡಿಲ್ಲ. ಅಲ್ಲಿ ಕ್ರಾಸ್ ಡ್ರೈನೇಜುಗಳನ್ನೇನೂ ಮಾಡಿಲ್ಲ. ಈಗ ಈ ರಸ್ತೆಗಳಿಗೆ ಪುನಃ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಅದಕ್ಕಾಗಿ ಈಗ ಬಡ್ಜೆಟ್ಟಿನಲ್ಲಿ 5 ಕೋಟಿ 9 ಸಾವಿರ ರೂಪಾಯಿಗಳನ್ನು ಸೇರಿಸಲಾಗಿದೆ. ಈ ಕಾರ್ಯ 60-61 ಅಥವಾ 61-62ರಲ್ಲಿ ಆಗಿರಬಹುದು. ಅಲ್ಲಿಂದ ಈವರೆಗೂ ಅವುಗಳ ರಕ್ಷಣೆಯೇನು ? ಇಷ್ಟು ಹಣವನ್ನು ಖರ್ಚುಮಾಡಿ ಮಾಡಿದ ರಸ್ತೆಗಳಿಂದ ಗ್ರಾಮಾಂತರ ಪ್ರದೇಶದ ಜನರಿಗಾದ ಪ್ರತಿಫಲವೇನು ಎಂಬುದನ್ನು ನಾವು ಆಲೋಚಿಬೇಕು. ಈ ರಕ್ಷಣೆ ಕಾರ್ಯವಿಲ್ಲದೆ ಇರುವುದರಿಂದ ಈಗಾಗಲೇ ಈ ರಸ್ತೆಗಳಲ್ಲಿ ಶೇಕಡ 50 ರಷ್ಟು ರಸ್ತೆ ನಶಿಸಿ ಹೋಗಿದೆ. ಈ ವಿಚಾರದಲ್ಲಿ ಸರ್ಕಾರದವರ ಕಾರ್ಯ ನೀತಿ, ಅವರ ಮೇಲ್ವಿಚಾರಣೆ ಸರಿಯಾಗಿಲ್ಲವೆಂಬ ಅಂಶವನ್ನು ನಾವು ಮೊದಲಿಂದಲೂ ತಿಳಿಸುತ್ತಲೇ ಬಂದಿದ್ದೇವೆ. ಇದರಿಂದ ಜನರಿಗೆ ಎಳ್ಳಷ್ಟೂ ಪ್ರತಿಫಲ ದೊರೆತಿಲ್ಲ. ಈ 9 ಸಾವಿರ ಚಿಲ್ಲರೇ ಮೈಲಿ ರಸ್ತೆಗಳನ್ನು ಮುಂದೆ ಮೆಟಲ್ ರೋಡ್‌ಮಾಡಬೇಕಾದರೆ—ಒಂದು ಮೈಲಿಗೆ ಏನಿಲ್ಲಾ ಎಂದರೂ 10 ಸಾವಿರದಂತೆ ಲೆಕ್ಕ ಹಾಕಿದರೂ ಕೋಟಿಗಟ್ಟಲೇ ಹಣಬೇಕಾಗುವುದು. ಇನ್ನು ಇದರ ಜೊತೆಗೆ ಈ ಇಲಾಖೆ ಜಿಲ್ಲಾ ಬೋರ್ಡ್ ರಸ್ತೆಗಳನ್ನು ಬೇರೆ ತೆಗೆದುಕೊಂಡಿದೆ. ಅದೂ ಒಂದು ಸಾವಿರ ಮೈಲಿಗಳು ಅದಕ್ಕೆ ಏಳೂವರೆ ಕೋಟಿಬೇಕಾಗುತ್ತದೆ. ಇನ್ನು ಈ ರಸ್ತೆಗೆ ಒಂದು ಕೋಟಿ ಒಟ್ಟು ಎಂಟು ಅಥವಾ ಎಂಟೂವರೆ ಕೋಟಿ ರೂಪಾಯಿಗಳಲ್ಲಿ ಇಷ್ಟೊಂದು ರಸ್ತೆಯನ್ನು ಇಂಪ್ರೂವ್ ಮಾಡುವುದಕ್ಕಾಗು ತ್ತದೆಯೇ ಎಂಬುದು ನನಗೆ ಅರ್ಥವಾಗುತ್ತಿಲ್ಲ.

4 P.M.

ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 9 ಕೋಟಿ 9 ಲಕ್ಷ 30 ಸಾವಿರ ರೂಪಾಯಿ ಗಳನ್ನು ಈ ಬಾಬಿಗೆ ಒದಗಿಸಿದ್ದಾರೆ. ಸ್ಪಿಲ್ಓವರ್ ವರ್ಕ್ಸ್ ಎಂದೇನು ಉಂಟೋ ಅವುಗಳಿಗೆ 8 ಕೋಟಿ ರೂಪಾಯಿಗಳು ಬೇಕಾಗುತ್ತದೆ. ರೂರಲ್ ಕಮ್ಯೂನಿಕೇಷನ್ಸಿಗೆ 9 ಕೋಟಿ 30 ಲಕ್ಷ 46 ಸಾವಿರ ರೂಪಾಯಿಗಳು ಎಂದು ಹೇಳಿದ್ದೀರಿ. ಇದನ್ನು ಯಾವ ರೀತಿ ಪಡೆಯಬೇಕೆಂಬುದರ ಬಗ್ಗೆ ಸರ್ಕಾರ ವಿಚಾರ ಮಾಡಿರುವುದು ನನಗಂತೂ ಅರ್ಥವಾಗುತ್ತಿಲ್ಲ. 62-63ನೇ ಸಾಲಿನಲ್ಲಿ ಏನು ಒದಗಿಸಿದ್ದರೋ ಅದಕ್ಕಿಂತ ಹೆಚ್ಚು. ಕೇವಲ 600 ಲಕ್ಷ ರೂಪಾಯಿಗಳು 62-63ನೇ ಸಾಲಿ ನಲ್ಲಿಯೂ 700 ಲಕ್ಷ ರೂಪಾಯಿಗಳನ್ನು 63-64ನೇ ಸಾಲಿನಲ್ಲಿಯೂ ಈ ಬಾಬಿಗೆ ಖರ್ಚು ಮಾಡಿ ದ್ದಾರೆ. ಆದ್ದರಿಂದ ಬಡ್ಜೆಟ್ಟಿನಲ್ಲಿ ಒದಗಿಸಿದ್ದ ಹಣವೆಲ್ಲಾ ಪೂರ್ತಿ ಖರ್ಚಾಗಿದೆಯೆಂದು ಹೇಳು ವುದರಲ್ಲಿ ಸ್ವಲ್ಪಮಟ್ಟಿಗೆ ಅನುಮಾನವಿದೆ. ಆದ್ದರಿಂದ ಈ ವಿಚಾರದಲ್ಲಿ ಒಂದು ಯೋಜನಾ ಬದ್ಧವಾದ ಕಾರ್ಯಕ್ರಮವನ್ನು ಹಾಕಿಕೊಳ್ಳದೆ ಈಗಿನ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸಾಧ್ಯವಿಲ್ಲವೆಂಬ ಖಚಿತವಾದ ನಿರ್ಧಾರಕ್ಕೆ ಸರ್ಕಾರ ಬರಬೇಕು.

ಇನ್ನು ಹಿಂದೆ ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾ ಬೋರ್ಡ್‌ಗಳಿಗೆ ಸಂಬಂಧಪಟ್ಟ ರಸ್ತೆಗಳು ಏನಿದ್ದುವು ಅವು ಬಹಳವಾಗಿ ಕೆಟ್ಟಿವೆ. ಅವುಗಳ ಪರಿಸ್ಥಿತಿಯಂತೂ ಹೇಳತೀರದು. ಅಂತಹ ರಸ್ತೆ ಗಳಲ್ಲಿ ಬಸ್ಸುಗಳ ಓಡಾಟ ಜಾಸ್ತಿಯಾಗಿದೆ. ಮೋಟಾರ್ ಟ್ಯಾಕ್ಸೇಷನ್ ಆಕ್ಟ್ ಪ್ರಕಾರ ಏನು ಆದಾಯ ಈ ಬಾಬಿನಿಂದ ಬರುತ್ತಿದೆಯೋ ಅದರಲ್ಲಿ ಸ್ವಲ್ಪ ಭಾಗವನ್ನು ಕಾಯಿದೆ ಪ್ರಕಾರ ತಾಲ್ಲೂಕ್

(ಶ್ರೀ ಜಿ. ವಿ. ಗೌಡ)

ಬೋರ್ಡಿಗೆ ಕೊಡತಕ್ಕ ವ್ಯವಸ್ಥೆಯನ್ನು ಮಾಡಲಿಲ್ಲ. ಇಂತಹ ರಸ್ತೆಗಳಲ್ಲಿ ಮೋಟಾರು ಮತ್ತು ಇತರ ವಾಹನಗಳು ಓಡಾಡಲು ರಾಜಕೀಯ ಪರಿಸ್ಥಿತಿಯನ್ನು ಇಲ್ಲಿ ತರುವುದಕ್ಕೆ ಏನೇನು ಕೆಲಸ ಗಳನ್ನು ಮಾಡಬೇಕೋ ಆ ಕೆಲಸಗಳನ್ನು ಮಾಡಿದ್ದಾರೆ. ಒಂದುವೇಳೆ ಯಾವುದಾದರೂ ತಾಲ್ಲೂಕ್ ಬೋರ್ಡ್‌ಗಳಿಗೆ ತಕ್ಕ ಚೈತನ್ಯವಿಲ್ಲದೇ ಹೋದರೆ ಸರ್ಕಾರ ಅದನ್ನು ತಿಳಿದುಕೊಂಡು ತಾವೇ ಆ ಕೆಲಸವನ್ನು ವಹಿಸಬೇಕು. ಚೈತನ್ಯವಿರತಕ್ಕ ತಾಲ್ಲೂಕ್ ಬೋರ್ಡ್‌ಗಳಿಗೆ ಮೋಟಾರು ವಾಹನಗಳ ತೆರಿಗೆಯ ಒಂದು ಪಾಲನ್ನು ಕೊಟ್ಟು ಆ ರಸ್ತೆಗಳನ್ನು ಸುಧಾರಿಸುವುದಕ್ಕೆ ತಕ್ಕ ವ್ಯವಸ್ಥೆ ಮಾಡ ಬೇಕೆಂದು ಹೇಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರ ಸೌಲಭ್ಯ ತುಂಬಾ ಅವಶ್ಯಕ. ಅವನ್ನು ಪೂರೈಸುವುದಕ್ಕೆ ಸರ್ಕಾರ ಯೋಚನೆ ಮಾಡಬೇಕು. ಈಗ ರೂರಲ್ ಕಮ್ಯೂನಿಕೇಷನ್ ರಸ್ತೆಗಳನ್ನು ಸರಿಯಾಗಿ ಮಾಡದೇ ಇದ್ದರೆ ಅವುಗಳ ಸೌಲಭ್ಯಗಳನ್ನು ರೈತರು ಖಂಡಿತವಾಗಿ ಪಡೆಯುವುದಕ್ಕಾಗು ವುದಿಲ್ಲ. ಅದಾಗದೆ ಯಾವ ಕೆಲಸವನ್ನು ಸಹ ಮಾಡುವುದಕ್ಕಾಗುವುದಿಲ್ಲವೆಂಬುದನ್ನು ಸರ್ಕಾರದವರು ತಿಳಿದು ಒಂದು ಯೋಜನಾ ಬದ್ಧವಾದ ಕಾರ್ಯಕ್ರಮವನ್ನು ಹಾಕಿಕೊಂಡು 100, 150, 200 ಮೈಲಿಗಳ ರಸ್ತೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಈ ರೀತಿ ಅಂಕಿ ಅಂಶಗಳನ್ನು ಕೊಟ್ಟರೆ ಇದರಿಂದೇನೂ ಪ್ರಯೋಜನವಾಗುವುದಿಲ್ಲವೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿ ದ್ದೇನೆ. ಏನೊಂದು ಅಂಕಿ ಅಂಶಗಳನ್ನು ಇವರು ಒದಗಿಸಿಕೊಟ್ಟಿದ್ದಾರೋ ಅದು ಸರಿಯಾಗಿರಬೇಕು. ಚೀಫ್ ಇಂಜನಿಯರುಗಳಾಗಲೀ ಅಥವಾ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಾಗಲೀ ಈ ಬಾಬಿನಲ್ಲಿ ಎಷ್ಟರಮಟ್ಟಿಗೆ ದುಡ್ಡು ಖರ್ಚಾಗಿದೆ, ಅದರ ಪ್ರತಿಫಲವೆಷ್ಟು ಎಷ್ಟರಮಟ್ಟಿಗೆ ಈ ಬಾಬಿಗೆ ಹಣವನ್ನು ಒದಗಿಸಿದ್ದಾರೆ ಎನ್ನುವ ವಿಚಾರದಲ್ಲಿ ಸರಿಯಾದ ವಿವರಣೆ ಕೊಡುವುದು ಬಹಳ ಅಗತ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇನ್ನು ನನ್ನ ಮಾನ್ಯ ಸ್ನೇಹಿತರು ನ್ಯಾಷನಲ್ ಹೈವೇ ವಿಚಾರವಾಗಿ ಹೇಳಿದರು. ಇತ್ತೀಚೆಗೆ ಡಿಕ್ಲೇರ್ ಮಾಡಿದಂಥ ರಸ್ತೆಗಳನ್ನು ಸೇರಿಸಿಕೊಂಡರೆ ಸುಮಾರು 800 ಮೈಲಿಗಳಾಗುತ್ತವೆ. ಮದ್ರಾಸ್ ಮತ್ತು ಕೇರಳವನ್ನು ನಾವು ಹೋಲಿಸಿ ನೋಡಿದರೆ ನಮಗಿಂತಲೂ ಒಂದಕ್ಕೆರಡಷ್ಟು ಅವರಲ್ಲಿದೆ. ಮೈಸೂರಿನಲ್ಲಿ ಈ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ Transport Development Council ಅವರು ರೂಲ್ಸ್ ಪ್ರಕಾರ ಶಿಫಾರ್ಸು ಮಾಡಿರುವುದು ಅವರಲ್ಲಿದೆ. ಅದರಬಗ್ಗೆ ಏನಾಯಿತು ಎಂಬುದು ಗೊತ್ತಾಗಲಿಲ್ಲ. ಆದ್ದರಿಂದ ನ್ಯಾಷನಲ್ ಹೈವೇಸನ್ನು ಎಲ್ಲೆಲ್ಲಿ ಹಾಕಬೇಕೆಂದು ಆ ಕೌನ್ಸಿಲ್ ಅವರು ಹೇಳಿದ್ದಾರೋ ಅಂತಹ ಕಡೆಗಳಲ್ಲಿ ಆ ಮಾರ್ಗ ಸೌಕರ್ಯವನ್ನು ಪಡೆಯಲು ಆದಷ್ಟು ಬೇಗ ಕೇಂದ್ರ ಸರ್ಕಾರದವರು ತ್ವರಿತವಾಗಿ ಹಾಕಬೇಕೆಂದು ನಾನು ಹೇಳು ತ್ತೇನೆ. ಮುಖ್ಯವಾಗಿ ಮೈಸೂರು-ನೀಲಗಿರಿ ಮತ್ತು ಮೈಸೂರು-ಚಾಮರಾಜನಗರ ಮೂಲಕ ಕೊಯಮತ್ತೂರು ರಸ್ತೆಯನ್ನು ಮಾಡಬೇಕೆಂದು ನಾನು ತಿಳಿಸಲಿಚ್ಛಿಸುತ್ತೇನೆ.

ಇನ್ನು State roads of economic and inter state importance ಆಗಿರತಕ್ಕ ರಸ್ತೆಗಳ ವಿಷಯವಾಗಿ ಹೇಳುವುದಾದರೆ ಕೇಂದ್ರ ಸರ್ಕಾರದವರು ಅನೇಕ ಕಡೆಗಳಲ್ಲಿ ಅನುಮತಿ ಯನ್ನು ದೊರಕಿಸಿಕೊಟ್ಟಿಲ್ಲ. 60-61-62ನೇ ಸಾಲಿನಿಂದ ಇಲ್ಲಿಯವರೆಗೂ ಕೇಂದ್ರ ಸರ್ಕಾರದಿಂದ ಹಣ ಪಡೆಯುವುದಕ್ಕೆ ಸಾಧ್ಯವಾಗುತ್ತಿದೆಯೋ ಏನೋ ಎಂಬ ಅನುಮಾನ ಬಂದಿದೆ. ಮೊದಲು ಹಣವನ್ನು ಕೇಂದ್ರ ಸರ್ಕಾರದಿಂದ ಪಡೆದು ನಂತರ ಇದರ ವ್ಯವಸ್ಥೆಯನ್ನು ಸರ್ಕಾರ ಕೈಗೊಳ್ಳ ಬೇಕು. ನಮ್ಮ ತಾಲ್ಲೂಕಿನ ವಿಚಾರವಾಗಿ ಹೇಳುವುದಾದರೆ ಕೇವಲ ತಮಿಳು ಮಾತನಾಡತಕ್ಕ ಜನರೇ ಕಾವೇರಿ ದಡದಲ್ಲಿ ವಾಸಮಾಡುತ್ತಿದ್ದಾರೆ. ಆದರೆ ಗ್ರಾಮಗಳಿಗೂ ತಾಲ್ಲೂಕ್‌ಗಳಿಗೂ, ಕೇಂದ್ರ ಸ್ಥಳಗಳಿಗೂ ಇವರಿಗೆ ನೇರವಾದ ಸಂಪರ್ಕವಿಲ್ಲ. ಅಂತಹ ಕಡೆಗಳಲ್ಲಿ ರಸ್ತೆಗಳನ್ನು ಅಲ್ಪ ಸಂಖ್ಯಾತರಾಗಿರುವವರೇ ಮಾಡುತ್ತಾರೆ. ಇದಕ್ಕೆ ಸಂಬಂಧಪಟ್ಟ ವಿಚಾರಗಳನ್ನು ನಾಲ್ಕೈದು ಸಾರಿ ಸರ್ಕಾರಕ್ಕೆ ಬರೆದಿದ್ದೇನೆ. ಈ ವಿಚಾರದಲ್ಲಿ ಸರ್ಕಾರದವರು ಜಾಗ್ರತೆಯಾಗಿ ತಕ್ಕ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕು.

ಇನ್ನು ಡಿವಿಜನ್‌ಗಳನ್ನು locate ಮಾಡುತ್ತಿದ್ದಾರೆ. ಅದೂ ಕೂಡ ಸರಿಯಾದ ಮಾರ್ಗದಲ್ಲಿಲ್ಲ. ಡಿಸ್ಟೆನ್ಸ್‌ನ್ನು ಸರಿಯಾಗಿ ಪರಿಗಣಿಸಿ ಮಾಡುತ್ತಿಲ್ಲ. ನಮ್ಮ ತಾಲ್ಲೂಕನ್ನು ಚಾಮರಾಜನಗರಕ್ಕೆ ಸೇರಿಸಿದೆ ಅಲ್ಲಿಂದ ನಮ್ಮ ತಾಲ್ಲೂಕು 85 ಮೈಲಿಗಳಾಗುತ್ತವೆ ಎಂದು ಒಬ್ಬ ಎಗ್ಜಿಕ್ಯುಟಿವ್ ಇಂಜನಿಯರು ಹೇಳಿದ್ದಾರೆ. 82 ಮೈಲಿ, 70 ಮೈಲಿ-ಹೀಗೆ inequitable ಆಗಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಕೊಳ್ಳೇಗಾಲವನ್ನು ಒಂದು ಡಿವಿಜನ್ನಾಗಿ ತೆಗೆದಿದ್ದರೆ 3-4 ತಾಲ್ಲೂಕುಗಳಿಗೂ ಮಧ್ಯೆ ಸ್ಥಳವಾಗಿ ಎಲ್ಲದಕ್ಕೂ ಅನುಕೂಲವಿರುತ್ತಿ

ತ್ತೆಂದು ನನ್ನ ಭಾವನೆ. It would have been a centrally situated place ಆಗಿರುತ್ತಿತ್ತು.

ಶ್ರೀ ಡಿ. ದೇವರಾಜ್ ಅರಸ್.—ಕೊಳ್ಳೇಗಾಲವು ಎಷ್ಟು ಮೈಲಿಗಳಿವೆ ?

ಶ್ರೀ ಜಿ. ವಿ. ಗೌಡ.—22 ಮೈಲಿಗಳಿವೆ. ಇನ್ನು ಅಲ್ಲಿನ ರಸ್ತೆಗಾಗಿ 19 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಒದಗಿಸಿದ್ದಾರೆ. ಅದಕ್ಕಾಗಿ ಅನೇಕ ಕಡೆಗಳಿಂದ ಕಾಂಟ್ರಿಬ್ಯೂಷನ್ ತೆಗೆದುಕೊಂಡಿದ್ದಾರೆ. ಚೌಡಳ್ಳಿ-ಮಹದೇಶ್ವರ್ ರಸ್ತೆಗೆ ಮೆಟಲಿಂಗ್ ಆಸ್ಫಾಲ್ಟಿಂಗ್ ಹಾಕಬೇಕಾಗಿದೆ.

ಇನ್ನು ಮದ್ರಾಸ್ ಸರ್ಕಾರದವರು ಪಾಲಾರ್-ಹೋಗೇನ್‌ಕಲ್ ಫಾಲ್ಸ್ ಇರುವ ಕಡೆ ಟೂರಿಸ್ಟ್ ಸೆಂಟರುಗಳನ್ನು ಬಹಳ ಚೆನ್ನಾಗಿ ಮಾಡಿಕೊಂಡಿದ್ದಾರೆ. ಅದೇ ನಮೂನೆಯಲ್ಲಿ ನಮ್ಮ ಕಡೆ ಇರತಕ್ಕ ಫಾಲ್ಸ್ ಕಡೆ ಟೂರಿಸ್ಟ್ ಸೆಂಟರನ್ನು ಮಾಡಬೇಕು. ಪಾಲಾರ್ ಮೇಲೆ ಮದ್ರಾಸ್ ಸರ್ಕಾರದವರು ಒಂದು ಸೇತುವೆ ಕಟ್ಟಬೇಕೆಂದು ಮಾಡಿದ್ದಾರೆ. ಆ ರೀತಿ ಕಟ್ಟಿದರೆ ಮೈಸೂರಿನಿಂದ ಸೇಲಂಗೆ ಹೋಗುವುದಕ್ಕೆ ಬಹಳ ಹತ್ತಿರ ದಾರಿಯಾಗುತ್ತದೆ. ಇದು ಇಂಟರ್ ಸ್ಟೇಟ್ ರೋಡ್ ಆಗುವುದರಿಂದ ಇನ್ನೊಂದು ಸಬ್ ಡಿವಿಜನ್ ಅಗತ್ಯವೆಂಬುದಾಗಿ ಚೀಫ್ ಇಂಜನಿಯರ್ ಒಪ್ಪಿ ಶಿಫಾರಸು ಮಾಡಿದ್ದಾರೆ. ಆದ್ದರಿಂದ ಸರ್ಕಾರದವರು ಇನ್ನೊಂದು ಸಬ್ ಡಿವಿಜನನ್ನು ತೆರೆಯಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಮುಖ್ಯವಾಗಿ cross drainage works, non-P.W.D. road works, rural communication road works, ಅಪೂರ್ಣವಾಗಿರತಕ್ಕ ರಸ್ತೆಗಳನ್ನು ಪೂರ್ಣ ಮಾಡುವುದು—ಇವೆಲ್ಲವನ್ನೂ ಸರ್ಕಾರದವರೇ ಕೈಗೊಳ್ಳಬೇಕು. ಅಥವಾ ತಾಲ್ಲೂಕು ಬೋರ್ಡುಗಳಿಗಾದರೂ ಹಂಚಬೇಕು. 9 ಸಾವಿರ ಚಿಲ್ಲರೆ ಮೈಲಿಗಳಷ್ಟು ರಸ್ತೆ ನಿರ್ಮಾಣವಾಗಬೇಕು. ಮೈಲಿಗೆ 250 ರೂಪಾಯಿಗಳಂತೆ ಖರ್ಚು ಮಾಡಿದರೂ 25 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆ ರೀತಿಯಾಗಿ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಲಿಲ್ಲ. ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳಿಗೆ ಚೆನ್ನಾಗಿ ಕೆಲಸ ಕಾರ್ಯಗಳು ಆಗಬೇಕೆಂಬ ಉತ್ಸಾಹವಿದ್ದರೂ ಹಣಕಾಸಿನ ಮಂತ್ರಿಗಳಿಂದ ಈ ಬಾಬಿಗೆ ಹೆಚ್ಚಿಗೆ ಹಣವನ್ನು ಪಡೆಯುವುದರಲ್ಲಿ ಅಸಮರ್ಥರಾಗಿದ್ದಾರೆ. ಕಳೆದ ವರ್ಷಕ್ಕಿಂತಲೂ ಈ ವರ್ಷ ಕಡಿಮೆ ಕೇಳಿದ್ದಾರೆ. ಎಷ್ಟು ಉಪಯುಕ್ತವಾದ ಕಾಮಗಾರಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಆಗಬೇಕಾಗಿತ್ತೋ ಅಷ್ಟು ಆಗುತ್ತಿಲ್ಲ. ಪ್ರತಿಯೊಂದು ತಾಲ್ಲೂಕಿಗೂ ಆಯಾ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ equitable distribution of money ಆಗಬೇಕೆಂದು ಸರ್ಕಾರದವರಿಗೆ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು-ದಕ್ಷಿಣ).—ಅಧ್ಯಕ್ಷರೇ, ಲೋಕೋಪಯೋಗಿ ವಿಚಾರವಾಗಿ ನನ್ನ ಸ್ನೇಹಿತರು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಈಗ ಈ ಇಲಾಖೆಯಲ್ಲಿ ನಮ್ಮ ಸರ್ಕಾರದವರು ಖರ್ಚು ಮಾಡತಕ್ಕ ಹಣವನ್ನು ದೇಶದಲ್ಲಿ ಪ್ರಾಮುಖ್ಯವಾಗಿ ಯಾವ ಕೆಲಸಗಳು ಆಗಬೇಕೋ ಆ ಕೆಲಸಗಳಿಗೆ ವಿನಿಯೋಗಿಸಬೇಕು. ಅನಾವಶ್ಯಕವಾಗಿರತಕ್ಕ ಕೆಲಸಗಳಿಗೆ ಈ ಹಣವನ್ನು ಉಪಯೋಗಿಸದ ಹಾಗೆ ಮಾನ್ಯ ಸದಸ್ಯರು ಕೆಲವು ಸೂಕ್ತ ಸಲಹೆಗಳನ್ನು ಕೊಟ್ಟಿರುವ ಹಾಗೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ರೂರಲ್ ಕಮ್ಯೂನಿಕೇಷನ್ ರಸ್ತೆಗಳ ವಿಚಾರದಲ್ಲಿ ಹೇಳುವುದಾದರೆ ಹಳ್ಳಿಗಳ ಕಡೆ ರಸ್ತೆಗಳೇ ಸರಿಯಾಗಿಲ್ಲ. ಸರ್ಕಾರದವರು ರಸ್ತೆಗಳು ಶಾಶ್ವತವಾಗಿರುವ ಹಾಗೆ ಸರಿಯಾದ ಪಕ್ಕಾ ರಸ್ತೆಗಳನ್ನು ಮಾಡಿಸಿದರೆ ದೇಶಕ್ಕೆ ಎಷ್ಟೋ ಉಪಕಾರ ಮಾಡಿದಂತಾಗುತ್ತದೆ ಎಂಬುದಾಗಿ ನನ್ನ ಅಭಿಪ್ರಾಯವನ್ನು ತಮ್ಮಲ್ಲಿ ಅರಿಕೆ ಮಾಡುತ್ತಿದ್ದೇನೆ.

ಇನ್ನು ಕಂಟ್ರಾಕ್ಟರ್ಸ್ ರಿಜಿಸ್ಟ್ರೇಷನ್ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಫಸ್ಟ್ ಕ್ಲಾಸ್, ಸೆಕೆಂಡ್ ಕ್ಲಾಸ್, ಥರ್ಡ್ ಕ್ಲಾಸ್ ಮತ್ತು ಫೋರ್ತ್ ಕ್ಲಾಸ್ ರಿಜಿಸ್ಟ್ರೇಷನ್ ಎಂದಿದೆ. ಇಷ್ಟು ರೀತಿಯಲ್ಲಿ ಮೊದಲಿನಿಂದಲೂ ಇರುತ್ತಿರಲಿಲ್ಲ. ಈ ಮೂರು ವರ್ಷಗಳಿಂದೀಚೆಗೆ ಈ ರಿಜಿಸ್ಟ್ರೇಷನ್ ವಿಚಾರ ತಂದಿದ್ದಾರೆ. ಇದರಿಂದ ಬಡ ಜನಾಂಗಕ್ಕೆ ಸ್ವಲ್ಪವೂ ಉಪಕಾರವಾಗುತ್ತಾ ಇಲ್ಲ. ಏನಾದರೂ ಹಣವಂತನಿಗೆ ಇದರಿಂದ ಅನುಕೂಲವಿದೆಯೇ ಹೊರತು ಬಡವರಿಗೆ ಸ್ವಲ್ಪವೂ ಉಪಕಾರವಾಗುತ್ತಾ ಇಲ್ಲ. ಇದರಲ್ಲಿ ನಿಮ್ನ ವರ್ಗ ಜನಾಂಗದ ಪರವಾಗಿ ಸರ್ಕಾರದಲ್ಲಿ ಈ ವಿಚಾರವಾಗಿ ಅನೇಕ ಸಾರಿ ನಾನು ಹೇಳಿದ್ದೇನೆ. ಈ ಜನಾಂಗಕ್ಕೆ ರಿಜಿಸ್ಟ್ರೇಷನ್ ಫೀ ಹಾಕದೇ ಇದ್ದರೆ ಅವರು ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅಥವಾ ಅದನ್ನು ಸಾಲವಾಗಿ ಕೊಟ್ಟರೆ ಅವರಿಗೆ ಉಪಕಾರ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಏಕೆಂದರೆ ಕಷ್ಟಪಡುವವರು ಈ ಜನರಾದರೆ ಸುಖಪಡುವವರೇ ಬೇರೆ ಜನ. ಈ ರಿಜಿಸ್ಟ್ರೇಷನ್ ಫೀ ವಿಚಾರದಲ್ಲಿ ಹಿಂದುಳಿದ ಜನಾಂಗಕ್ಕೆ ರೂಲ್ಸನ್ನು ಸ್ವಲ್ಪ ಮಟ್ಟಿಗೆ ಸಡಿಲಪಡಿಸಿ ಸಹಾಯ ಮಾಡಬೇಕೆಂದು ನಾನು ಬಹಳ ವಿನಯದಿಂದ ಸರ್ಕಾರದವರಲ್ಲಿ ಪ್ರಾರ್ಥಿಸುತ್ತೇನೆ.

(ಶ್ರೀ ಡಿ. ಮುನಿಚಿನ್ನಪ್ಪ)

ಮತ್ತು ಈ ಇಲಾಖೆಯಲ್ಲಿ ಕೆಲವು ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಅವರು ಕೆಲವು ವಿಚಾರಗಳ ಬಗ್ಗೆ ಹೈಕೋರ್ಟಿಗೆ ರಿಟ್ ಹಾಕಿದ್ದಾರೆ. ಆ ರಿಟ್ ಪಿಟಿಷನ್‌ಗಳು ಪರಿಹಾರ ವಾಗುವವರೆಗೆ ಅವರನ್ನು ಈ ಇಲಾಖೆಯೊಳಗೇ ಬೇರೆ ಕೆಲಸಗಳಿಗೆ ಹಾಕಿದರೆ ಒಳ್ಳೆಯದು. ಆದ್ದ ರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸು ತ್ತೇನೆ.

ಇನ್ನು ಕೆಲವು ತಾಲ್ಲೂಕುಗಳಲ್ಲಿ ಯಾವ ಯಾವ ತರಹ ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬ ವಿಷಯದಲ್ಲಿ ಅಲ್ಲಿರತಕ್ಕ ಜವಾಬ್ದಾರಿಯುತರಾದ ಮೆಂಬರುಗಳನ್ನು ಕೇಳುವುದಿಲ್ಲ. ಆ ತಾಲ್ಲೂಕಿನಲ್ಲಿ ಯಾವ ಯಾವ ಕೆಲಸ ಆಗಬೇಕೋ ಆ ಕೆಲಸಗಳನ್ನು ಮಾಡಿದರೆ ಸರ್ಕಾರಕ್ಕೂ ಅನುಕೂಲವಾಗು ತ್ತದೆ ಮತ್ತು ಪ್ರಜೆಗಳಿಗೂ ಅನುಕೂಲವಾಗುತ್ತದೆ. ಬೇಕಾಗಿಲ್ಲದ ಕೆಲಸಗಳನ್ನು ತೆಗೆದುಕೊಂಡು ಮಾಡಿದರೆ ಅದರಿಂದ ವ್ಯಥಾ ಹಣ ಖರ್ಚಾಗುತ್ತದೆ. ಆದ್ದರಿಂದ ಒಂದೊಂದು ತಾಲ್ಲೂಕಿನಲ್ಲಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವಾಗ ಯಾವ ಯಾವ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಅಲ್ಲಿರತಕ್ಕ ಜವಾಬ್ದಾರಿಯುತವಾದ ಮೆಂಬರುಗಳನ್ನು ಕೇಳಿ ಆ ಕೆಲಸಗಳನ್ನು ತೆಗೆದುಕೊಳ್ಳು ವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಇರತಕ್ಕ ವಿಚಾರವನ್ನೇ ಹೇಳುವುದಾದರೆ ಈಗ 10-12 ವರ್ಷಗಳಿಂದಲೂ ಒಂದು ಮೈಲಿ ರಸ್ತೆಯನ್ನೂ ಸಹ ಮಾಡಿಲ್ಲ. ಇದರಿಂದ ಅಲ್ಲಿನ ಜನಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ತಿರುಗಾಡುವುದಕ್ಕೆ ತೊಂದರೆ ಯಾಗಿದೆ. ಇನ್ನು ಕೆಲವು ಕಡೆ ಮಣ್ಣಿನ ರಸ್ತೆಯನ್ನು ಮಾಡಿಸಿದ್ದಾರೆ. ಒಂದು ಸಾರಿ ಮಳೆ ಬಂದರೆ ಮಣ್ಣೆಲ್ಲವೂ ಕೊಚ್ಚಿಹೋಗಿ ಅದರಲ್ಲಿ ಓಡಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಂಥಾ ಸ್ಥಿತಿಯಲ್ಲಿವೆ. ಈ ರೀತಿ ವ್ಯಥಾ ಹಣವನ್ನು ವೆಚ್ಚಮಾಡಿದರೆ ಏನು ಪ್ರಯೋಜನ ? ಆದ್ದರಿಂದ ಲೋಕೋಪಯೋಗಿ ಶಾಖೆಯ ಮಂತ್ರಿಗಳು ಈ ಕಡೆ ಗಮನವನ್ನು ಕೊಡಬೇಕು. ಎಲ್ಲೆಲ್ಲಿ ರಸ್ತೆಗಳು ಸರಿಯಾಗಿ ಆಗಿ ಲ್ಲವೋ ಅಂಥಾ ಕಡೆ ಸರ್ಕಾರದವರು ಗಮನವಿಟ್ಟು ರಸ್ತೆಗಳನ್ನು ಮಾಡಿಸಿಕೊಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ್.—ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಖಾತೆಗೆ ಸಂಬಂಧ ಪಟ್ಟ ಡಿಮ್ಯಾಂಡ್ ನಂಬರ್ 31,32,43,48,50 ಇವುಗಳ ಬಗ್ಗೆ ಈಗಾಗಲೇ ನಮ್ಮ ಸ್ನೇಹಿತರನೇ ಕರು ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ. ಮತ್ತು ಅದರಲ್ಲಿರತಕ್ಕ ಲೋಪದೋಷಗಳನ್ನು ಎತ್ತಿ ತೋರಿಸಿದ್ದಾರೆ. ನಾನಾದರೂ ಅದರಲ್ಲಿರುವಕೆಲವು ಲೋಪದೋಷಗಳನ್ನುಹೇಳುವುದಕ್ಕೆ ಅಪೇಕ್ಷೆಪಡು ತ್ತೇನೆ. ನಮ್ಮ ರಾಜ್ಯದ ಒಟ್ಟು ಆದಾಯದಲ್ಲಿ ಈ ಖಾತೆಗೆ 29 ಕೋಟಿ 29 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವೆಚ್ಚ ಮಾಡತಕ್ಕ ಈ ಒಂದು ಇಲಾಖೆಯ ಆಡಳಿತದ ವಿಷಯದಲ್ಲಿ ನಾವು ಕೆಲವೊಂದು ವಿಚಾರವನ್ನು ಹೇಳಬೇಕಾಗುತ್ತದೆ. ಮೊನ್ನೆದಿವಸ ಈ ಸಭೆಯಲ್ಲಿ ನಮ್ಮ ಸ್ನೇಹಿತರು ಒಬ್ಬರು ಮಾತನಾಡುತ್ತಾ ಹೊಸದಾಗಿ ಮೈಸೂರಿಗೆ ಬಂದು ಸೇರಿರತಕ್ಕ ಪ್ರದೇಶದಲ್ಲಿ ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಿದ್ದಾರೆ. ಹಳೆಯ ಮೈಸೂರು ಪ್ರದೇಶವನ್ನು ಇವೊತ್ತು ಕಡೆಗಾಣಿಸಿದ್ದಾರೆ. ಆದ್ದರಿಂದ ಈ ರಾಜ್ಯವನ್ನು ಎರಡು ಭಾಗ ಮಾಡ ಬೇಕು ಎಂದು ಹೇಳಿದರು. ಇವೊತ್ತು ನಮ್ಮ ರಾಜ್ಯದಲ್ಲಿರತಕ್ಕ 19 ಜಿಲ್ಲೆಗಳೇನಿವೆಯೋ ಆ ಜಿಲ್ಲೆ ಗಳಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಎಷ್ಟು ಕಂದಾಯದ ವಸೂಲಾತಿ ಇದೆ, ಮತ್ತು ಆ ಜಿಲ್ಲೆಗೆ ಅಭಿ ವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವುದಕ್ಕೆ ಕೊಟ್ಟಿರುವಂಥಾ ಹಣ ಎಷ್ಟು ಎನ್ನುವಂಥಾ ಅಂಕಿ ಅಂಶಗಳನ್ನು ಈ ಸಭೆಯ ಮುಂದೆ ಇಟ್ಟರೆ ಆಗ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಖರ್ಚುಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಈಗ ಕೆಲವರು ಸಾಮಾನ್ಯವಾಗಿ ಹೇಳತಕ್ಕಂಥಾ ದ್ದನ್ನು ನಾನು ಕೇಳಿದ್ದೇನೆ. ವಿಲೀನ ಪ್ರದೇಶಗಳಲ್ಲಿ ಯಾವ ದೊಡ್ಡ ಯೋಜನೆಗಳನ್ನು ಕೈಗೊಳ್ಳದೆ ಶರಾವತಿ ವ್ಯಾಲಿಯಂತಹ ಒಂದು ದೊಡ್ಡ ಪ್ರಾಜೆಕ್ಟನ್ನು 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಹಳೆಯ ಮೈಸೂರಿಗೆ ಮಾಡುತ್ತಿದ್ದಾರೆ ಎಂದು ಕೆಲವರು ಹೇಳುವುದನ್ನು ನಾನು ಕೇಳಿದ್ದೇನೆ. ಭಾಕ್ರಾ ಅಣೆಕಟ್ಟನ್ನು ಸುಮಾರು 31 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಈವೊತ್ತಿನ ದಿವಸ ಇಂಥಾ ಯೋಜನೆಗಳನ್ನು ನಮ್ಮ ರಾಜ್ಯದಲ್ಲಿ ಸಾಕಷ್ಟು ಮಾಡಬೇಕು. ರೈತರಿಗೆ ಸಹಾಯವನ್ನು ಮಾಡಬೇಕು. ಅಂಥಾ ಸೌಲಭ್ಯಗಳನ್ನು ರೈತರು ಉಪಯೋಗಿಸಿಕೊಂಡು ಮುಂದುವರಿಯಬೇಕು. ಸರ್ಕಾರದವರು ರೈತರಿಗೆ ಸಾಕಷ್ಟು ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡುವುದರಲ್ಲಿ ಹೆಚ್ಚಿನ ಪ್ರಯತ್ನವನ್ನು ಮಾಡಬೇಕು. ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳನ್ನು ನೋಡಿದರೆ ಅಲ್ಲಿನ ಜನ ಪಡತಕ್ಕ ಕಷ್ಟ ಯಾವರೀತಿ

ಇದೆಯೆಂಬುದು ಗೊತ್ತಾಗುತ್ತದೆ. ಹಳೆಯ ಮೈಸೂರು ಪ್ರದೇಶದಲ್ಲಿ ರಸ್ತೆಗಳಾಗಲೀ ಬಿಲ್ಡಿಂಗ್‌ಗಳಾಗಲೀ ಇವುಗಳನ್ನು ಬಹಳ ಕಾಲದಿಂದಲೂ ಬಹಳ ಚೆನ್ನಾಗಿ ಸರಿಯಾದ ಒಂದು ಮಟ್ಟದಲ್ಲಿ ಇಟ್ಟಿದ್ದಾರೆ. ಆದರೆ ಬೀದರ್ ಮತ್ತು ಗುಲ್ಬರ್ಗಾ ಡಿಸ್ಟ್ರಿಕ್ಟ್‌ಗಳಲ್ಲಿ ಅನೇಕ ಕಡೆಗಳಲ್ಲಿ ರಸ್ತೆಗಳೇ ಇಲ್ಲದೆ ಇರತಕ್ಕ ಒಂದು ಪರಿಸ್ಥಿತಿ ಇದೆ. ನಿಜವಾಗಿಯೂ ಸರ್ಕಾರದವರು ಆ ಕಡೆ ಗಮನ ಕೊಟ್ಟಿಲ್ಲ. ಅಲ್ಲಿ ಇವೊತ್ತು ಯಾವ ರಾಷ್ಟ್ರೀಯ ಹೆದ್ದಾರಿಯೂ ಇಲ್ಲದೆ ಇರತಕ್ಕಂಥ ಒಂದು ಪರಿಸ್ಥಿತಿ ಇದೆ. ಇಂಥಾ ನಿದರ್ಶನಗಳು ಅನೇಕ ಕಡೆ ಇವೆ. ಇಂಥಾ ಒಂದು ಪರಿಸ್ಥಿತಿ ಇರುವಾಗ ನಮ್ಮ ಸ್ನೇಹಿತರು ಕೆಲವರು ಈ ರಾಜ್ಯವನ್ನು ಎರಡುಭಾಗ ಮಾಡಬೇಕೆಂಬುದು ಸರಿಯಲ್ಲ. ಅನೇಕ ವರ್ಷ ಸತತವಾಗಿ ಕರ್ನಾಟಕ ಏಕೀಕರಣಕ್ಕೆ ಹೋರಾಟವನ್ನು ಮಾಡಿ ಉಪವಾಸ ಮಾಡಿ, ತ್ಯಾಗ ಮಾಡಿ, ನಮ್ಮ ಅಣ್ಣತಮ್ಮಂದಿರೆಲ್ಲರೂ ಒಂದುಗೂಡಿ ಸುಖವಾಗಿ ಬಾಳಬೇಕು ಎಂಬ ಉದ್ದೇಶದಿಂದ ಕರ್ಣಾಟಕ ರಾಜ್ಯವನ್ನು ಕಟ್ಟಿದ್ದಾರೆ. ಹೀಗಿರುವಾಗ ಯಾವುದೇ ದೃಷ್ಟಿಯಿಂದ ನಮ್ಮಲ್ಲಿ ಯಾವುದಾದರೂ ಸಣ್ಣಪುಟ್ಟ ತಪ್ಪುಗಳಿದ್ದರೆ ಅವುಗಳನ್ನು ಸರಿಪಡಿಸುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೇ ಹೊರತು ನಮ್ಮಲ್ಲಿರತಕ್ಕ ಸಣ್ಣಪುಟ್ಟ ಕಾರಣಗಳಿಗೋಸ್ಕರ ಈ ರಾಜ್ಯವನ್ನು ಎರಡು ಭಾಗ ಮಾಡಬೇಕು ಎಂದು ಹೇಳತಕ್ಕದ್ದು ಸರಿಯಲ್ಲ. ಈ ಕರ್ನಾಟಕ ರಾಜ್ಯ ಯಾವೊತ್ತಿಗೂ ಎರಡು ಭಾಗವಾಗುವುದಿಲ್ಲ ಎನ್ನುವಂಥಾ ಮಾತನ್ನು ನಾನು ಹೇಳಬಯಸುತ್ತೇನೆ. ಈ ರಾಜ್ಯದಲ್ಲಿ ಯಾವ ಭಾಗವಲ್ಲಿ ರಸ್ತೆಗಳಿಲ್ಲವೋ ಅಂಥಾ ಕಡೆಗಳಲ್ಲಿ ರಸ್ತೆಗಳನ್ನು ಮಾಡುವುದಕ್ಕೋಸ್ಕರ ಸರ್ಕಾರದವರು ಒಂದು ಸತತವಾದ ಪ್ರಯತ್ನವನ್ನು ಮಾಡಬೇಕೆಂದು ನಾನು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಕಂಟ್ರಾಕ್ಟರುಗಳ ವಿಷಯದಲ್ಲಿ ಒಂದೆರಡು ವಿಷಯಗಳನ್ನು ನಾನು ಹೇಳಬಯಸುತ್ತೇನೆ. ಹಿಂದೆ ಲೋಕೋಪಯೋಗಿ ಶಾಖೆಯ ಮಂತ್ರಿಗಳಾಗಿದ್ದವರು ಕಂಟ್ರಾಕ್ಟರ್ ಕೆಲಸವನ್ನು ಮಾಡಬೇಕಾಗಿದ್ದರೆ ಒಂದು ಕ್ವಾಲಿಫಿಕೇಷನ್ ಇರಬೇಕೆಂದು ಗೊತ್ತುಮಾಡಿದರು. ಅದೇನೆಂದರೆ ರಿಜಿಸ್ಟ್ರೇಷನ್ ಪದ್ಧತಿ. ಕಂಟ್ರಾಕ್ಟರ ಕೆಲಸವನ್ನು ಮಾಡಬೇಕಾಗಿದ್ದರೆ ಪ್ರತಿಯೊಬ್ಬರು ರಿಜಿಸ್ಟ್ರೇಷನ್ ಮಾಡಿಸಬೇಕು ಎನ್ನುವಂಥಾ ಒಂದು ಪದ್ಧತಿಯನ್ನು ಅವರು ಜಾರಿಗೆ ತಂದರು. ಇದರಿಂದ ಏನಾಗಿದೆ ಎಂದರೆ ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸ ಕಾರ್ಯಗಳಿಗೆ ಶ್ರೀಮಂತರು ಮಾತ್ರ ಟೆಂಡರುಗಳನ್ನು ಹಾಕಿ ಕಂಟ್ರಾಕ್ಟ್‌ಗಳನ್ನು ತೆಗೆದುಕೊಂಡು ಅವರು ಮತ್ತಷ್ಟು ಶ್ರೀಮಂತರಾಗುವುದಕ್ಕೆ ಅವಕಾಶವಿದೆ. ಈ ಕಂಟ್ರಾಕ್ಟರುಗಳಲ್ಲಿ ಎ,ಬಿ,ಸಿ, ಎಂದು ವಿಂಗಡಿಸಿದ್ದಾರೆ. ಇದರಿಂದ ಕೆಲವರಿಗೆ ತೊಂದರೆಯಾಗಿದೆ. ಒಬ್ಬ ಎ ಕ್ಲಾಸ್ ಕಂಟ್ರಾಕ್ಟರು ಎರಡು ಲಕ್ಷ ರೂಪಾಯಿಗಳ ಸಾಲ್ವೆನ್ಸಿಯನ್ನು ಕೊಡಬೇಕು. ಹಳೆಯ ಮೈಸೂರು ಮತ್ತು ಬೊಂಬಾಯಿ ಕರ್ನಾಟಕದಲ್ಲಿ ಈ ಸಾಲ್ವೆನ್ಸಿ ಸರ್ಟಿಫಿಕೇಟ್ ಪದ್ಧತಿಯಿಂದ ಬಹಳ ಜನಗಳಿಗೆ ತೊಂದರೆಯಾಗಿದೆ. ಈ ವಿಷಯ ಎಲ್ಲರಿಗೂ ಗೊತ್ತಿದೆ. ಈ ಸಾಲ್ವೆನ್ಸಿ ಸರ್ಟಿಫಿಕೇಟನ್ನು ಕೂಡ ಸರಿಸಮನಾಗಿ ಕೊಡತಕ್ಕ ಒಂದು ಪರಿಸ್ಥಿತಿ ಇಲ್ಲ. ಅದಕ್ಕೂ ಸಹ ರೊಕ್ಕವನ್ನು ಖರ್ಚುಮಾಡುವಂಥಾ ಒಂದು ಪರಿಸ್ಥಿತಿ ಬಂದಿದೆ. ಈ ಕಂಟ್ರಾಕ್ಟರುಗಳ ಕ್ವಾಲಿಫಿಕೇಶನ್ ಮಾಡಿ ರಿಜಿಸ್ಟ್ರೇಷನ್ ಪದ್ಧತಿಯನ್ನು ಜಾರಿಗೆ ತಂದಿರುವುದರಿಂದ ಎಷ್ಟೋ ಮಂದಿ ನಿಜವಾಗಿಯೂ ಸರಿಯಾದ ರೀತಿಯಲ್ಲಿ ಈ ಒಂದು ಕೆಲಸವನ್ನು ಮಾಡಿ ಮುಂದುವರಿಯುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಈ ಕಂಟ್ರಾಕ್ಟ್ ಕೆಲಸವನ್ನು ಮಾಡುವುದಕ್ಕೆ ಯೋಗ್ಯತೆ ಇದೆ ಎಂದು ಸರ್ಟಿಫಿಕೇಟ್ ತೆಗೆದುಕೊಂಡು ಕೆಲಸ ಮಾಡಿರುವಂತಹ ಒಂದೆರಡು ವಿಷಯಗಳನ್ನು ನಾನು ಈಗ ತಮಗೆ ಹೇಳಬಯಸುತ್ತೇನೆ. ಹುಬ್ಬಳ್ಳಿ ಡಿವಿಜನ್‌ನಲ್ಲಿ ಇರತಕ್ಕ ಒಂದು ಕೆ.ಎಂ.ಸಿ. ಸಂಸ್ಥೆಯ ಕಂಟ್ರಾಕ್ಟರುಗಳು ಕಟ್ಟಿಸಿರತಕ್ಕ ಕಟ್ಟಡಗಳ ಪರಿಸ್ಥಿತಿ ಇವೊತ್ತು ಏನಾಗಿದೆ ಎಂದರೆ ಮಳೆಗಾಲದಲ್ಲಿ ಕಟ್ಟಡದ ಒಳಗಡೆ ನೀರು ಬರುವಂಥಾ ಒಂದು ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಕಂಟ್ರಾಕ್ಟ್‌ದಾರರು ಕೆಲಸವನ್ನು ಮಾಡುವಾಗ ಇಂಜಿನಿಯರುಗಳ ಒಂದು ಸಂಬಂಧ ಒಂದು ಸೂಪ್ರಿವಿಜನ್ ಇದ್ದೂ ಈ ರೀತಿಯಾದಂತಹ ಒಂದು ಅವ್ಯವಸ್ಥೆ ಉಂಟಾಗಿದೆ. ನಮ್ಮ ಶಿರಹಟ್ಟಿಯಲ್ಲಿ 1906ನೇ ಇಸವಿಯಲ್ಲಿ ತಾಲ್ಲೂಕು ಕಛೇರಿಯನ್ನು ಕಟ್ಟಿದ್ದಾರೆ. ಅದು ಇವೊತ್ತಿಗೂ ಸಹ ಯಾವ ಡ್ಯಾಮೇಜೂ ಆಗದೆ ಬಹಳ ಭದ್ರವಾಗಿದೆ. ಆದರೆ ಇದೇ ಶಿರಹಟ್ಟಿಯಲ್ಲಿ 1957ನೇ ಇಸವಿಯಲ್ಲಿ ಎನ್.ಇ.ಎಸ್. ಯೋಜನೆಗೆ ಸಂಬಂಧಪಟ್ಟ ಒಂದು ಕಚೇರಿಯನ್ನು ಕಟ್ಟಿದ್ದಾರೆ. ಅದು ಇವೊತ್ತು ಯಾವ ಒಂದು ಪರಿಸ್ಥಿತಿಯಲ್ಲಿದೆ ಎಂದರೆ ಮಳೆಗಾಲದಲ್ಲಿ ನೀರು ಕಟ್ಟಡದ ಒಳಗಡೆ ನುಗ್ಗಿ ಅಲ್ಲಿರತಕ್ಕಂಥ ದಫ್ತರುಗಳೆಲ್ಲಾ ತೋಯ್ದು ಹೋಗುವ ಪರಿಸ್ಥಿತಿ ಇದೆ.

ಇದಾಗಲಿಕ್ಕೆ ಕಾರಣವೇನು ? ಇತ್ತೀಚೆಗೆ ಏನು ತೊಂದರೆಗಳಿವೆ ? ಅದೇ ಚೀಫ್ ಇಂಜಿನಿಯರ್, ಅದೇ ಇಂಜಿನಿಯರುಗಳು ಇವತ್ತೂ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಏನು ಕೊರತೆ ಇದೆ ಎಂದು ನೋಡಬೇಕು. ಸರ್ಕಾರದವರು ಸಾಕಷ್ಟು ರೊಕ್ಕ ಈ ಕಾರ್ಯದ ಮೇಲೆ ಖರ್ಚುಮಾಡುತ್ತಿಲ್ಲವೆಂದು ಹೇಳಬಯಸುವುದಿಲ್ಲ. ಪ್ರತ್ಯೇಕ ಸಬ್‌ಡಿವಿಜನ್ ಇದ್ದೂ ಕೆಲಸ ಮಾಡುವಾಗ ಈ ರೀತಿ ಲೋಪದೋಷಗಳು ಏಕೆ ಬರುತ್ತವೆ, ಈ ರೀತಿಯಾಗಿ ಮುಂದೆ ಆಗದಂತೆ ಏನು ಕ್ರಮಗಳನ್ನು

(ಶ್ರೀ ಸಿದ್ದಯ್ಯ ಕಾಶೀಮಠ್)

ಕೈಗೊಂಡಿದ್ದೀರಿ, ಎಷ್ಟು ಮಂದಿ ಇಂಜಿನಿಯರುಗಳಿಗೆ ಫೈನ್ ಹಾಕಿದ್ದೀರಿ ಅಥವಾ departmental action ತೆಗೆದುಕೊಂಡಿದ್ದೀರಿ ! ಆ ರೀತಿ ಕ್ರಮ ತೆಗೆದುಕೊಂಡಿರುವುದು ಒಂದಾದರೂ ಇದೆಯೇ ? ಮೇಲ್ವಿಚಾರಣೆ ಮಾಡದೆ ಹೋದರೆ ರಾಜ್ಯದ ಉತ್ಪನ್ನದಲ್ಲಿ 30 ಪರ್ಸೆಂಟ್ ದುಡ್ಡು ಖರ್ಚು ಮಾಡುವ ಈ ಇಲಾಖೆಯಿಂದ ಅನರ್ಥವಾದೀತು ಎಂದು ಹೇಳಬಯಸುತ್ತೇನೆ.

ಟ್ರಾವಲರ್ಸ್ ಬಂಗಲೆ ವಿಚಾರದಲ್ಲಿ ಹೇಳಬೇಕಾದರೆ ಅದಷ್ಟುಮಟ್ಟಿಗೂ 15-20 ಸಾವಿರ ಜನ ಇರತಕ್ಕ ಊರಿನಲ್ಲಿ ಒಂದು ಟಿ. ಬಿ. ಮಾಡಬೇಕು. Ex-Bombay area 1956 ರಲ್ಲಿ ವಿಲೀನ ಹೊಂದಿದ ನಂತರ ಎಷ್ಟು ಟಿ.ಬಿ.ಗಳನ್ನು ಕಟ್ಟಿಸಿದ್ದೀರಿ ಎಂದು ಕೇಳುತ್ತೇನೆ. ಒಂದನ್ನಾದರೂ ಕಟ್ಟಿಸದೆ, ಇರುವುದನ್ನು ರಿಪೇರಿ ಮಾಡಿಸಬೇಕಾದರೂ ಅರ್ಧರ್ಧ ಮಾಡಿ, ಇದ್ದ ಟಿ. ಬಿ. ಗಳಲ್ಲಿ furniture ಕೂಡ ಇಲ್ಲದ ಪರಿಸ್ಥಿತಿಗೆ ತಂದಿರುತ್ತೀರಿ. ಇದರ ಬಗ್ಗೆ ಸಾಕಷ್ಟು representation ಮಾಡಿದೆ. ಅದನ್ನು ಗಣನೆಗೆ ತೆಗೆದುಕೊಂಡು ಜನಸಂಖ್ಯೆಯ ಪ್ರಮಾಣದ ಮೇಲಾದರೂ ಟಿ. ಬಿ. ಗಳನ್ನು ಅವು ಇಲ್ಲದ ಸ್ಥಳದಲ್ಲಿ ಕಟ್ಟಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ರೂರಲ್ ಕಮ್ಯೂನಿಕೇಷನ್ನಿಗೆ ನೀವು ಕೊಟ್ಟ ಹಣ ಸಾಲದು. ನೀವು ಏನು ಮಣ್ಣು ಹಾಕಿಸಿದಿರಿ, ಅದೆಲ್ಲ ಆಳೆತ್ತರದ ತಗ್ಗುಗಳು ಬಿದ್ದು, ಆ ರಸ್ತೆಗಳಲ್ಲಿ ಚಕ್ಕಡಿಗಳು ಸರಾಗವಾಗಿ ಹೋಗುವುದಕ್ಕೆ ಆಗುವುದಿಲ್ಲ. ಅದರಿಂದಾಗಿ ದಿನನಿತ್ಯ ಸರ್ಕಾರವನ್ನು ಆ ಜನ ಬಯ್ಯುವ ಪರಿಸ್ಥಿತಿ ಇದೆ. ತಾಲ್ಲೂಕ್ ಬೋರ್ಡಿನಿಂದ ರಸ್ತೆಗಳನ್ನು ತೆಗೆದುಕೊಂಡು ಅದಕ್ಕೆ ಬಡ್ಜೆಟ್‌ನಲ್ಲಿ ಹಣವನ್ನು ತೋರಿಸಿಲ್ಲ. ವರ್ಷದ ಕೊನೆಯಲ್ಲಾದರೂ current repairs ಸಲುವಾಗಿ ಕೆಲಸ ಮಾಡಿಸಿ ತಗ್ಗುಗಳನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಮಂತ್ರಿಗಳು ಬಂದಾಗ ಕೂಡ ಇದರಬಗ್ಗೆ representation ಮಾಡಿದ್ದುಂಟು. ಅದಕ್ಕೆ ಅವರು ನಮ್ಮಲ್ಲಿ ರೊಕ್ಕವಿಲ್ಲ, ಬಂದನಂತರ ಮಾಡುತ್ತೇವೆಂದು ಹೇಳಿದರು. ಯಾರಾದರೂ ಮಂತ್ರಿಗಳು ಬಂದಾಗ ಕೊಟ್ಟಂಥ ಆಶ್ವಾಸನೆಯನ್ನು ಕಾರ್ಯಗತ ಮಾಡಬೇಕು ಎಂದು ಹೇಳುತ್ತೇನೆ.

ಪಾಲಾ-ಬಾದಾಮಿ ರೋಡಿನಲ್ಲಿ ಮಂತ್ರಿಗಳ ಕಾರು ನಿಂತುಹೋಯಿತು. ಅದೇರೀತಿ ಬೇರೆ ಯಾರಾದರೂ ಬಂದರೂ ಅವರ ಕಾರು ಅಲ್ಲಿ ಓಡತಕ್ಕ ಪರಿಸ್ಥಿತಿ ಇಲ್ಲ. ಅಲ್ಲಿಯ ಪರಿಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನ ಮಾಡಿಲ್ಲ. ಆ ರಸ್ತೆಗಳಲ್ಲಿ ಅಲ್ಲಲ್ಲಿ ಸೇತುವೆಗಳನ್ನು ಕಟ್ಟಿಸಬೇಕು ಎಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಕುಡಿಯುವ ನೀರಿನ ಬಗ್ಗೆ ಹೇಳಬಯಸುತ್ತೇನೆ. ಕುಂದಗೋಳ ತಾಲ್ಲೂಕಿನಲ್ಲಿ ಪಶುಪತಾಳ, ಎರಬೂದಾಳ ಎಂಬ ಎರಡು ಊರುಗಳಿವೆ. ಅಲ್ಲಿ ಕುಡಿಯುವ ನೀರಿನ ಸೌಕರ್ಯವಿಲ್ಲ. ಬೇರೆಕಡೆಯಿಂದ ತೆಗೆದುಕೊಂಡು ಬಂದು ಕುಡಿಯತಕ್ಕ ಪರಿಸ್ಥಿತಿ ಇದೆ. ಸರ್ಕಾರ ಬೇಕಾದಷ್ಟು ಯೋಜನೆಗಳನ್ನು ಮಾಡಿದರೂ ಅವೊಂದೂ ಇವತ್ತಿನ ದಿವಸ ನಮಗೆ ಬೇಕಿಲ್ಲ ಎಂದು ಹೇಳುತ್ತಾರೆ. ಅವರು ಕುಡಿಯುವ ನೀರಿನ ಸೌಕರ್ಯಕ್ಕಾಗಿ ತಗಲುವ ಖರ್ಚನ್ನೂ ಕೂಡ ಕೊಡಲಿಕ್ಕೆ ಕಬೂಲಿದ್ದಾರೆ. ಹತ್ತುವರ್ಷದಿಂದ ಕೇಳಿದರೂ ಕೆಲಸ ಆಗಿಲ್ಲ. ಈ ಗ್ರಾಮಗಳ ಜನಸಂಖ್ಯೆ 3 ಸಾವಿರವಿದೆ. ಜನ ಕುಡಿಯುವುದಕ್ಕೆ ನೀರು ಹಾಗಿರಲಿ, ದನಕರುಗಳಿಗೆ ಕೂಡ ಕುಡಿಯುವುದಕ್ಕೆ ನೀರಿಲ್ಲದ ಪರಿಸ್ಥಿತಿ ಇದೆ. ಮೂರು ಸಾವಿರದಿಂದ ಐದುಸಾವಿರದ ವರೆಗೆ ಜನಸಂಖ್ಯೆ ಇರುವ ಗ್ರಾಮಗಳಿಗೆ ಕುಡಿಯುವ ನೀರನ್ನು ಕೊಡಬೇಕೆಂದು ಒತ್ತಾಯವಾಗಿ ಹೇಳಬಯಸುತ್ತೇನೆ. ಈಗ ಕುಂದಗೋಳದವರೆಗೂ ಕುಡಿಯುವ ನೀರಿನ ಸೌಕರ್ಯ ಉಂಟಾಗಿದೆ. ಅಲ್ಲಿಂದ ಮುಂದೆ ನಾಲ್ಕೂವರೆ ಮೈಲಿ ದೂರಕ್ಕೆ ಕುಡಿಯುವ ನೀರನ್ನು ಒದಗಿಸಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಡಿವಿಜನ್‌ಗಳ ಬಗ್ಗೆ ಕೂಡ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಒಂದು ಸಬ್ ಡಿವಿಜನ್ ಮಾಡಬೇಕಾದರೂ ಕೂಡ 40 ಮೈಲಿ ದೂರದಲ್ಲಿರುವುದನ್ನು ಒಂದು ಡಿವಿಜನ್ನಿಗೆ ಸೇರಿಸುತ್ತಿದ್ದಾರೆ ಈಗ. ಡಿವಿಜನ್ ಹೆಚ್ಚಿಗೆ ಮಾಡಿದರೆ ಆಗ ಹಳ್ಳಿಗಳಿಗೆ ಬಹಳ ಹತ್ತಿರವಾಗುತ್ತದೆ. ಆ ಹಳ್ಳಿಗಳಿಗೆ ಸಮೀಪದಲ್ಲಿರುವ ಸಬ್‌ಡಿವಿಜನ್ನಿನ ಅಸಿಸ್ಟೆಂಟ್ ಇಂಜಿನಿಯರು ತಕ್ಷಣ ಬಂದು ನೋಡುವಂಥ ವ್ಯವಸ್ಥೆಯನ್ನು ಮಾಡಬೇಕು. ಶಿಗ್ಗಾವಿಗೆ ಬರಬೇಕಾದರೆ 40 ಮೈಲಿ ದೂರದಿಂದ ಇಂಜಿನಿಯರು ಬರಬೇಕು. ಪ್ರತಿಯೊಬ್ಬರಿಗೂ ಹತ್ತು ಮೈಲಿಗಿಂತ ದೂರವಿಲ್ಲದಂತೆ ಏರ್ಪಾಡು ಮಾಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಕಟ್ಟಡಗಳ ಮೇಲ್ವಿಚಾರಣೆ, ಗ್ರಾಮಾಂತರ ರಸ್ತೆಗಳು ಇವುಗಳ ಬಗ್ಗೆ ನಾನು ಹೇಳಿದುದನ್ನು ಗಮನದಲ್ಲಿಟ್ಟುಕೊಂಡು ಅದನ್ನೆಲ್ಲ ಪೂರೈಸಿಕೊಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಗೋಪಾಲರಾವ್ ಮುಡಬಿ (ಹುಮ್ನಾಬಾದ್).—ಅಧ್ಯಕ್ಷರೇ, ಪಬ್ಲಿಕ್ ವರ್ಕ್ಸ್ ಮಂತ್ರಿಗಳು ಮಂಡಿಸಿರುವ ಡಿಮಾಂಡುಗಳನ್ನು ನಾನು ಸಮರ್ಥಿಸುತ್ತ ಕೇವಲ ಬೀದರ್ ಜಿಲ್ಲೆಗೆ ಸಂಬಂಧಪಟ್ಟಂತೆ ಕೆಲವು ಸಮಸ್ಯೆಗಳನ್ನು ಸಭೆಯ ಮುಂದೆ ಇಡಬಯಸುತ್ತೇನೆ. ನಮ್ಮ ರಾಜ್ಯದ 19 ಜಿಲ್ಲೆಗಳಲ್ಲಿ ಒಂದಾದ ಬೀದರ್ ಜಿಲ್ಲೆ ನಮ್ಮ ರಾಜ್ಯದ ತುಟ್ಟತುದಿಯಲ್ಲಿದೆ. ಬೀದರ್ ಜಿಲ್ಲೆಗೆ ನಮ್ಮ ರಾಜ್ಯ ಸರ್ಕಾರದಿಂದ ಯಾವ ತರಹ ಸಹಾಯ ದೊರಕುತ್ತದೆ ಎನ್ನುವುದನ್ನು ನಾನು ಸ್ವಲ್ಪ ಇಲ್ಲ ಪ್ರಸ್ತಾಪಿಸಬೇಕೆಂದಿದ್ದೇನೆ.

ಮೈಸೂರು ದೇಶದಿಂದ ಯಾವುದೇ ಭಾಗದಿಂದ ಬೀದರ್ ಜಿಲ್ಲೆಗೆ ಅದರಲ್ಲಿಯೂ ಬೀದರ ನಗರಕ್ಕೆ ಹೋಗಬೇಕಾದರೆ ನಮ್ಮದೇ ರಾಜ್ಯದಿಂದ ಹಾದು ಹೋಗತಕ್ಕ ಯಾವುದೂ ಮಾರ್ಗವಿಲ್ಲ. ನಾವು ಹೋಗಬೇಕಾದರೆ ಆಂಧ್ರ ಪ್ರದೇಶ ಅಥವಾ ಮಹಾರಾಷ್ಟ್ರ ಪ್ರದೇಶದ ಮೂಲಕ ಹಾದು ಹೋಗಬೇಕಾಗಿದೆ. ಹಾಗೇನೇ ನಾವು ಬೀದರ್‌ಗೆ ಹೋಗಿ ಮುಟ್ಟುವುದು ಸಾಧ್ಯವಿಲ್ಲ. ಇನ್ನೊಂದು ದುರ್ದೈವದ ವಿಷಯವೆಂದರೆ ಎರಡು ವರ್ಷಗಳ ಹಿಂದೆ ಆಂಧ್ರ ಪ್ರದೇಶದಲ್ಲಿ ಇದ್ದಂಥ ಒಂದೆರಡು ಸೇತುವೆಗಳು ಬಿದ್ದು ಹೋಗಿ ಮಳೆಗಾಲದಲ್ಲಿ ನಾಲ್ಕು ತಿಂಗಳು ಬೀದರಗೆ ಹೋಗಲಿಕ್ಕೆ ಯಾವ ಮಾರ್ಗವೂ ಇಲ್ಲ. ಬೀದರ್ ಜಿಲ್ಲೆಯು ಮೈಸೂರು ರಾಜ್ಯಕ್ಕೆ ಸೇರಿದ ಮೇಲೆ ಈ ಏಳು ವರ್ಷಗಳಿಂದ ಬೆಂಗಳೂರಿನಿಂದ ಬೀದರ್‌ಗೆ ಒಂದು ಮಾರ್ಗವನ್ನಾದರೂ ಮಾಡಿಕೊಡಬೇಕುಎಂದು ಕೇಳುತ್ತಿದ್ದೇವೆ. ಈಗ ಬೆಂಗಳೂರಿನಿಂದ ಬೀದರ್‌ಗೆ ಹೋಗಬೇಕಾದರೆ, ಅದರಲ್ಲಿಯೂ ಮಳೆಗಾಲದಲ್ಲಿ ಹೋಗಬೇಕಾದರೆ ರೈಲ್ವೆಯಿಂದ ಬೀದರಯನ್ನು ಮುಟ್ಟಬಹುದೇ ಹೊರತು ಬೇರೆ ಮಾರ್ಗವಿಲ್ಲ. ಮಾನ್ಯ ಮಂತ್ರಿಗಳು ಹೋದ ವರ್ಷ ಎಂದರೆ 1963 ಏಪ್ರಿಲ್ ನಲ್ಲಿ ಬೀದರ್‌ಗೆ ಹುಮ್ನಾಬಾದ ಮೂಲಕ ರಸ್ತೆ ಹೋಗುವ ಒಂದು ಯೋಜನೆ ತಯಾರಾಗುವುದು ಎಂದು ಹೇಳಿದ್ದರು. ದುರ್ದೈವವಶಾತ್ ಅದು ಇನ್ನೂ ಆಗಿಲ್ಲ. ತಾಲ್ಲೂಕಿನಿಂದ ತಾಲ್ಲೂಕಿಗೆ, ಅಥವಾ ಒಂದು ತಾಲ್ಲೂಕಿನಿಂದ ಬೀದರ್ ನಗರಕ್ಕೆ ಬರಬೇಕಾದರೆ ದಾರಿ ಇಲ್ಲ; ಅದಕ್ಕೆ ಒಂದೇ ವಿಚಾರವನ್ನು ಸಭೆಯ ಗಮನಕ್ಕೆ ತರುತ್ತೇನೆ. ಇಡೀ ರಾಜ್ಯದಲ್ಲಿರುವ ವಾಹನ ಸೌಕರ್ಯಗಳನ್ನು ನೋಡಿದರೆ ಎಲ್ಲ ಜಿಲ್ಲೆಗಳಲ್ಲಿಯೂ ಮೋಟಾರುಗಳನ್ನು ಲಾರಿಗಳನ್ನು ಕಾಣಬಹುದು. ಆದರೆ ನಮ್ಮ ಜಿಲ್ಲೆಯಲ್ಲಿ ಅವು ಕಾಣುವುದಿಲ್ಲ. ನಮ್ಮ ರಾಜ್ಯದಲ್ಲಿ ಒಟ್ಟು 428 ಒಂಟೆಗಳಿದ್ದರೆ ಬೀದರ್ ಜಿಲ್ಲೆ ಒಂದರಲ್ಲೇ 318 ಒಂಟೆಗಳಿವೆ. ಅದೇ ಪ್ರಕಾರ ಮೈಸೂರು ರಾಜ್ಯದಲ್ಲಿ ಸುಮಾರು 40 ಸಾವಿರ ಕುದುರೆಗಳಿದ್ದರೆ ಬೀದರ್ ಜಿಲ್ಲೆಯೊಂದರಲ್ಲೇ 7 ಸಾವಿರ ಕುದುರೆಗಳಿವೆ. ಇದರ ಮೇರ ಈ ಜಿಲ್ಲೆಯಲ್ಲಿ ರಸ್ತೆ ಮತ್ತು ಸಾರಿಗೆ ಎಷ್ಟರಮಟ್ಟಿಗೆ ಸುವ್ಯಸ್ಥಿತವಾಗಿದೆ ಎನ್ನುವುದು ಗೊತ್ತಾಗುತ್ತದೆ.

4-30 P.M.

ಇದಕ್ಕೆ ಕಾರಣ ಏಳು ವರ್ಷಗಳಿಂದ ಬೀದರ್ ಜಿಲ್ಲೆಗೆ ರಾಜ್ಯಸರ್ಕಾರ ಏನು ನೆರವು ನೀಡುತ್ತಿದ್ದಾರೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ನಾಲ್ಕು ವರ್ಷದಲ್ಲ ಅರು ಜನ ಎಗ್ಜಿಕ್ಯೂಟಿವ್ ಇಂಜಿನಿಯರುಗಳು ಅಲ್ಲಿಂದ ವರ್ಗವಾಗಿ ಹೋದರು. ವ್ಯವಹಾರದಲ್ಲಿ ಅನುಭವವಿಲ್ಲದಿರುವವರು ಹೊಸದಾಗಿ ಪ್ರಮೋಷನ್ ಆಗಿರುವವರು ಅಥವಾ ಯಾರಿಗಾದರೂ ಶಿಕ್ಷೆ ಕೊಡಬೇಕಾದರೆ ಇವರನ್ನು ಅಲ್ಲಿಗೆ ಹಾಕುತ್ತಾರೆ. ಒಳ್ಳೆಯವರು ಅಲ್ಲಿಗೆ ಬಂದರೆ ಮೂರು ನಾಲ್ಕು ತಿಂಗಳಲ್ಲಿ ಇನ್ನೊಂದು ಕಡೆಗೆ ವರ್ಗವಾಗಿ ಹೋಗುತ್ತಾರೆ. ಹೀಗಾಗಿ ಅಲ್ಲಿ ಎಷ್ಟೋ ಅಸಿಸ್ಟೆಂಟ್ ಇಂಜಿನಿಯರ್ ಮತ್ತು ಸೂಪರ್‌ವೈಜರುಗಳ ವೇಕೆನ್ಸಿಗಳು ಉಳಿದಿವೆ. ಬೀದರ್ ಜಿಲ್ಲೆಯ ಬಗ್ಗೆ ಸರಕಾರ ವಿಶೇಷ ಆಸ್ಥೆ ವಹಿಸಬೇಕು. ಸಮಾಜದಲ್ಲಿ ಆಸಕ್ತ ವರ್ಗಗಳಿದ್ದರೆ ಅವರ ಕುಂದುಕೊರತೆಗಳನ್ನು ನಿವಾರಣೆ ಮಾಡುವುದು ಸರಕಾರದ ಕರ್ತವ್ಯ. ಹಾಗೆಯೇ ಬೀದರ್ ಜಿಲ್ಲೆಗೆ ಸಹಾಯ ಮಾಡಬೇಕು. ಆದರೆ 19 ಜನರು ಊಟಕ್ಕೆ ಕುಳಿತಿದ್ದರೆ ಕೊನೆಗೆ ಕುಳಿತಿದ್ದವರಿಗೆ ಸರಿಯಾಗಿ ಬರುವುದಿಲ್ಲ, ಹಾಗಾಗಿದೆ ಬೀದರ್ ಜಿಲ್ಲೆಯ ಸ್ಥಿತಿ. ಮಂಡ್ಯ, ಮೈಸೂರು ಮುಂತಾದ ಜಿಲ್ಲೆಗಳಿಗೆ ಬೇಕಾದುದನ್ನು ಮಾಡಿಕೊಂಡು ಬೀದರ್ ಜಿಲ್ಲೆಗೆ ಏಳು ವರ್ಷವಾದರೂ ರಸ್ತೆ, ಕಟ್ಟಡ ಯಾವುದನ್ನೂ ಒದಗಿಸುತ್ತಿಲ್ಲ. ಈಗ ಈ ಕ್ಯಾಪಿಡಿಯನ್ನು ನೋಡಿ ನನಗೆ ಸಮಾಧಾನವಾಗಿದೆ. ಒಬ್ಬ ರೋಗಿ ಡಾಕ್ಟರಲ್ಲಿ ಹೋದರೆ ಅವನ ಕಾಯಿಲೆಯನ್ನು ಆತನು ಚಿಕಿತ್ಸೆ ಮಾಡಿದರೆ ಅಷ್ಟೇ ಸಂತೋಷ. ರೋಗ ಇಥಾದ್ದು ಎಂದು ಅರ್ಥವಾದಂತಾಗುತ್ತದೆ. ಮೈಸೂರು ರಾಜ್ಯಕ್ಕೆ ಒದಗಿಸಿರುವ 29 ಕೋಟಿ ರೂಪಾಯಿಗಳಲ್ಲಿ ಬೀದರೆಗೆ ಖರ್ಚು ಮಾಡಿರುವುದು ಕೇವಲ 50 ಲಕ್ಷ ರೂಪಾಯಿ. ನಮ್ಮಲ್ಲಿ ಎಷ್ಟು ದುರ್ಭರ ಪರಿಸ್ಥಿತಿಯಿದೆ, ಸರಕಾರ ಯಾವ ರೀತಿ ಅದನ್ನು ನಿವಾರಣೆಮಾಡಬೇಕು ಎಂಬುದನ್ನು ನಾವು ಹೇಳಬೇಕಾಗಿದೆಯೇ ನಮ್ಮ ಜಿಲ್ಲೆಗೆ ವಿಶೇಷ ವ್ಯವಸ್ಥೆ ಮಾಡಬೇಕು. 100 ಚದುರ ಮೈಲಿಗೆ ಕೇವಲ 12 ಮೈಲಿಯಷ್ಟು ರಸ್ತೆಯಿದೆ. ಆದಕಾರಣ ರಸ್ತೆಗಳು ಹೆಚ್ಚಾಗಬೇಕು. N. H. No. 9ರ ಉತ್ತರ ದಕ್ಷಿಣಕ್ಕೆ 50

(ಶ್ರೀ ಗೋಪಾಲರಾವ್ ಮುಡಬಿ)

ಮೈಲಿ ದೂರ ಹೋದರೂ ಯಾವ ರಸ್ತೆಯೂ ಸಿಕ್ಕುವುದಿಲ್ಲ. ರೂರಲ್ ಕಮ್ಯುನಿಕೇಷನ್‌ನಿಂದ ಆದ ಲಾಭ ಎಲ್ಲಿದೆ ವಿಭಾಗ ನಮಗೆ ಗೊತ್ತಿಲ್ಲ. ಹೊಸ ಮೈಸೂರು ಹಳೆಯ ಮೈಸೂರು ಎಂದು ಮಾಡ ಬೇಕು ಎಂದು ನಾನು ಹೇಳುವುದಿಲ್ಲ. ಯಾವ ಜಿಲ್ಲೆಗೆ ಕನಿಷ್ಠ ಅವಶ್ಯಕತೆಗಳೂ ಇಲ್ಲವೋ ಅಲ್ಲಿಗೆ ಮೊದಲು ಹಣ ಒದಗಿಸಿ ಉಳಿದುದಕ್ಕೆ ಆಮೇಲೆ ಗಮನ ಕೊಡಬಹುದು. ಹುಮ್ನಾಬಾದ್ ಬೀದರ್ ಸ್ಟೇಟ್ ಹೈವೆ ಇನ್ನೂ ಏಳು ಮೈಲಿ ಮೆಟಲ್ ಆಗಬೇಕಾಗಿದೆ, ನಾಲ್ಕು ವರ್ಷ ಸೇತುವೆಗಳಾಗಬೇಕಾ ಗಿವೆ. ಇನ್ನು ಎರಡು ಮೂರು ವರ್ಷದವರೆಗೆ ಅದು ಪೂರ್ತಿಯಾಗುವುದಿಲ್ಲ. ಅದಕ್ಕೆ ವಿಶೇಷ ವ್ಯವಸ್ಥೆ ಮಾಡಿ ಹೊಸ ಕಂಟ್ರಾಕ್ಟರನ್ನು ನೇಮಿಸಿ ಮಾಡಬೇಕು. ಇಂಜಿನಿಯರನ್ನು ಕೇಳಿದರೆ ಕಂಟ್ರಾಕ್ಟರು ಗಳೇ ಬರುವುದಿಲ್ಲವೆಂದು ವಿಚಿತ್ರವಾದ ವಿವರಣೆ ಹೇಳುತ್ತಾರೆ. ಔರಾದ ಥಾಲ್ಕಿಗೆ ಹೋಗುವ ಅಧಿಕಾರಿಗಳು ಅಲ್ಲಿ T. B. ಮತ್ತು I. B. ಇಲ್ಲದಿದ್ದರಿಂದ ನಿಲ್ಲುವುದಿಲ್ಲ. ಹೀಗೆ ಅನೇಕ ತಾಲ್ಲೂಕು ಗಳು ಬಹಳ ಹಿಂದುಳಿದಿವೆ. ಆದುದರಿಂದ ಬೀದರ್, ಗುಲ್ಬರ್ಗ ಮತ್ತು ರಾಯಚೂರು ಇವು ಗಳಲ್ಲಿ ಹೊಸಯೋಜನೆಗಳನ್ನು ಹಾಕಿ ಅವುಗಳು ಉಳಿದ ಭಾಗಗಳ ಮಟ್ಟಕ್ಕೆ ಬರುವವರೆಗೆ ಅಲ್ಲಿಗೆ ವಿಶೇಶ ಗಮನ ಕೊಡಬೇಕೆಂದು ಹೇಳಿ ನನ್ನಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಕಾಮ ಗಾರಿ ಇಲಾಖೆಯವರು ಕೇಳಿರುವ 29 ಕೋಟಿ ರೂಪಾಯಿಗಳನ್ನು ಈ ಮಾನ್ಯ ಸಭೆ ಮಂಜೂರು ಮಾಡುವಾಗ ಕೆಲವು ವಿಷಯಗಳನ್ನು ಈಗಾಗಲೇ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿ ದ್ದಾರೆ. ನಾನು ಹೆಚ್ಚು ಹೇಳಬೇಕಾದುದೇನೂ ಇಲ್ಲ. ಪ್ರತಿ ವರ್ಷವೂ ನಮ್ಮ ಅಭಿಪ್ರಾಯವನ್ನು ಈ ಇಲಾಖೆಯ ಕೆಲಸ ಕಾರ್ಯಗಳ ಬಗ್ಗೆ ವ್ಯಕ್ತಪಡಿಸುತ್ತಾ ಸಾಕಷ್ಟು ಅತೃಪ್ತಿಯನ್ನು ವ್ಯಕ್ತ ಪಡಿಸಿದ್ದೇವೆ. ಮಾನ್ಯ ಸಚಿವರು ಕೂಡ ಹಣದ ಕೊರತೆಯ ಬಗ್ಗೆ ಅವರ ಅತೃಪ್ತಿಯನ್ನು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಒಂದು ವಿಷಯವನ್ನು ನಾನು ಮಂತ್ರಿಮಂಡಲಕ್ಕೆ ಹೇಳ ಬಯ ಸುತ್ತೇನೆ. ಅದೇನೆಂದರೆ ಅವರಿಗೆ ಸಮುದ್ಯಷ್ಟಿ ಇರಬೇಕು; ರಾಜ್ಯದ ಅಭಿವೃದ್ಧಿಯ ವಿಷಯದಲ್ಲಿ. ಹಾಗೆಯೇ ಮತ್ತೊಂದು ವಿಷಯವನ್ನು ನಾನು ಮನಗಂಡಿದ್ದೇನೆ ಮತ್ತು ಒಪ್ಪುತ್ತೇನೆ. ಅದೇನೆಂದರೆ ರಾಜ್ಯಕ್ಕೆ ಹೊಸದಾಗಿ ಬಂದಿರುವ ಹೈದರಾಬಾದಿನ ಮೂರು ಜಿಲ್ಲೆಗಳು ಮತ್ತು ಮುಂಬಯಿ ಕರ್ನಾ ಟಕದ ಕೆಲವು ಜಿಲ್ಲೆಗಳಲ್ಲಿ ಹಿಂದುಳಿದಿರತಕ್ಕ ಪ್ರದೇಶಗಳಿವೆ. ಈ ಪ್ರದೇಶಗಳನ್ನು ಅಭಿವೃದ್ಧಿ ಮಾಡ ಬೇಕಾದುದು ರಾಜ್ಯಸರ್ಕಾರದ ಆದ್ಯಕರ್ತವ್ಯವಾಗಿರುತ್ತದೆ. ಹಾಗೆಯೇ ಹಳೆಯ ಮೈಸೂರು ರಾಜ ದಲ್ಲಿ ಮಲೆನಾಡು ಪ್ರದೇಶದ ಸೇತುವೆ ಮತ್ತು ರಸ್ತೆಗಳು ಬಹು ಮುಖ್ಯ ಎನ್ನುವುದನ್ನು ಸರ್ಕಾರ ದವರು ಮನಗಂಡಿದ್ದಾರೆಂದು ತಿಳಿದಕೊಂಡಿದ್ದೇನೆ. ನಾವು ಮಲೆನಾಡು ಅಭಿವೃದ್ಧಿಯ ಬಗ್ಗೆ ಕೇಳಿದಾಗ ಮಾನ್ಯ ಸಹಕಾರಿ ಸಚಿವರು ಒಂದು ಮಾತನ್ನು ಹೇಳಿದರು. ಶಿವಮೊಗ್ಗ ಜಿಲ್ಲೆಯಲ್ಲಿ ನೂರು ಕೋಟಿ ರೂಪಾಯಿನ ಯೋಜನೆಯಾದ ಶರಾವತಿ ಯೋಜನೆ ನಡೆಯುತ್ತಿದೆ ಎಂದು ಹೇಳಿದರು; ಹಾಗೆಯೇ ಭದ್ರಾ ಯೋಜನೆ ನಡೆಯಿತು, ತುಂಗಾ ಯೋಜನೆ ನಡೆಯಿತು, ಇನ್ನೂ ಅನೇಕ ಯೋಜನೆ ಅಲ್ಲಿ ನಡೆಯುತ್ತಿವೆ ಎಂದು ಹೇಳಿದರು. ವಾಸ್ತವವಾಗಿ ಶಿವಮೊಗ್ಗ ಜಿಲ್ಲೆಯ ಜನರಿಗೆ ಈ ಯೋಜನೆಗಳಿಂದ ನೇರವಾಗಿ ಎಷ್ಟು ಮಟ್ಟಿನ ಪ್ರಯೋಜನ ದೊರಕುತ್ತಿದೆ ಎನ್ನುವುದನ್ನು ನೋಡದೆ ಇಂತಹ ಮೂದಲಿಸುವ ಮಾತನ್ನು ಹೇಳಿದ್ದಾರೆಂದು ಹೇಳಬೇಕಾಗಿದೆ. ಇನ್ನೊಂದು ಮಾತನ್ನು ಹೇಳಿದರು, ಮಲೆನಾಡು ಅಭಿವೃದ್ಧಿಮಂಡಲಿಯನ್ನು ರದ್ದು ಮಾಡಿದಮೇಲೆ ಪಂಚವಾರ್ಷಿಕ ಯೋಜನೆ ಗಳಲ್ಲಿ ವಿಶೇಷ ಹಣವನ್ನು ತೆಗೆದಿಟ್ಟು ಈ ಯೋಜನೆಗಳಲ್ಲಿ ಅಳವಡಿಸಿದ್ದೀರ ಎಂದರೆ ಅದನ್ನು ಕೇಳುವ ವರೆಗೆ ಇಲ್ಲವೆಂದು ಹೇಳಿದರು. ಈ ವಿಷಯವನ್ನು ಸರಕಾರ ಮನಗಾಣಬೇಕು. ರಾಜ್ಯದ ಸಮಗ್ರ ದೃಷ್ಟಿಯನ್ನು ಈ ಯೋಜನೆ ಮಾಡುವ ಕಾಲದಲ್ಲಿ ತಮ್ಮ ಮುಂದಿಟ್ಟು ಕೊಂಡು ಯಾವ ಕೆಲಸಕ್ಕೆ ಆದ್ಯತೆ ಕೊಡಬೇಕು, ಯಾವ ಕೆಲಸವನ್ನು ಬೇಗ ಮಾಡಿ ಮುಗಿಸಬೇಕು, ಯಾವ ಕೆಲಸಕ್ಕೆ ಈಗಾ ಗಲೇ ಹಣ ಖರ್ಚಾಗಿದೆ, ಇನ್ನೆಷ್ಟು ಅದಕ್ಕೊದಗಿಸಬೇಕು ಎಂಬುದನ್ನು ಗಮನಿಸದೆ ತಮ್ಮ ಮನ ಬಂದಹಾಗೆ ಮತ್ತು ಒತ್ತಡಗಳಿಗೆ ಒಳಗಾಗಿ, ಅಧಿಕಾರವನ್ನು ತಮ್ಮ ಕೈಲಿ ಇಟ್ಟುಕೊಳ್ಳುವ ಒಂದೇ ಉದ್ದೇಶದಿಂದ ಈ 29 ಕೋಟಿ ರೂಪಾಯಿಗಳನ್ನು ರಾಜ್ಯಾದ್ಯಂತ ಚೆಲ್ಲುವುದಾದರೆ ಅಥವಾ ಹಂಚುವು ದಾದರೆ ಮಾನ್ಯ ಮಾದರಿ ಮೈಸೂರಿನ ಶಿಲ್ಪಿಗಳಾದವರು ಏನು ಮಾತನ್ನು ಹೇಳಿದರೋ ಅದನ್ನು ದೃಢ ಪಡಿಸಬೇಕಾಗಿದೆ. ಬಡ್ಜೆಟ್ಟಿನಲ್ಲಿ ಸಂಬಂಧಪಟ್ಟ ಹಣಕಾಸಿನ ವಿಲೇವಾರಿಯಲ್ಲಿ ಇದು ಚೆನ್ನಾಗಿ ಕಾಣು ತ್ತದೆ. ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಕೇವಲ ಗುಲ್ಬರ್ಗ ಅಥವಾ ಹೈದರಾಬಾದು ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ರಾಜ್ಯದ ಸಾರ್ವಜನಿಕ ಬೊಕ್ಕಸವನ್ನು ಬಳಸುತ್ತಿದ್ದಾರೆಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಆದರೆ ಆ ಕೆಲಸವನ್ನು ಸೂಕ್ಷ್ಮವಾಗಿ ಮಾಡಿರಬಹುದು ಎನ್ನುವುದಕ್ಕೆ ಕೆಲವು ದೃಷ್ಟಾಂತರಗಳು ಕಾಣುತ್ತವೆ.

ಹಿಂದುಳಿದ ಪ್ರದೇಶಕ್ಕೆ ಗಮನಕೊಡಬೇಕೆಂದು ಹಿಂದೊಮ್ಮೆ ನಾನು ಹೇಳಿದ್ದೇನೆ. ನಮ್ಮ ಮಲೆನಾಡು ಪ್ರದೇಶ ಮರೆಯಬೇಡಿ ಎಂದು ಹೇಳಿದ್ದೇನೆ. ಇನ್ನೊಂದು ಮಾತು. ಹೊಸ ರಾಜ್ಯವಾದ ಮೇಲೆ ಹಿಂದುಳಿದ ಪ್ರದೇಶ ಬಂದಿದೆ. ಈ ಸಂದರ್ಭದಲ್ಲಿ ಹಳೇ ಮೈಸೂರು ಎನ್ನತಕ್ಕಂಥ ಏನು ಭಾಗ ಇದೆಯೋ ಆ ಭಾಗಕ್ಕೆ ಅಲ್ಲಿಯ ಹಣವನ್ನು ವೆಚ್ಚಮಾಡಿ ಪ್ರಗತಿ ಮಾಡುವುದು ಸೂಕ್ತ. ಈ ಹಣ ಬೇರೆ ಹಿಂದುಳಿದ ಪ್ರದೇಶಕ್ಕೆ ಉಪಯೋಗಿಸುವುದು ಸೂಕ್ತವಲ್ಲ. ಹಣ ಸಾಲದೇ ಇದ್ದರೆ ಕೇಂದ್ರ ಸರಕಾರದಿಂದ ಹಣ ತರಬೇಕು, ಅಥವಾ ಬೇರೆ ಮಾರ್ಗದಿಂದ ಹಣ ಪಡೆಯಬೇಕು. ಅತ್ಯಗತ್ಯವಾಗಿ ರಸ್ತೆ, ಸೇತುವೆ ಕೆಲಸ ಮಾಡಬೇಕಾಗಿದೆ. ನಮ್ಮ ರಾಜ್ಯದ ಮಂತ್ರಿ ಮಂಡಳದ ಮುಂದ ಇರತಕ್ಕಂಥ ಒಂದು ದೊಡ್ಡ ಸಮಸ್ಯೆ. ರಾಜ್ಯ ಕಟ್ಟತಕ್ಕಂಥ ಶಕ್ತಿಯಾಗಲಿ ದೂರದೃಷ್ಟಿಯಾಗಲಿ ಇರದೇ ಇದ್ದರೆ ಅಂಥ ಮಂತ್ರಿಮಂಡಳ ರಾಜ್ಯಕ್ಕೆ ಕಂಟಕಪ್ರಾಯವಾಗುತ್ತದೆ ಎಂಬುದನ್ನು ಯಾವಾಗಲೂ ಮರೆಯಬಾರದು. ನಮ್ಮ ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಒಂದು ಸೇತುವೆ ಕಟ್ಟಿಸಬೇಕಾಗಿದೆ. ಈ ಸೇತುವೆ ಕಟ್ಟಬಾರದು ಎಂದು ಮಂತ್ರಿಮಂಡಳ ಅಭಿಪ್ರಾಯ ಹೊಂದಿದ್ದರೆ ಅದು ಅಕ್ಷಮ್ಯ ಅಪರಾಧವಾಗುತ್ತದೆ. ಹಣಕಾಸಿನ ತೊಂದರೆ ಇದ್ದರೆ ಅದು ಬೇರೆ. ಈ ರೀತಿ ಮಾಡುವುದಾದರೆ ಬೇರೆ ಕಡೆ ಹೊಸ ಕೆಲಸ ತೆಗೆದುಕೊಳ್ಳುವುದಕ್ಕೆ ನಿಮಗೆ ನೈತಿಕ ಅಧಿಕಾರ ಬರುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಒಟ್ಟಿನಲ್ಲಿ ಶಿವಮೊಗ್ಗಾ ಜಿಲ್ಲೆಗೆ ಹಣ ಕಡಿಮೆ ಒದಗಿಸಲಾಗಿದೆ. ಮೂರನೇ ಯೋಜನೆಯಲ್ಲಿ ರಸ್ತೆ ಕೆಲಸಕ್ಕೆ ಒಂಭತ್ತು ಕೋಟಿ ರೂಪಾಯಿ ಯೋಜನೆ ಇದೆ. ಒಂದೆರಡು ವರ್ಷಗಳಲ್ಲಿ ಈ ಹಣ ಖರ್ಚು ಮಾಡಬಹುದು ಮತ್ತು ಸುಮಾರು ಸಾವಿರ ಮೈಲಿ ರಸ್ತೆ ರಚನೆ ಮಾಡಬಹುದು. ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಕೆಲವು ರಸ್ತೆಗಳನ್ನು ಮಾಡಿದ್ದಾರೆ. ಆದರೆ ಸರಿಯಾಗಿ ಜಲ್ಲಿ ಹಾಕಿಲ್ಲ. ಮೋರಿ ಕಟ್ಟಿಸಿಲ್ಲ. ಚರಂಡಿ ಮಾಡಿಲ್ಲ. ಯಾವ ರಿಪೇರ್ಸ್ ಮಾಡಿಲ್ಲ. ಮೆಂಟೆನನ್ಸಕ್ಕೆ ಹಣ ಒದಗಿಸಿಲ್ಲ. ಈ ರೀತಿ ಇಂಥ ರಸ್ತೆ ಮಾಡಿದ್ದಾರೆ. ಯೋಜನಾಬದ್ಧ ಕೆಲಸ ಮಾಡುವ ಸಮಯದಲ್ಲಿ ಹಾಕಿದ ಹಣ ಉಪಯೋಗವಾಗದೆ ದುಡ್ಡು ಬರೀ ನಷ್ಟವಾಗತಕ್ಕಂಥ ರೀತಿಯಲ್ಲಿ ಕೆಲಸ ಮಾಡುತ್ತಾ ಇದ್ದೀರಿ. ದೇಶಕ್ಕೆ ಸ್ವಾತಂತ್ರ್ಯ ಬರುವದಕ್ಕೆ ಮುಂಚೆ ಏನು ಮಾಡಿದ್ದಾರೆ ಎಂಬುದನ್ನು ಹೇಳುವುದು ಅಪ್ರಸ್ತುತವಾಗುತ್ತದೆ. 1947–48 ರ ನಂತರ ಮಂತ್ರಿಮಂಡಳ ಬಂದು ಕೆಲಸ ಕಾರ್ಯಗಳು ಆಗಿವೆ. ಆದರ ಬಗ್ಗೆ ಒಂದು ವಿಚಾರಣಾ ಸಮಿತಿ ನೇಮಕ ಮಾಡಿ ಎಷ್ಟು ಹಣ ಖರ್ಚಾಗಿದೆ ಕೆಲಸ ಕಾರ್ಯಗಳು ಎಷ್ಟರಮಟ್ಟಿಗೆ ನಡೆದಿದೆ, ಕೆಲಸ ಮಾಡಿದಂಥ ಕಂಟ್ರಾಕ್ಟರ್ ಯಾರು, ಅವರ ಬಿಲ್ಲು ಪಾಸ್ ಮಾಡಿದಂಥ ಎಂಜಿನಿಯರ್ ಯಾರು ಎನ್ನುವುದಕ್ಕೆ ವಿಚಾರಣೆ ನಡೆಸಬೇಕು. ಈ ರೀತಿ ವಿಚಾರಣಾ ಸಮಿತಿ ನೇಮಕ ಮಾಡಿ ತನಿಖೆ ಮಾಡಿಸುವುದು ಬಹಳ ಅಗತ್ಯ ಎಂದು ನನಗೆ ಅನಿಸುತ್ತದೆ. ಯಾಕೆಂದರೆ ಕೆಲವು ಕಡೆ ಕಟ್ಟಿಸಿದಂಥ ಸೇತುವೆ ಕೆಲವು ಕಾಲದ ನಂತರ ಬಿದ್ದು ಹೋಗಿವೆ. ಆದರೆ ಹಣ ತೆಗೆದುಕೊಂಡದ್ದನ್ನು ತಿರುಗಿ ಕೊಟ್ಟಿಲ್ಲ. ಮೋರಿ ರಿಪೇರಿ ಮಾಡಿಲ್ಲ. ಇಂಥ ನೂರಾರು ದೃಷ್ಟಾಂತಗಳನ್ನು ಕೊಡಬಹುದು. ಶ್ರೀಮಾನ್ ಕೃಷ್ಣ ಅವರು ಮೈಸೂರಿನ ಮಹಾರಾಣಿ ಕಾಲೇಜು ಕಟ್ಟಡದ ಬಗ್ಗೆ ಪ್ರಸ್ತಾಪ ಮಾಡಿದರು. ಕಟ್ಟಡ ಬೀಳುವಾಗ ಪ್ರಾಣ ಉಳಿದಿವೆ. ಇದರ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಇಂಥ ಕೆಲಸಗಳಿಗಾಗಿ ಸರಕಾರದ ಟ್ರೆಜರಿಯಿಂದ ಲಕ್ಷಾಂತರ ರೂಪಾಯಿ ಕಂಟ್ರಾಕ್ಟದಾರರಿಗೆ ಕೊಟ್ಟಿದೆ. ಇದಕ್ಕೆ ಯಾರು ಜವಾಬ್ದಾರರು ? ಎಕ್ಸಿಕ್ಯೂಟಿವ್ ಎಂಜಿನಿಯರ್, ಸೂಪರಿಂಟೆಂಡಿಂಗ್ ಎಂಜಿನಿಯರ್ ಅವರು ಸರಿಯಾಗಿ ಜವಾಬ್ದಾರಿ ವಹಿಸಿ ಕೆಲಸ ಮಾಡಿದ್ದಾರೆಯೇ ಎಂಬುದನ್ನು ವಿಚಾರಣೆ ಮಾಡಬೇಕಾದುದು ಅಗತ್ಯ. ಸಾರ್ವಜನಿಕ ವಿಚಾರಣೆ ನಡೆಸಿ ಇದಕ್ಕೆ ಯಾರು ಜವಾಬ್ದಾರರಾಗಿದ್ದಾರೆಯೋ ಅವರ ಮೇಲೆ ಜವಾಬ್ದಾರಿ ಹೊರಿಸಬೇಕು. ಇದಲ್ಲದೆ ಕೆಲಸ ಮಾಡಿದಂಥ ಕಂಟ್ರಾಕ್ಟರ್ ಹಾಗೂ ಎಂಜಿನಿಯರಿಂಗ್ ಇಲಾಖೆಯಲ್ಲಿರುವ ಓವರಸೀಯರ್ ಅವರು ಸ್ವಂತಕ್ಕೆ ಮಾಡಿಕೊಂಡಿರುವ ಆಸ್ತಿಪಾಸ್ತಿ ಕಳೆದ 15 ವರ್ಷಗಳಲ್ಲಿ ಎಷ್ಟು ಹೆಚ್ಚಾಗಿದೆ ಎಂಬುದನ್ನು ತನಿಖೆಗೆ ಗುರಿಪಡಿಸಬೇಕಾದುದು ದೇಶದ ಹಿತದೃಷ್ಟಿಯಿಂದ ಬಹಳ ಅಗತ್ಯ ಎಂದು ನನಗೆ ಅನಿಸುತ್ತದೆ. ಒಬ್ಬ ಓವರಸೀಯರನು ಬೆಂಗಳೂರು ನಗರದಲ್ಲಿ ಎಷ್ಟು ಸೈಟುಗಳನ್ನು ಇಟ್ಟುಕೊಂಡಿದ್ದಾನೆ, ಮನೆಯಲ್ಲಿ ಮಂತ್ರಿಗಳ ಮನೆಯಲ್ಲಿರುವುದಕ್ಕಿಂತ ಹೆಚ್ಚಾಗಿ ಸಾಮಾನುಗಳನ್ನು ಸಾಮುಗ್ರಿಗಳನ್ನು ಹೇಗೆ ಇಟ್ಟುಕೊಂಡಿದ್ದಾನೆ ಎಂಬುದನ್ನು ಪರಿಶೀಲನೆ ಮಾಡಬೇಕಾದ ಅಗತ್ಯ ಇದೆ. ಸಾಮಾನ್ಯವಾಗಿ ಇರುವ ಸಂಬಳದಲ್ಲಿ ಇಷ್ಟು ಸಾಮುಗ್ರಿ ಮಾಡಲು ಸಾಧ್ಯವಿಲ್ಲ. ಆದರೂ ಕೂಡ ಒಬ್ಬ ಜ್ಯೂನಿಯರ್ ಎಂಜಿನಿಯರ್ ಮನೆಯಲ್ಲಿ ಅಷ್ಟೊಂದು ಸಾಮುಗ್ರಿಗಳು ಇರುತ್ತವೆ. ಆದುದರಿಂದಲೇ ಎಂಜಿನಿಯರ್ ಆಗಲು ಅರ್ಜಿ ಹಾಕುತ್ತಾರೆ. ಭವ್ಯ ದೇಶ ಕಟ್ಟಬೇಕೆಂಬ ಆಲೋಚನೆ ಇರುವುದಿಲ್ಲ. ಇದನ್ನು ಸರಿಪಡಿಸಬೇಕಾದರೆ ಇಲಾಖೆಯಲ್ಲಿ ಪ್ರಾಮಾಣಿಕತೆ ಬರಬೇಕು, ಈ ಬಗ್ಗೆ ಮಂತ್ರಿಮಂಡಳ ತೀವ್ರ ಗಮನ ಕೊಡಬೇಕು. ನಾನು ಒಂದು ಮಾತು ಕೇಳುತ್ತಿದ್ದೇನೆ. ಮಂತ್ರಿಗಳ ಸಂಬಂಧಿಕರು ದೊಡ್ಡ ದೊಡ್ಡ ಕಂಟ್ರಾಕ್ಟರ ಜೊತೆಗೆ ಇದ್ದಾರೆಂದು ಜನ ಆಡಿಕೊಳ್ಳುತ್ತಿದ್ದಾರೆ.

(ಶ್ರೀ ಎಸ್. ಗೋಪಾಲಗೌಡ)

ಈ ಸಂದರ್ಭದಲ್ಲಿ ಹೆಚ್ಚು ತೀವ್ರತೆಯಿಂದ ಹೇಳಲು ಇಷ್ಟಪಡುವುದಿಲ್ಲ. ಸಂಬಂಧಪಟ್ಟ ಎಂಜಿನಿಯರರು ಹೊಣೆ ಹೊರಬೇಕಾಗುತ್ತದೆ. ಈ ಇಲಾಖೆಯಲ್ಲಿ ಸಾರ್ವಜನಿಕರ ಹಣ ಖರ್ಚಾಗುತ್ತಿದೆ. ಸಣ್ಣಪುಟ್ಟ ಲೋಪದೋಷದ ಬಗ್ಗೆ ಹೇಳುವುದಿಲ್ಲ. ಆದರೆ ಇಷ್ಟು ಹಣ ಈ ಇಲಾಖೆ ಮೂಲಕ ಸಾರ್ವಜನಿಕರ ಉಪಯೋಗಕ್ಕಾಗಿ ಕೆಲಸಗಳಿಗೆ ಖರ್ಚು ಮಾಡುತ್ತಿರುವಾಗ್ಗೆ ಪ್ರತಿಯೊಂದು ಕಾಸಿಗೂ ಹೊಣೆಗಾರರಾಗಬೇಕು, ಪ್ರಾಮಾಣಿಕವಾಗಿ ಖರ್ಚಾಗಬೇಕು, ಪ್ರಾಮಾಣಿಕವಾಗಿ ಖರ್ಚಾಗಿದೆಯೋ ಎಂಬುವನ್ನು ಜವಾಬ್ದಾರಿಯುಳ್ಳ ಸಂಬಂಧಪಟ್ಟವರು ತೋರಿಸಿಕೊಡಬೇಕು. ಆದುದರಿಂದ ಇದನ್ನು ವಿಚಾರಣೆ ಮಾಡುವುದು ಅಗತ್ಯ. ಅವರ ಸ್ವಂತ ಆಸ್ತಿಪಾಸ್ತಿ ವಿಚಾರಣೆಗೆ ಒಂದು ಸಮಿತಿ ನೇಮಕ ಮಾಡುವುದು ಅವಶ್ಯಕ ಎಂದು ನಾನು ಹೇಳಬಯಸುತ್ತೇನೆ. ಈಗ ಮಾತನಾಡಲು ಕಾಲಾವಕಾಶ ನನಗೆ ಕಡಿಮೆ ಇರುವುದರಿಂದ ಒಂದು ವಿಷಯ ಮಾತ್ರ ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಏನು ಎಂದರೆ ನಮ್ಮಲ್ಲಿ ಮಾಡಬೇಕಾದ ಅನೇಕ ಕಾಂಗಾರಿಗಳನ್ನು ಸರ್ಕಾರದವರು ಮಾಡುತ್ತಾ ಇಲ್ಲ. ಇವುಗಳ ಬಗ್ಗೆ ನನಗೆ ಬಹಳ ವ್ಯಸನವಾಗುತ್ತಿದೆ. ಈ ಮಾನ್ಯ ಸಭೆಯಲ್ಲಿ ಈ ಹೊತ್ತು ನಾವು ಹೇಳುವಾಗ ಪಟ್ಟಿಯನ್ನು ಕೊಡಬೇಕು ಇಂಥ ಊರಿನಲ್ಲಿ ಕೆರೆ ಆಗಿಲ್ಲ, ಸೇತುವೆ ಆಗಿಲ್ಲ, ಇಂಥ ಕಡೆ ರಸ್ತೆ ಮೋರಿ ಮುರಿದು ಬಿದ್ದು ಹೋಗಿದೆ ಅಂತ ಹೇಳಬೇಕು ಅನ್ನುತ್ತಾರೆ. ಅದು ಸರಿಯಲ್ಲ. ನಾವು ಕೆರೆ, ಬಾವಿ, ರಸ್ತೆ ಮುಂತಾದುವುಗಳನ್ನು ಮಾಡುವಾಗ ಏನು ತತ್ವವಿರಬೇಕು ಎಂದು ಸರಕಾರದ ಮುಂದೆ ಇಟ್ಟು, ಅಂಥ ತತ್ವವನ್ನು ಚರ್ಚೆ ಮಾಡಬೇಕು ಅಂತ ಅಪೇಕ್ಷಿಸುತ್ತೇವೆ. ಆದರೆ ನಮ್ಮ ಕ್ಷೇತ್ರದಲ್ಲಿ ನಾವು ಇಂಜನಿಯರುಗಳನ್ನು ನೋಡದೆ ಹೋದರೆ, ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಆಗಬೇಕಾದ ಕೆಲಸಗಳನ್ನು ತರದೆ ಹೋದರೆ ಕೆಲಸ ಆಗದೆ ಇರುವ ಸಂಭವಗಳು ಹೆಚ್ಚಾಗಿರುತ್ತವೆ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ : ತಮ್ಮ ವೈಯಕ್ತಿಕ ಗಮನವನ್ನು ಸ್ವಲ್ಪ ಮಲೆನಾಡಿಗೆ, ಅದರಲ್ಲಿಯೂ ಮುಖ್ಯವಾಗಿ ನಮ್ಮ ಕ್ಷೇತ್ರದ ಬಗ್ಗೆ ಇಡಬೇಕು. ಅಲ್ಲಿ ಆಗಬೇಕಾದ ಕೆಲಸಗಳು ಬಹಳವಿವೆ. ಅವುಗಳನ್ನು ಪೂರೈಸಲು ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕು ಎಂತ ನಾನು ಹೇಳುತ್ತೇನೆ. ಮಾಡಬೇಕಾದ ಅನೇಕ ಕೆಲಸಗಳನ್ನು ನಾನೇ ಅವರ ಗಮನಕ್ಕೆ ತಂದಿದ್ದೇನೆ. ಕೆಲಸ ಕಾರ್ಯಗಳನ್ನು ಮಾಡುವಾಗ, ಒಂದು ರಸ್ತೆಯನ್ನು ಮಾಡಬೇಕಾದರೆ, ಆ ಭಾಗದ ಜನರು ಡೆಲಿಗೇಷನ್ ಬರಬೇಕು, ಒಂದು ಕೆರೆ ಬೇಕಾದರೆ ಅಲ್ಲಿಯ ಜನರು ಡೆಲಿಗೇಶನ್ ಬರಬೇಕು, ಪ್ರತಿಯೊಂದಕ್ಕೂ ಡೆಲಿಗೇಶನ್ ಬಂದು ತಮ್ಮ ಮೇಲೆ ಪ್ರಭಾವ ಬೀರಬೇಕು ಎಂಬ ಮನೋಭಾವನೆಯನ್ನು ಸಂಪೂರ್ಣವಾಗಿ ಬಿಟ್ಟುಕೊಡಬೇಕು. ಎಲ್ಲಿ ಕೆರೆ ಕಟ್ಟುವುದು ಬಹಳ ಅಗತ್ಯವೋ, ಅದರ ಉಪಯುಕ್ತತೆ ಇದೆಯೋ, ಎಲ್ಲಿ ರಸ್ತೆ, ಸೇತುವೆ ಇತ್ಯಾದಿ ಬೇಕೋ, ಆ ಕೆಲಸಗಳನ್ನು ಯಾರ ಪ್ರಭಾವವೂ ಇಲ್ಲದೆ ಮಾಡಿ ಮುಗಿಸಬೇಕು. ಇದಕ್ಕೆ ಕಂಟ್ರಾಕ್ಟರುಗಳ, ಇಂಜಿನಿಯರುಗಳ ಸಹಕಾರ ಬೇಕಾಗುತ್ತದೆ. ಅವರು ಶ್ರದ್ಧೆಯಿಂದ ಮಾಡದೆಹೋದರೆ, ಈ ಹೊಣೆಯನ್ನು ಯಾರ ಮೇಲೂ ಹೊರಿಸುವುದಕ್ಕಾಗುವುದಿಲ್ಲ ; ಹಣ ವ್ಯರ್ಥವಾಗಿ ಖರ್ಚಾಗುತ್ತದೆ. ಈಗ ಮುಖ್ಯವಾಗಿ ಇಂಜಿನಿಯರಿಂಗ್ ಶಿಲ್ಪಿಯ ಬಗ್ಗೆ ಒಂದು ಮಾತನ್ನು ಶ್ರೀಮಾನ್ ಜತ್ತಿಯವರು ಹೇಳಿದರು : ಬಹಳ ಪ್ರಮಾದಕರವಾದ ವಿಷಯ, ಶಿಕ್ಷೆ ಮಾಡುತ್ತೇವೆ ಎಂದು ಈ ಸಭೆಯಲ್ಲಿಯೂ, ಮೇಲ್ಮನೆಯಲ್ಲಿಯೂ ಹೇಳಿದರು. ನಾನು ಅವರ ಮೇಲೆ ನೋಡಿದೆ ಏನು ದೊಡ್ಡ ತಪ್ಪು ಮಾಡಿದ್ದಾರೆಂದು. ನನ್ನ ಕೈಲಿ ಒಂದು ವಿವರ ಅದರ ಬಗ್ಗೆ ಇದೆ, ಅದನ್ನು ಅಪ್ಪಣೆ ಕೊಟ್ಟರೆ ಕೋಟ್ ಮಾಡುತ್ತೇನೆ. (ಅಧ್ಯಕ್ಷರು : ಇಲ್ಲ) ಅವರು ಏನು ಹೇಳಿದ್ದಾರೆಂದರೆ, ಆಡಿಟ್ ವರದಿಯಲ್ಲಿ ಹೇಳಿರುವಂಥ ಅನೇಕ ಲೋಪದೋಷಗಳಿಗೆ ನಾವೇ ಹೊಣೆಯಲ್ಲ, ಆದಕ್ಕೆ ಫೈನಾನ್ಸು ಇಲಾಖೆಯೂ ಹೊಣೆಯಾಗಬೇಕು, ಯಾವುದಕ್ಕೆ ಹಣ ಒದಗಿಸಬೇಕೋ ಅದಕ್ಕೆ ಹಣ ಒದಗಿಸುವುದಿಲ್ಲ, ಎಸ್ಟಿಮೇಟು ಆಗದೆ ಇರುವ ಬಿಲ್ಡಿಂಗುಗಳಿಗೆ ಹಣ ಒದಗಿಸುತ್ತಾರೆ ಎಂದು ಅವರು ಹೇಳುತ್ತಾರೆ. ಈ ಎಲ್ಲಾ ಕಾರಣಗಳಿರುವುದರಿಂದ, ನಾನು ಹೇಳುವುದು : ಮಂತ್ರಿಗಳೂ ಎಚ್ಚರಿಕೆ ವಹಿಸಬೇಕು, ಎಂಜನಿಯರುಗಳೂ ನಿಸ್ಪೃಹರಾಗಿ, ದೇಶ ಅಭಿವೃದ್ಧಿಯಾಗಬೇಕು ಎಂಬ ದೃಷ್ಟಿಯಿಂದ ಹಣದ ಬಗ್ಗೆ ಹೆಚ್ಚು ನಿಗಾ ವಹಿಸಬೇಕು. ಒಬ್ಬ ಸದಸ್ಯರು ಮದ್ರಾಸು ಮತ್ತು ಆಂಧ್ರಕ್ಕಿಂತ ನಮ್ಮ ಕೆಲಸ ಚೆಲೋ ಆಗಿದೆ ಎಂದು ಹೇಳಿದರು. ಆ ಮಾತು ಕೂಡ ಹೊಗಳಿಕೆ ಮಾತು ಎಂದು ನಾನು ಹೇಳುವುದಿಲ್ಲ. ಅದರಲ್ಲಿ ಎಷ್ಟು ಸತ್ಯಾಂಶವಿದೆ ಎನ್ನುವುದನ್ನು ನಮ್ಮ ಇಂಜಿನಿಯರುಗಳೆ ಹೇಳುತ್ತಾರೆ. ಅವರಿಗೆ ಹೊರಗಡೆ ಬೆಲೆ ಇದೆ. ಅವರು ಬಹಳ ಒಳ್ಳೆಯ ರೀತಿಯಲ್ಲಿ ಹೆಸರನ್ನು ಪಡೆದಿದ್ದಾರೆ. ನಮ್ಮಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರಂಥ ದೊಡ್ಡ ಇಂಜಿನಿಯರ್ ನಮ್ಮಲ್ಲಿ ಬಹಳ ಹಿಂದಿನಿಂದಲೂ ಇದ್ದರು. ಆ ಮಾತಿನ ಬಗ್ಗೆ ನಾನು ಇವತ್ತು ಮೆಚ್ಚಿಕೊಳ್ಳುತ್ತೇನೆ. ಆದರೆ ಇವತ್ತು ದೇಶದ ಹಣ ನಷ್ಟವಾಗುತ್ತಿದೆ. ನಾವು ಒಂದು ದೇಶವನ್ನು

ಕಟ್ಟುತ್ತಾ ಇರುವಾಗ, ಲಾಭ ಮಾಡಿಕೊಳ್ಳುವ ಜನರು ಮುಂದೆ ಬರುತ್ತಿದ್ದಾರೆ; ಅಂಥ ಕಂಟ್ರಾಕ್ಟರು ಗಳಿರುತ್ತಾರೆ. ಅವರ ಜೊತೆಯಲ್ಲಿ ಇಂಥ ಒಂದು ಸನ್ನಿವೇಶದಲ್ಲಿ ಹಣಗಳಿಸುವಂಥ ಮನೋಭಾವ ಬಂದಿದೆ. ಅದನ್ನು ಬಿಟ್ಟುಕೊಟ್ಟು ದೇಶದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಕೇಳಿಕೊಂಡು, ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲ್ಮಲ).—ಅಧ್ಯಕ್ಷರೆ, ಈ ಲೋಕೋಪಯೋಗಿ ಶಾಖೆಯ ಬೇಡಿಕೆಗಳ ಮೇಲೆ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ. ಈ ಶಾಖೆಯ ಕೆಲಸವನ್ನು ಪಿ. ಡಬ್ಲ್ಯು. ಡಿ. ಮಂತ್ರಿಗಳು 19 ಜಿಲ್ಲೆಗಳಲ್ಲಿ ಬಹಳ ಚೆನ್ನಾಗಿ ಮಾಡಿದ್ದಾರೆ. ಶರಾವತಿ ಡ್ಯಾಮು, ರಸ್ತೆಗಳು, ಸೇತುವೆಗಳು, ಬಾವಿಗಳು, ಯಾವುದೇ ಬಾಬು ತೆಗೆದುಕೊಳ್ಳಿ, ಎಲ್ಲದರಲ್ಲಿಯೂ ಬಹಳ ಮೆಚ್ಚುವ ರೀತಿಯಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ನಮ್ಮ ಮೈಸೂರು ರಾಜ್ಯದೊಳಗೆ ರಾಯಚೂರು, ಗುಲ್ಬರ್ಗ, ಬಿದರೆ, ಈ ಮೂರು ಜಿಲ್ಲೆಗಳು ಬಹಳ ಹಿಂದುಳಿದಿವೆ. ಇದನ್ನು ಒತ್ತಿ ಹೇಳಬೇಕಾಗಿಲ್ಲ, ಆ ಸ್ಥಿತಿ ಕಣ್ಣೆದುರಿಗೆ ಎದ್ದು ಕಾಣುತ್ತಿದೆ. ಅಲ್ಲಿ ಜನಗಳು ಬಹಳ ತೊಂದರೆಯಲ್ಲಿ ದ್ದಾರೆ. ಅಲ್ಲಿ ಒಂದು ರಸ್ತೆಯೂ ಚೆನ್ನಾಗಿಲ್ಲ ; ಶಾಲೆ ಕಟ್ಟಡಗಳಿಲ್ಲ ; ಬಾವಿಗಳಿಲ್ಲ.

[MR. DEPUTY SPEAKER in the Chair.]

ನಮ್ಮ ಪಿ. ಡಬ್ಲ್ಯು. ಡಿ. ಮಂತ್ರಿಗಳೂ ಬಹಳ ಒಳ್ಳೆಯವರಿದ್ದಾರೆ, ನಮ್ಮ ಇಂಜಿನಿಯರುಗಳೂ ಒಳ್ಳೆಯವರಿದ್ದಾರೆ. ಅವರುಗಳು ನಮ್ಮ ರಾಯಚೂರು ಜಿಲ್ಲೆಗೆ ಹೆಚ್ಚು ಗಮನ ಕೊಡುತ್ತಾರೆಂದು ನಾನ ನಂಬಿದ್ದೇನೆ.

ನಮ್ಮ ರಾಯಚೂರು ಜಿಲ್ಲೆಯ ಜನರು ಎಷ್ಟು ಹಿಂದುಳಿದಿದ್ದಾರೆಂದರೆ ಅಲ್ಲಿಯ ಜನರಿಗೆ ಅಸೆಂಬ್ಲಿ ಅಂತ ಇದೇ ಅನ್ನುವುದೇ ಗೊತ್ತಿಲ್ಲ. ಅಷ್ಟು ತಿಳುವಳಿಕೆ ಇಲ್ಲದ ಜನ.

ನಮ್ಮ ರಾಯಚೂರಿಗೆ ಬಸ್ಸಿನಲ್ಲಿ ಬರಬೇಕಾದರೆ, ಸುತ್ತು ಹಾಕಿಕೊಂಡು ಆಂಧ್ರರಾಜ್ಯದ ಮೂಲಕ ಬರಬೇಕು. ಬಸ್ಸುಗಳು ಬಹಳ ಸುತ್ತು ಹಾಕಿಕೊಂಡು ಬರುತ್ತಿವೆ. ಕೃಷ್ಣ ನದಿಗೆ ಬ್ರಿಡ್ಜ್ ಹಾಕಿದ್ದಾರೆ. ಅದೇ ರೀತಿ ತುಂಗಭದ್ರಕ್ಕೆ ಬ್ರಿಡ್ಜ್ ಹಾಕಿದರೆ, ನೇರವಾಗಿ ನಮ್ಮ ರಾಯ ಚೂರಿಗೆ ರಸ್ತೆ ಆಗುತ್ತದೆ. ಈ ಸೇತುವೆಯನ್ನು ತುಂಗಭದ್ರಾಕ್ಕೆ ಕಟ್ಟಿದರೆ ಬಡಬಗ್ಗರಿಗೆ ಬಹಳ ಅನು ಕೂಲವಾಗುತ್ತದೆ. ಅವರು ನಮ್ಮ ಊರಿಗೆ ನೇರವಾಗಿ ಬರಬಹುದು ; ಸಮೀಪವಾಗುತ್ತದೆ. ಆಂಧ್ರಕ್ಕೆ ಬಂದು ಸುತ್ತಿಕೊಂಡು ಬರುವುದರಿಂದ ಬಹಳ ತ್ರಾಸಾಗುತ್ತಿದೆ. ಅದರಿಂದ ರಾಯ ಚೂರು ಜನರು ಇಲ್ಲಿಗೆ ಬರುವುದೂ ಅಸಾಧ್ಯವಾಗಿದೆ. ಅವರು ಬೆಂಗಳೂರಿಗೆ ಬಂದು ನೋಡುವುದ ಕ್ಕಾಗುವುದಿಲ್ಲ. ಆದ್ದರಿಂದ ನಾನು ಹೇಳಿದ ಸೇತುವೆಯನ್ನು ಮಾಡಿ, ನೇರವಾದ ರಸ್ತೆಯನ್ನು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂಜಕೆರೆ ರಸ್ತೆ ಮೇಲೆ ಬರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಒಂದು ರಸ್ತೆ ಆಗಬೇಕು. ಬೂಡದಿ ಪಾದದಿಂದ ರಾಯಚೂರು ರಸ್ತೆಯೂ ಆಗಬೇಕು. ಈ ಎರಡು ರೋಡುಗಳೂ ಆಗಬೇಕು ; ಮತ್ತು ಇದರಲ್ಲಿ ಒಂದು ರಸ್ತೆಯಲ್ಲಿ ಸರಕಾರಿ ಬಸ್ಸು ಓಡಾಡುವುದರಿಂದ ಅದನ್ನು ಟಾರ್ ಮಾಡಬೇಕು. ನಮ್ಮ ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಗಳು ಜನಗಳ ಬೇಡಿಕೆಗಳ ವಿಷಯದಲ್ಲಿ ಸಂಪೂರ್ಣ ಸಹಾನುಭೂತಿ ಉಳ್ಳವರು ; ಅವರು ನಮ್ಮ ಅಹವಾಲ್‌ಗಳನ್ನು ಈಡೇರಿಸಿ ಅನುಕೂಲಮಾಡಿಕೊಡುತ್ತಾರೆಂದು ಆಸೆ ಇಟ್ಟುಕೊಂಡಿದ್ದೇನೆ.

ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿ ಸುತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರತಕ್ಕ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಮೇಲೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ.

ಈ ಸಾಲಿನಲ್ಲಿ ಸುಮಾರು 30 ಕೋಟಿ 32 ಲಕ್ಷ ರೂಪಾಯಿಗಳ ಖರ್ಚಿಗೆ ಬೇಡಿಕೆಗಳಿದ್ದರೂ, ಗ್ರಾಮಾಂತರ ಪ್ರದೇಶಕ್ಕೆ ಯಾವ ಒಂದು ಮೊಬಲಗನ್ನೂ ಧಾರಾಳವಾಗಿ ಮಾಡದೆ ಇರುವುದಕ್ಕೆ ನಾನು ತುಂಬ ವಿಷಾದಿಸುತ್ತೇನೆ. ಜನೋಪಯೋಗಿ ಇಲಾಖೆಯಲ್ಲಾದರೂ ಇದಕ್ಕೆ ಅವಕಾಶವಿರ ಬೇಕೆಂದು ಹೇಳಿ ಸ್ವಲ್ಪ ಮನಸ್ಸನ್ನಿಟ್ಟು ನೋಡಿದೆ. ಈ ಭಾಗದಲ್ಲಿ ಸುಮಾರು 2 ಕೋಟಿ 22 ಲಕ್ಷ ರೂಪಾಯಿಗಳನ್ನು ಜಾಸ್ತಿ ಮಾಡಿದ್ದರೂ ಸಹ, ಗ್ರಾಮಾಂತರ ಪ್ರದೇಶಗಳಿಗೆ ಯಾವ ಹಣವನ್ನೂ ಒದಗಿಸಿಲ್ಲ. ಇದನ್ನು ನೋಡಿದರೆ, ಬಹುಶಃ ಯಾರು ಗಲಾಟೆ ಮನುಷ್ಯರಿರುತ್ತಾರೋ, ಯಾರು ಸಂಘಸಂಸ್ಥೆಗಳನ್ನು ಮಾಡಿಕೊಂಡು ಸರಕಾರದ ಮುಂದೆ ಬೇಡಿಕೆ ಇಡುತ್ತಾರೋ, ಅವರಿಗೆ ಮಾತ್ರ ಸರಕಾರದಿಂದ ಅನುಕೂಲಗಳು ದೊರೆಯುತ್ತವೆಂದು ಭಾಸವಾಗುತ್ತದೆ. ನಮ್ಮಲ್ಲಿ ನಾವೂ ಸಹ ಇನ್ನುಮುಂದೆ ಸೌಕರ್ಯಗಳು ಬೇಕಾದರೆ, ಒಂದು ಸಂಘಸಂಸ್ಥೆ ತಯಾರುಮಾಡಿ, ಪತ್ರಿಕೆಗಳಲ್ಲಿ ಪ್ರಕಟಣೆಗಳನ್ನು ಹೊರಡಿಸಿ, ಮಂತ್ರಿಗಳ ಗಮನಕ್ಕೆ ಬರುವಹಾಗೆ ಮಾಡಿದರೆ ಮಾತ್ರ ನಮಗೇ ನಾದರೂ ಪ್ರಯೋಜನವಾಗುತ್ತದೆ ಎಂಬ ಮನವರಿಕೆ ನಮಗೆಲ್ಲರಿಗೂ ಆಗುತ್ತಾ ಇದೆ.

(ಶ್ರೀ ಜಿ ರಾಮೇಗೌಡ)

5-00 P.M.

ಪಟ್ಟಣಗಳಲ್ಲಿ ಅನುಕೂಲಗಳು ಜಾಸ್ತಿಯಾಗಿರುವುದನ್ನು ನೋಡಿ ಹಳ್ಳಿಯವರೂ ಪಟ್ಟಣಕ್ಕೇ ಬಂದು ಕೂಲಿಯಾದರೂ ಮಾಡಿ ಜೀವನ ಮಾಡೋಣ, ಒಳ್ಳೆಯ ಗಾಳಿ, ಬೆಳಕು, ಕಾವೇರಿ ನದಿಯಿಂದ ನೀರೂ ಕೂಡ ಬರುತ್ತದೆ, ಹವ ಆರೋಗ್ಯಕರವಾಗಿರುತ್ತದೆ ಎಂಬ ಭಾವನೆ ದೇಶದಲ್ಲಿ ಬರುತ್ತಾ ಇದೆ. ಬೆಂಗಳೂರು ಪಟ್ಟಣದ ಸುತ್ತು ಮುತ್ತಲೂ ಇರತಕ್ಕ ಟಾರ್ ರಸ್ತೆಗಳನ್ನು ನೋಡಿದರೆ ಹಳ್ಳಿಗಳಲ್ಲಿರತಕ್ಕ ಮನೆಗಳಲ್ಲಿ ದೇವರ ಮನೆಯಲ್ಲೂ ಕೂಡ ಈ ರೀತಿ ಇರುವುದಿಲ್ಲ ಎಂದು ಹೇಳಬಯಸುತ್ತೇನೆ. ಮಂತ್ರಿಗಳು ಅದನ್ನು ಬಂದು ನೋಡಬೇಕು, ಹಳ್ಳಿಗಳ ಪರಿಸ್ಥಿತಿ ಏನಿದೆ ಎಂಬುದು ಅವರಿಗೆ ಆಗ ಗೊತ್ತಾಗುತ್ತದೆ. ವ್ಯವಸಾಯ ಚೆನ್ನಾಗಿ ನಡೆಯಬೇಕು ಅವರಿಗೆಲ್ಲಾ ಅನುಕೂಲ ಮಾಡಿಕೊಡುತ್ತೇವೆ ಎಂದು ಬರೀ ಬಾಯಲ್ಲಿ ಹೇಳಿದರೆ ಏನೂ ಪ್ರಯೋಜನವಿಲ್ಲ. ಎಂದು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಬಯಸುತ್ತೇನೆ. ಇದರಲ್ಲಿ ಕೋಟಿಗಟ್ಟಲೆ ರೂಪಾಯಿಗಳನ್ನು ಒದಗಿಸಿದ್ದೀರಿ. ಕಳೆದ ವರ್ಷಕ್ಕಿಂತ ಈ ವರ್ಷ ಮೂರು ಕೋಟಿ ಮೂವತ್ತೆರಡು ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಒದಗಿಸಿದ್ದೀರಿ. ಏಕೆ ಜಾಸ್ತಿಯಾಯಿತು ಎಂಬುದು ಗೊತ್ತಾಗುತ್ತಾ ಇಲ್ಲ. ನಮ್ಮ ತಾಲ್ಲೂಕಿನಲ್ಲಿ ಆರು ವರ್ಷಗಳಿಂದ ಏನು ಪರಿಸ್ಥಿತಿ ಇತ್ತೋ ರಸ್ತೆಗಳದು, ಅದೇ ಪರಿಸ್ಥಿತಿ ಇವತ್ತೂ ಕೂಡ ಇದೆ. ಉತ್ತಮವಾಗಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನಿಂದ, ತಾಲ್ಲೂಕು ಬೋರ್ಡಿಗೆ ವಹಿಸಿಕೊಟ್ಟ ರಸ್ತೆಗಳೂ ಕೂಡ ಅದೇ ಪರಿಸ್ಥಿತಿಯಲ್ಲಿ ಇವೆ. ಸರಕಾರಿ ಬಸ್ಸುಗಳು, ಖಾಸಗಿ ಬಸ್ಸುಗಳು ಎಲ್ಲವೂ ಕೂಡ ಅಲ್ಲಿ ಓಡಾಡುತ್ತಿವೆ. ಆದರೆ ಅದಕ್ಕೆ ಬರಬೇಕಾದ ಸೆಸ್ಸು ಕೊಡುವುದಿಲ್ಲ. ಇದಕ್ಕೆ ಏನು ಮಾಡಿದರೆ ಸರಿಹೋಗುತ್ತದೆ ಎಂಬುದನ್ನು ಆಲೋಚನೆ ಮಾಡುತ್ತಾ ಇದ್ದೇವೆ. ಬಹುಶಃ ಮಂತ್ರಿಗಳಿಗೆ ಒಂದು ನೋಟೀಸ್ ಕೊಟ್ಟು ನಮ್ಮ ಭಾಗದಲ್ಲಿ ಒಂದು ಬಸ್ಸೂ ಕೂಡ ಬರಕೂಡದು ಎಂದು ಪ್ರತಿಭಟನೆ ಮಾಡಿದರೆ ಅವರ ಮನಸ್ಸಿಗೆ ಇದು ಬರುತ್ತದೆಯೋ ಏನೋ ಎಂದು ಒಂದು ಅಭಿಪ್ರಾಯ ಮೂಡುತ್ತಾ ಇದೆ. ಆ ರೀತಿ ಚಳುವಳಿ ಹೂಡತಕ್ಕ ಮನೋಭಾವ ಜನರಲ್ಲಿ ಬರಬಾರದು. ಆದ್ದರಿಂದ ನಮ್ಮ ಈ ಒಂದು ತಾಲ್ಲೂಕಿನ ಕಷ್ಟವನ್ನು ಮಾನ್ಯ ಮಂತ್ರಿಗಳು ತಿಳಿದುಕೊಂಡು ಅದಕ್ಕೆ ತಕ್ಕಂತೆ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಬೇಕೆಂದು ಹೇಳಬಯಸುತ್ತೇನೆ.

ಪ್ರವಾಸಿ ಮಂದಿರಗಳಿಗೆ ಹಣ ಕೊಡಬೇಕೆಂದು ಅನೇಕ ಮಾನ್ಯ ಸದಸ್ಯರು ಕೇಳಿದ್ದಾರೆ ಬಡ್ಜೆಟ್ಟಿನಲ್ಲೂ ಕೂಡ ಅದು ಇದ್ದಂತೆ ಕಾಣುತ್ತದೆ. ಈ ತುರ್ತು ಪರಿಸ್ಥಿತಿಯಲ್ಲಿ ಪ್ರವಾಸಿ ಮಂದಿರಗಳು ಏಕೆ, ಮಂತ್ರಿಗಳಿಗೆ ಮನೆ ಕಟ್ಟುವುದು ಆದರೂ ಏಕೆ ಎಂದು ನಾನು ಪ್ರಶ್ನೆ ಮಾಡುತ್ತೇನೆ. ದೇಶದಲ್ಲಿ ಹಣ ಇಲ್ಲ, ರಸ್ತೆಗಳು ಆಗಬೇಕು, ನೀರಾವರಿ ಸೌಕರ್ಯಗಳನ್ನು ಮಾಡಲು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಬೇಕಾಗಿರುವಾಗ ಇದಕ್ಕೆ ಖಂಡಿತ ಖರ್ಚು ಮಾಡಕೂಡದು ಎಂದು ನಾನು ಹೇಳುತ್ತೇನೆ. ಒಂದು ವೇಳೆ ಆ ರೀತಿ ಮಾಡುವಾಗಲೂ ಕೂಡ ಒಂದು ಸೀಲಿಂಗ್ ಲಿಮಿಟ್ ಇರಬೇಕು, ಬೆಂಗಳೂರು ಜಿಲ್ಲೆಯಲ್ಲಾಗಲೀ ಯಾವ ಜಿಲ್ಲೆಯಲ್ಲಾಗಲೀ ಆಯಾಯಾ ಸ್ಥಳದ ಪದಾರ್ಥಗಳ ಬೆಲೆ, ಕೂಲಿಗೆ ಕೊಡಬೇಕಾದ ಖರ್ಚು ಇವುಗಳು ಏನು ಬರುತ್ತದೆ ಎಂಬುದನ್ನು ನೋಡಿಕೊಂಡು ಅದಕ್ಕೆ ಮೇಲೆ ಖರ್ಚು ಮಾಡಬಾರದು ಎಂದು ಹೇಳಿ ಒಂದು ಸೀಲಿಂಗ್ ಗೊತ್ತುಮಾಡಿ ಕೆಲಸ ಮಾಡಬೇಕಾದ್ದು ಬಹಳ ಅವಶ್ಯಕ. ಆ ರೀತಿ ಇದುವರೆಗೆ ಏಕೆ ಗೊತ್ತುಮಾಡಿಲ್ಲವೋ ಗೊತ್ತಿಲ್ಲ. ರಿಸರ್ಚ್ ಇನ್‌ಸ್ಟಿಟ್ಯೂಟ್ ಬೇಕಾದಷ್ಟು ಕೆಲಸಮಾಡಬಹುದು ಖರ್ಚು ಕಡಿಮೆ ಮಾಡತಕ್ಕ ಬಗ್ಗೆ ಸರಕಾರದವರು ಏನೂ ಕೆಲಸ ಮಾಡಿಲ್ಲ. ಕೇವಲ ಒಬ್ಬ ಸೂಪರ್‌ವೈಸರ್ ಒಂದು ಫೌಂಡೇಷನ್‌ಗೆ ಒಂದು ಎಸ್ಟಿಮೇಟ್ ಮಾಡುತ್ತಾನೆ. ಅದರ ಪ್ರಕಾರ ಎಸ್ಟಿಮೇಟ್ ಮಂಜೂರು ಆಗುತ್ತದೆ, ಹಣವನ್ನು ಅನ್ಯಾಯವಾಗಿ ಭೂಮಿಯ ಒಳಗೆ ಹಾಕಿ ಮುಚ್ಚುತ್ತಾ ಇದ್ದೇವೆ. ಆದ್ದರಿಂದ ಈ ಒಂದು ವ್ಯವಸ್ಥೆಯನ್ನು ಸರಕಾರದವರು ಮಾಡಬೇಕು. ಗೆಜಿಟೆಡ್ ಆಫೀಸರು ಆಗಲಿ ನಾನ್ ಗೆಜಿಟೆಡ್ ಆಫೀಸರು ಆಗಲಿ ಮಂತ್ರಿಗಳಾಗಲಿ ಇದನ್ನು ವಿಚಾರ ಮಾಡಬೇಕು. ಸೀಲಿಂಗ್ ಲಿಮಿಟ್ ಇಷ್ಟಕ್ಕೆ ಮೀರಿಹೋಗಬಾರದು ಎಂಬ ಒಂದು ಕಟ್ಟನ್ನು ಕಡ್ಡಾಯವಾಗಿ ಆಚರಣೆಗೆ ತರಬೇಕೆಂದು ನಾನು ಒಂದು ಸಲಹೆಯನ್ನು ಮಾಡುತ್ತಾ ಇದ್ದೇನೆ.

ಇನ್ನೊಂದು ವಿಷಯ ಕಳೆದ ವರ್ಷಗಳಿಂದ ಹೇಳುತ್ತಾ ಇದ್ದೇವೆ. ಸ್ಪೆಸಿಫಿಕೇಷನ್ ಕಡೆಗೆ ಗಮನ ಕೊಡುತ್ತಾ ಇಲ್ಲ. ನಾವು ಮಾತನಾಡಿದ್ದೆಲ್ಲಾ ಪುಸ್ತಕದೊಳಗೆ ಹೋಗುತ್ತದೆಯೇ ಹೊರತು ಮಂತ್ರಿಗಳ ಗಮನಕ್ಕೆ ಬರುತ್ತಾ ಇಲ್ಲ. ಇವತ್ತು ಮಾನ್ಯ ಮಂತ್ರಿಗಳನ್ನು ಯಾವ ಕೆಲಸ ಸ್ಪೆಸಿಫಿಕೇಷನ್ ಪ್ರಕಾರ ನಡೆಯುತ್ತಾ ಇದೆ ಎಂದು ಪ್ರಶ್ನೆ ಮಾಡುತ್ತೇನೆ. ಅವರು ಯಾವ ಕೆಲಸ ನೋಡಿ, ಪರೀಕ್ಷೆ ಮಾಡಿ ಸಮರ್ಪಕವಾಗಿದೆ ಎಂದು ತಿಳಿದುಕೊಂಡಿದ್ದಾರೆ ಎಂದು ಕೇಳುತ್ತೇನೆ. ಮಹಾರಾಣಿ ಕಾಲೇಜಿನ ಕಟ್ಟಡ ಬಿದ್ದುದಕ್ಕೆ ಕಾರಣವೇನು ? ಅದನ್ನು ಏಕೆ ತಿಳಿದುಕೊಳ್ಳಲಿಲ್ಲ, ಆ ಕಂಟ್ರಾಕ್ಟ್

ದಾರರನ್ನು ಏಕೆ ಕಾಂಟ್ರ್ಯಾಕ್ಟ್ ದಾರರ ಪಟ್ಟಿಯಿಂದ ತೆಗೆದುಹಾಕಲಿಲ್ಲ ; ಇದು ತಾನೇ ತಾನಾಗಿ ಹೇಳುತ್ತದೆ. ಅದರಲ್ಲಿ ಎಷ್ಟೊ ಲೋಪದೋಷ ಇತ್ತು. ಅದೇ ರೀತಿಯಲ್ಲಿ 1962ನೇ ಇಸವಿಯಲ್ಲಿ ಮಳೆ ಬಂದಾಗ ನಮ್ಮ ಹೈಸ್ಕೂಲು ಕಟ್ಟಡದಲ್ಲಿ ಒಂದು ಅಡಿ ನೀರು ನಿಂತಿತ್ತು, ಅಂತಹ ಕಟ್ಟಡವನ್ನು ಕಟ್ಟಿಸಿದ್ದಾರೆ ಬಂದು ನೋಡಿ ಎಂದರೆ ಯಾರೂ ಬಂದು ನೋಡಲಿಲ್ಲ ಪರೀಕ್ಷೆ ಮಾಡಲಿಲ್ಲ. ಇದಕ್ಕೆ ಏನು ಮಾಡಬೇಕೋ ಗೊತ್ತಾಗುತ್ತಾ ಇಲ್ಲ. ಇನ್ನೇನು ಮಳೆಗಾಲ ಬರುತ್ತಾ ಇದೆ. ಪುನಃ ಏನಾದರೂ ಹೈಸ್ಕೂಲು ಕಟ್ಟಡದಲ್ಲಿ ನೀರು ನಿಂತರೆ ಮಂತ್ರಿಗಳನ್ನೇ ಕರೆದುಕೊಂಡು ಹೋಗಿ ಅಲ್ಲಿ ಕುಳ್ಳಿರಿಸಬೇಕೆಂದು ನಾನು ಅಂದುಕೊಂಡಿದ್ದೇನೆ. ಅಲ್ಲಿಯವರೆಗೂ ಅವರಿಗೆ ಗೊತ್ತಾಗುವುದಿಲ್ಲ. ಅಂತಹ ದ್ರೋಹವನ್ನು ಯಾವ ಕಂಟ್ರ್ಯಾಕ್ಟರು ಮಾಡಿದ್ದಾರೆ ಅವರನ್ನು ಏಕೆ ಬಹಿರಂಗವಾಗಿ ವಿಚಾರಣೆ ಮಾಡಿ ಶಿಕ್ಷೆ ಮಾಡಬಾರದು ಎಂದು ತಮ್ಮನ್ನು ಪ್ರಶ್ನೆ ಮಾಡುತ್ತೇನೆ. ಇದಕ್ಕೆ ಮನಸ್ಸು ಮಾಡದೇ ಇರುವುದಕ್ಕೆ ಕಾರಣವೇನು ? ನಮ್ಮ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಸ್ಪೆಸಿಫಿಕೇಷನ್ ಇದೆ ಒಂದು ಸುಣ್ಣ ಎರಡು ಮರಳು ಹಾಕಿ ಗಾರೆ ಮಾಡಬೇಕೆಂದು ಇದೆ. ಯಾವ ಅಧಿಕಾರಿಯಾದರೂ ಕೂಡ ಇದನ್ನು ಸರಿಯಾಗಿ ನೋಡಿ ಸ್ಪೆಸಿಫಿಕೇಷನ್ ಪ್ರಕಾರ ಗಾರೆ ಹಾಕಿ ಕಟ್ಟಡ ಕಟ್ಟಿದ್ದಾರೆಯೇ ಎಂದು ಪರೀಕ್ಷೆ ಮಾಡಿದ್ದಾರೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಯಾರೂ ಕೂಡ ನೋಡುವುದಿಲ್ಲ, ಯಾರಾದರೂ ಹೇಳಿದರೂ ಸಹ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿರುತ್ತಾರೆ. ಇದನ್ನೆಲ್ಲಾ ಸರಕಾರ ನೋಡಿಕೊಂಡು ಸುಮ್ಮನೆ ಇರುವುದಕ್ಕೆ ಕಾರಣವೇನು ? ಇದರಲ್ಲಿ ಏನೋ ಮರ್ಮ ಇದೆ. ಈ ಮರ್ಮಕ್ಕೆ ಕಾರಣವೇನು ? ಎಂಬುದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ಕಂಡುಹಿಡಿಯಬೇಕೆಂದು ಹೇಳುತ್ತಾ ಇದ್ದೇನೆ. ಈ ಮಾನ್ಯ ಸಭೆಯಲ್ಲಿ ನಾವು ನಿಮಗೆ ಹೇಳುವುದು ಎಷ್ಟೋ ಅಷ್ಟು ಆಗುತ್ತಿದೆಯೇ ಹೊರತು ಬಡವರ ಹಣ ಅನಾವಶ್ಯಕವಾಗಿ ಒಬ್ಬರ ಕೈ ಸೇರಿ ಅವರಿಂದ ಏನೂ ಅನುಕೂಲ ಪಡೆಯುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಾ ಇರಬಹುದೋ ಏನೋ ಎಂದು ಕಾಣುತ್ತಾ ಇದೆ. ಅದು ಏನು ಒಂದು ಅವಕಾಶವಿದೆಯೋ ಅದಂತೂ ಇನ್ನೂ ನಮಗೆ ಅರ್ಥವಾಗುತ್ತಾ ಇಲ್ಲ. ಅದನ್ನು ಮಾನ್ಯ ಮಂತ್ರಿಗಳು ಮನಬಿಚ್ಚಿ ಹೇಳಬೇಕು.

ಕಳೆದ ಸಾರಿ ಬಡ್ಜೆಟ್ ಮೇಲೆ ಭಾಷಣ ಮಾಡಿದಾಗಲೂ ಕೂಡ ಇದನ್ನು ಹೇಳಿದೆ 56 ಕಡೆ ರಿವೆಟ್‌ಮೆಂಟ್ ಮಾಡಿರುವುದು ಬಿದ್ದುಹೋಗಿದೆ, ಇದು ಹಿಂದಿನ ಸಾರಿ ಪ್ರೊಸೀಡಿಂಗ್ಸ್ ತೆಗೆಸಿ ನೋಡಿ ಗೊತ್ತಾಗುತ್ತದೆ, ನಾಳೆಯಾದರೂ ಬನ್ನಿ ತೋರಿಸುತ್ತೇನೆ, ಹೋದ ಸಾರಿ ಕಟ್ಟಿದ ರಿವೆಟ್‌ಮೆಂಟ್ ರಸ್ತೆ ಪಕ್ಕದಲ್ಲಿ ಬಿದ್ದಿರುವುದನ್ನು ತೋರಿಸುತ್ತೇನೆ. ಯಾವ ಕಾರಣದಿಂದ ಆ ರೀತಿ ಆಯಿತು ಕೋಟ್ಯಾಂತರ ರೂಪಾಯಿ ಆ ರೀತಿ ಲುಕ್ಸಾನಾಗಿರುವುದನ್ನು ಸ್ಥಿರ ಪಡಿಸುವುದಕ್ಕೆ ಸಿದ್ಧವಾಗಿದ್ದೇನೆ. ಅದನ್ನು ಏಕೆ ಇದುವರೆಗೂ ರಿಪೇರಿ ಮಾಡಿಲ್ಲ ಎಂದು ನಾನು ಕೇಳುತ್ತೇನೆ. ಈ ರೀತಿ ಹಣ ಪೋಲಾಗುವುದನ್ನು ತಪ್ಪಿಸಬೇಕು. ಈಗ ಬೆಂಗಳೂರಿನಲ್ಲಿ ಎಷ್ಟೋ ಕಡೆ ಕಟ್ಟಡಗಳನ್ನು ನೋಡುತ್ತಾ ಇದ್ದೇನೆ. ಅದರಲ್ಲೂ ಕೂಡ ಲೋಪದೋಷಗಳು ಇವೆ, ಅಧಿಕಾರಿಗಳು ಹೋಗುತ್ತಾ ಇರುತ್ತಾರೆ, ಇಷ್ಟು ಸಿಮೆಂಟ್ ಹಾಕಬೇಕೆಂದು ಇದ್ದರೆ ಅಷ್ಟು ಹಾಕುತ್ತಾನೆಯೇ ಇಲ್ಲವೇ ಎಂಬುದನ್ನು ಯಾರೂ ಕೂಡ ನೋಡುವುದೇ ಇಲ್ಲ. ನಾನು ಮಾನ್ಯ ಮಂತ್ರಿಗಳನ್ನು ಕರೆಸಿಕೊಂಡು ಈ ಸ್ಪೆಸಿಫಿಕೇಷನ್ ಬಗ್ಗೆ ಅವರಿಗೆ ಏನಾದರೂ ಗೊತ್ತಿದೆಯೋ ಇಲ್ಲವೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಶ್ನೆ ಹಾಕಬೇಕೆಂದು ಇದ್ದೇನೆ. ಆರ್.ಸಿ.ಸಿ. ಎಂದರೆ ಏನು ಬ್ರಿಕ್ ಇನ್ ಮಾರ್ಟರ್ ಎಂದರೆ ಏನು ಎಂಬುದನ್ನು ಅವರು ತಿಳಿದುಕೊಂಡಿದ್ದಾರೆಯೇ ಎಂಬುದನ್ನು ನಾನು ತಿಳಿದುಕೊಳ್ಳಬೇಕಾಗಿದೆ. ಅದಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. 31 ಕೋಟಿ ರೂಪಾಯಿಗಳ ವ್ಯವಹಾರವನ್ನು ನಡೆಸುವಾಗ ಸ್ಪೆಸಿಫಿಕೇಷನ್ ಎಂದರೆ ಏನು ಎಂಬುದು ಗೊತ್ತಿಲ್ಲದೇ ಇದ್ದರೆ ಯಾವರೀತಿ ಕೆಲಸ ಮಾಡುವುದಕ್ಕೆ ಆಗುತ್ತದೆ ? ಕಣ್ಣು ಮುಚ್ಚಿಕೊಂಡು ಅಧಿಕಾರಿಗಳೂ ಕೆಲಸ ಮಾಡುತ್ತಾ ಹೋದರೆ, ಮಂತ್ರಿಗಳೂ ಕೂಡ ಅದನ್ನು ಮಾಡದೇ ಹೋದರೆ ಬಹಳ ಕಷ್ಟಕ್ಕೆ ಬರುತ್ತದೆ. ಶರಾವತಿಯಲ್ಲಿ ಕಟ್ಟಿರುವ ಕಟ್ಟಡಗಳೂ ಸಹ ಬಹಳ ವರ್ಷ ಇರುವುದಿಲ್ಲ. ಎಷ್ಟು ವರ್ಷ ಇರಬೇಕೋ ಅದಕ್ಕಿಂತಲೂ ಮೊದಲೇ ಬಿದ್ದುಹೋಗಬಹುದು ಎಂದು ಹೇಳುತ್ತಾರೆ. ಯಾವಾಗ ಸರಿಯಾದ ಸ್ಪೆಸಿಫಿಕೇಷನ್ ಪ್ರಕಾರ ಕೆಲಸ ಮಾಡಿಲ್ಲವೋ ಆಗ ಅದು ಭಗವದ್ಗೀತೆ ಇದ್ದಹಾಗೆ—ಎಷ್ಟು ವರ್ಷ ಬಾಳಬೇಕು ಎಂದು ಇರುತ್ತದೆಯೋ ಅಷ್ಟು ವರ್ಷ ಬಾಳುವುದಿಲ್ಲ. ಈ ರೀತಿಯೆಲ್ಲಾ ಆಗುವುದಕ್ಕೆ ಅಧಿಕಾರಿಗಳಲ್ಲೂ, ಕಂಟ್ರ್ಯಾಕ್ಟ್‌ದಾರರಲ್ಲೂ ಏನೋ ಒಂದು ಸಂಬಂಧ ಅಥವಾ ಒಂದು ಮರ್ಮ ಇರಬೇಕು, ಅದೇನು ಎಂಬುದನ್ನು ನಾನು ಈ ದಿವಸ ತಮ್ಮನ್ನು ಪ್ರಶ್ನೆ ಮಾಡುತ್ತೇನೆ.

ಇನ್ನು ರಸ್ತೆಗಳ ವಿಚಾರ ಬಹಳವಾಗಿ ಒತ್ತಿ ಹೇಳಬೇಕಾಗಿದೆ. ಬೆಂಗಳೂರು ಜಿಲ್ಲೆಯ ಆರು ವರ್ಷಗಳ ಅಂಕಿಅಂಶ ಕೊಟ್ಟಿದ್ದೀರಿ, ಅದು ಸಾಲದು. ಇದು ರಾಜಧಾನಿ. ದೊಡ್ಡ ದೊಡ್ಡವರು ಬಂದು ಹೋಗುತ್ತಾ ಇರುತ್ತಾರೆ ಮತ್ತು ಹೆಚ್ಚು ಹೆಚ್ಚು ಟ್ರಾಫಿಕ್ ಇರುತ್ತದೆ. ಇಂತಹ ಪರಿಸ್ಥಿತಿಯಲ್ಲಿ

(ಶ್ರೀ ಜಿ ರಾಮೇಗೌಡ)

6 ವರ್ಷಗಳಲ್ಲಿ 12 ಮೈಲಿ ಮಾತ್ರ ಕಾನ್‌ಕ್ರೀಟ್ ಮಾಡಿರುವುದು ಏನೇನೂ ಸಾಲದು. ನನ್ನ ಒಂದು ತಾಲ್ಲೂಕಿನಲ್ಲಿ 35 ಮೈಲಿ ಮಣ್ಣು ರಸ್ತೆ ಇದೆ. ಶ್ರೀ ಆಲೂರು ಹನುಮಂತಪ್ಪನವರು ನಮ್ಮ ತಾಲ್ಲೂಕಿಗೆ ಬರಬೇಕಾಗಿದ್ದರೆ ಆ 14 ಮೈಲಿ ಮಣ್ಣುರಸ್ತೆಯಲ್ಲಿ ತಮ್ಮ ಕಾರಿನ ಗ್ಲಾಸ್‌ನ್ನು ಮುಚ್ಚಿಕೊಂಡು ಬರುತ್ತಾರೆ ಹೋಗುತ್ತಾರೆ. ಏನಪ್ಪಾ ಈ ಧೂಳು ಅಂದುಕೊಂಡು ಹೋಗುತ್ತಾರೆ ಅಷ್ಟೇ ಹೊರತು ಅವರಿಂದ ಏನೂ ಮಾಡುವುದಕ್ಕೆ ಸಾಧ್ಯವಾಗಿಲ್ಲ. 35 ಮೈಲಿ ಮಣ್ಣು ರಸ್ತೆ ನಮ್ಮ ಒಂದು ತಾಲ್ಲೂಕಿನಲ್ಲಿ ಇರಬೇಕಾದರೆ ನಮ್ಮ ರಸ್ತೆಗಳ ಅಭಿವೃದ್ಧಿ ಕಾರ್ಯ ಎಷ್ಟುಮಟ್ಟಿಗೆ ಆಗಿದೆ ಎಂಬುದನ್ನು ಮಾನ್ಯ ಮಂತ್ರಿಗಳೇ ಹೇಳಬೇಕು. ಒಂದೊಂದು ಸಲ 15 ದಿವಸಗಳ ಕಾಲಾವಕಾಶ ಮಾತ್ರ ಇರುವಾಗ ಗ್ರ್ಯಾಂಟನ್ನು ಕೊಡುತ್ತಾರೆ, ಆದರೆ ಆ ಅವಧಿಯೊಳಗೆ ಕಂಟ್ರಾಕ್ಟರಿಗೆ ವಹಿಸಿ ಕೆಲಸ ಮಾಡಿಸುವುದಕ್ಕಾಗುವುದಿಲ್ಲ, ಅದರಿಂದ ಪ್ರಯೋಜನವಾಗುವುದಿಲ್ಲ. ಹಣ ಉಳಿದುಹೋಗುತ್ತದೆ. ಖರ್ಚುಮಾಡಲು ಸಾಕಾದಷ್ಟು ಅವಕಾಶವಿರುವಂತೆ ಸಕಾಲದಲ್ಲಿ ಕೊಟ್ಟರೆ ಅನುಕೂಲವಾಗುತ್ತದೆ. ಈ ಪ್ರಕಾರ ಮಾಡಲು ಸರ್ಕಾರ ಗಮನ ಕೊಡಬೇಕು.

ನಮ್ಮ ದೇಶವಲ್ಲಿ ರಸ್ತೆಗಳು ಬಹಳ ಮುಖ್ಯವಾದುವು. ರಸ್ತೆ ಪಕ್ಕದಲ್ಲಿದ್ದ ಸಾಲು ಮರಗಳು ಹಿಂದೆ ರೆವೆನ್ಯೂ ಇಲಾಖೆಗೆ ಸೇರಿದ್ದುವು. ಈಗ ಐದು ವರ್ಷಗಳಿಂದ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿವೆ. ಹಿಂದೆ ಪಕ್ಕದ ಜಮೀನಿನವರು ಮರಗಳ ಫಲ ತೆಗೆದುಕೊಂಡು ಅವು ಒಣಗಿಹೋದಾಗ ಹೊಸ ಮರಗಳನ್ನು ಬೆಳೆಸುತ್ತಿದ್ದರು. ಆದರೆ ಈಗ ಮಾಡಿರುವ ವ್ಯವಸ್ಥೆ ಪ್ರಕಾರ ಪ್ರಯೋಜನ ಸಾಕಷ್ಟು ಆಗುತ್ತಿಲ್ಲ. ಸಹಸ್ರಾರು ಮರಗಳು ಈಗ ಕಳವಾಗಿ ಹೋಗಿವೆ, ಅದನ್ನು ಯಾರೂ ನೋಡುತ್ತಿಲ್ಲ. ಕೋಟಿಗಟ್ಟಲೆ ರೆಂಬೆಗಳು ಹೋಗಿವೆ, ಯಾರೂ ಸರಿಯಾಗಿ ಗಮನ ಕೊಡುತ್ತಿಲ್ಲ. ಹೋಗಿರುವ ಮರಗಳ ಜಾಗದಲ್ಲಿ ಒಂದು ಸಸಿಯನ್ನೂ ಸಹ ನೆಟ್ಟಿಲ್ಲ. ಸಹಸ್ರಾರು ಹುಣಿಸೆಮರಗಳಿಂದ ಆದಾಯ ಬರುತ್ತಿತ್ತು. ಈಗ ಆ ಮರಗಳ ಫಸಲನ್ನು ಹರಾಜುಮಾಡುವ ಅಧಿಕಾರ ಫಾರೆಸ್ಟ್ ಇಲಾಖೆಗೆ ವಹಿಸಿರುವುದರಿಂದ ಆ ಇಲಾಖೆ ಸರಿಯಾಗಿ ಗಮನ ಕೊಡದಿರುವುದರಿಂದ ಸರ್ಕಾರಕ್ಕೆ ಬರುತ್ತಿದ್ದ ವರಮಾನ ತಪ್ಪಿಹೋಗಿದೆ. ರೆವೆನ್ಯೂ ಇಲಾಖೆ, ಫಸಲನ್ನು ಹರಾಜುಮಾಡಿ ಆದಾಯ ಪಡೆಯುತ್ತಿದ್ದಂತೆ ಪಡೆಯಲು ಫಾರೆಸ್ಟ್ ಇಲಾಖೆಗೆ ಸಾಧ್ಯವಿಲ್ಲವಾಗಿದೆ. ಹೀಗಾಗಿ ಐದು ವರ್ಷಗಳಿಂದ ಸರ್ಕಾರಕ್ಕೇನೂ ಪ್ರಯೋಜನವಾಗದೆ ನಷ್ಟವಾಗಿದೆ. ಆದುದರಿಂದ ಮೊದಲಿದ್ದಹಾಗೇ ವ್ಯವಸ್ಥೆ ಮಾಡಿ ಸಾಲುಮರಗಳು ಹಾಳಾಗದಂತೆಯೂ ಮತ್ತು ಸರ್ಕಾರಕ್ಕೆ ಆದಾಯ ಬರುವಂತೆಯೂ ಮಾಡಬೇಕೆಂದು ಸೂಚಿಸುತ್ತೇನೆ.

ತಾಲ್ಲೂಕುಗಳಲ್ಲಿ ಅಥವಾ ಜಿಲ್ಲೆಗಳಲ್ಲಿ 20 ಅಡಿಗಳಿಗೆ ಮೇಲ್ಪಟ್ಟಿರುವ ಮೋರಿಗಳನ್ನು ಸರ್ಕಾರದವರೇ ಮಾಡಬೇಕೆಂದು ಕಾನೂನಿದ. ಅಧಿಕಾರಿಗಳು ತಮಗೆ ಬೇಕಾದವರಿಗೆ ಮಾತ್ರ ಮೋರಿಯ ಕೆಲಸವನ್ನು ಕೊಡುತ್ತಾರೆ, ಯೋಜನೆ ಪ್ರಕಾರ ಕೆಲಸಮಾಡುವುದಿಲ್ಲ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಮಧುರೆ ಹೋಬಳಿ, ಕೋಡಿಹಳ್ಳಿ ಹಳ್ಳಕ್ಕೆ ಮಂಜೂರಾಗಿದ್ದರೂ ಸಹ ಮೋರಿ ನಿಲ್ಲಿಸಿದ್ದಾರೆ. ಇತರ ಕಡೆಗಳಿಗಾದರೆ ಹಣವಿರುತ್ತದ, ಅಲ್ಲಿಗೆ ಮಾತ್ರ ಇಲ್ಲವೆಂದರೆ ಅದರ ಅರ್ಥವೇನು. ಶ್ರೀ ಆಲೂರು ಹನುಮಂತಪ್ಪನವರು ಹೇಳಬಹುದು ಅಂದಾಜು ಮಂಜೂರಾಗಿರುವ ಕೆಲಸ ಮಾಡಿಸಬೇಕು ಎಂದು. ನಮ್ಮ ತಾಲ್ಲೂಕಿನ ಕೆಲಸವನ್ನೂ ಮಂಜೂರುಮಾಡಿ ಏಕೆ ಮಾಡಿಸಬಾರದು ಎಂದು ನಾನು ಕೇಳುತ್ತೇನೆ. ಹಿಂದೆ 20 ಸಾವಿರ ರೂಪಾಯಿಗಳವರೆಗಿನ ಕೆಲಸವನ್ನು ಎಗ್ಜಿಕ್ಯುಟಿವ್ ಎಂಜಿನಿಯರೇ ಮಂಜೂರು ಮಾಡುತ್ತಿದ್ದರು, ಅಸಿಸ್ಟೆಂಟ್ ಎಂಜಿನಿಯರು ಮೂರು ಸಾವಿರ ರೂಪಾಯಿಗಳವರೆಗಿನ ಕೆಲಸವನ್ನು ಮಂಜೂರು ಮಾಡಲು ಅವಕಾಶವಿತ್ತು. ಈಗ ಸರ್ಕ್ಯುಲರ್ ಹೊರಡಿಸಿ ಅದಕ್ಕೆ ಅವಕಾಶವಿಲ್ಲದಂತೆ ಮಾಡಿದ್ದಾರೆ. ಅವರಿಗೆ ಅದನ್ನು ವಹಿಸುವುದು ಸರಿಯಲ್ಲ ಎಂದು ಭಾವಿಸಿರಬಹುದು. ಆದರೆ ಹಣ ಒದಗಿಸುವಾಗ ಸಹ ಸರಿಯಾಗಿ ಎಲ್ಲ ಕಡೆಗೂ ಏಕೆ ಒದಗಿಸುವುದಿಲ್ಲ? ಏಕೆ ಅವರಿಗಿದ್ದ ಅಧಿಕಾರ ವಾಪಸ್ಸು ಪಡೆದಿರಿ! ಈ ರೀತಿ ಮಾಡಿದ್ದರಿಂದ ಯಾವ ಕೆಲಸವನ್ನೂ ಎಗ್ಜಿಕ್ಯುಟಿವ್ ಎಂಜಿನಿಯರು ಮಂಜೂರುಮಾಡುವುದಿಲ್ಲ. ಅಸಿಸ್ಟೆಂಟ್ ಎಂಜಿನಿಯರಿಗೆ ಅವಕಾಶವಿಲ್ಲ. ಯಾರು ಪ್ರಭಾವ ಬೀರುವರೋ, ಯಾರು ಕಾಂಗ್ರೆಸ್ಸಿನ ಉನ್ನತ ಸ್ಥಾನಗಳಲ್ಲಿದ್ದಾರೋ ಅವರಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ಮಾತ್ರ ಮಾಡಿಸುತ್ತಿದ್ದಾರೆ. ಇತರ ತಾಲ್ಲೂಕುಗಳನ್ನು ಉಪೇಕ್ಷೆಮಾಡಿ ಹೀಗೆ ಮಾಡುವುದು ಸರಿಯೇ? ಏಕೆ ನಮ್ಮ ತಾಲ್ಲೂಕಿನಲ್ಲಿ ಕೆಲವು ಭಾಗಗಳಿಗೆ ತೊಂದರೆ ಮಾಡಿರುವುದು? ಈ ಮನೋಭಾವನೆ ಇರಬಾರದು. ಏನೇ ಮಾಡಿದರೂ ಕೂಡ ಇಡೀ ದೇಶಕ್ಕೇ ಅನ್ವಯವಾಗುವ ರೀತಿ ಇರಬೇಕು, ಎಲ್ಲರಿಗೂ ಉಪಕಾರವಾಗುವಂತೆ ಕೆಲಸ ಹಂಚಬೇಕು. ಹಾಗಿಲ್ಲದೆ ಒಂದು ತಾಲ್ಲೂಕಿಗೆ ನ್ಯಾಯ ಇನ್ನೊಂದು ತಾಲ್ಲೂಕಿಗೆ ಅನ್ಯಾಯವಾಗುವಂತೆ ನಡೆದುಕೊಳ್ಳಬಾರದೆಂದು ತಿಳಿಸಲಿಚ್ಛಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಮೋರಿಗಳಿಗಾಗಿ ಖರ್ಚುಮಾಡುವ

ಹಣದ ವ್ಯವಸ್ಥೆ ಸರಿಯಾಗಿಲ್ಲ. ಪ್ರತಿಯೊಂದು ಜಿಲ್ಲೆಯಲ್ಲಿ ಹ್ಯೂಂ ಪೈಪ್ ಉಪಯೋಗಿಸಬೇಕು. ಪ್ರತಿ ಜಿಲ್ಲೆಗೊಂದರಂತೆ ಹ್ಯೂಂ ಪೈಪ್ ಫ್ಯಾಕ್ಟರಿಗಳು ಆಗಬೇಕು. ಅದರಿಂದ ಹಣ ಉಳಿತಾಯ ವಾಗುತ್ತದೆ. ಸರ್ಕಾರ ಉಸ್ತುವಾರಿ ಮಾಡಿ, ಲಾರಿಗಳಿಗೆ ಖರ್ಚಾಗುತ್ತಿರುವುದನ್ನು ಕಡಿಮೆ ಮಾಡಬೇಕು. ಈ ಸಾಲಿಗೆ ಒದಗಿಸಿರುವ ಹಣದಲ್ಲಿ ಜನಾರೋಗ್ಯಕ್ಕೆ ಸಂಬಂಧಪಟ್ಟ ಕೆಲಸಗಳಿಗೆ ಹೆಚ್ಚು ಹಣ ಕೊಡಬೇಕು. ಒಟ್ಟಿನಲ್ಲಿ ಹಣ ಹಂಚಿರುವುದು ಸರಿಯಾಗಿಲ್ಲ, ಸಾರಿಗೆ ಸಂಪರ್ಕ ಮತ್ತು ಜನಾರೋಗ್ಯದ ಬಾಬುಗಳಿಗೆ ಹೆಚ್ಚು ಹಣ ಕೊಟ್ಟು ಗ್ರಾಮಾಂತರಗಳಿಗೆ ಸ್ವಲ ಉಪಯೋಗ ವಾಗುವ ಹಾಗೆ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೆಬಿಹಾಳ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರುವ ಸಾರ್ವಜನಿಕ ಕಾಮಗಾರಿಗಳು ಮತ್ತು ಇತರ ಬೇಡಿಕೆಗಳಿಗೆ ಒಪ್ಪಿಗೆ ಕೊಡುತ್ತೇನೆ. ಈಗಿನ ಆಧುನಿಕ ಜಗತ್ತಿನಲ್ಲಿ ನಿಜವಾದ ಶಿಲ್ಪಿ ಎಂದರೆ ಎಂಜಿನಿಯರು, ಅವರ ಶಿಲ್ಪಕಲೆ ಬಹಳ ದಿವಸ ಬಾಳಬೇಕಾದರೆ ಒಂದು ತ್ಯಾಗಬುದ್ಧಿಯಿರಬೇಕು. ಹಿಂದೆ ಜಕಣಾಚಾರಿಯವರ ಕಾಲಕ್ಕೆ ಕಟ್ಟಿರುವ ಕಟ್ಟಡ ಇಲ್ಲಿಯವರೆಗೂ ಇದೆ. ಆದರೆ ಈಗ ನಮ್ಮವರು ಕಟ್ಟಿರುವುದು ಸರ್ಟಿಫಿಕೇಟ್ ಕೊಟ್ಟ 3-4 ದಿವಸಗಳಿಗೇ ಬಿದ್ದುಹೋಗಿರುವುದನ್ನು ಈ ಸಭೆಯ ಸದಸ್ಯರು ಗಮನಕ್ಕೆ ತಂದರು ಮತ್ತು ಇರುವ ಕುಂದುಕೊರತೆಗಳನ್ನು ಕೂಡ ಹೇಳಿದರು. ಈಗಿನ ಜಗತ್ತಿನಲ್ಲಿ ಕಮ್ಯೂನಿಕೇಷನ್ ಅವಶ್ಯಕತೆ ಹೆಚ್ಚಾಗುತ್ತಾ ಇದೆ. ಇಂದು ನಮ್ಮ ರಾಜ್ಯದಲ್ಲಿ ಸಾಕಾದಷ್ಟು ಖನಿಜಸಂಪತ್ತಿದೆ. ಅದರಂತೆ ಅರಣ್ಯಸಂಪತ್ತೂ ಇದೆ. ಇವುಗಳ ಬಳಕೆ ಸರಿಯಾಗಿ ಆಗುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ನಮ್ಮ ರಸ್ತೆಗಳು ಸರಿಯಾಗಿಲ್ಲದಿರುವುದು. ಈಗ ನಮ್ಮ ರಾಜ್ಯದಲ್ಲಿ ಕೆಲವು ಕಡೆ 200 ರಿಂದ 250 ಇಂಚುಗಳವರೆಗೆ ಮಳೆಯಾಗುತ್ತಿದ್ದರೆ ಇನ್ನು ಕೆಲವು ಕಡೆ ಕೇವಲ 10-13 ಇಂಚು ಮಳೆ ಆಗುತ್ತಿದೆ. ಇವೆರಡನ್ನೂ ಒಂದೇ ರೀತಿ ನೋಡುವುದಕ್ಕಾಗುವುದಿಲ್ಲ. ಮಲೆನಾಡಿನ ಕೆಲವು ಸದಸ್ಯರು ಮಲೆನಾಡು ಅಭಿವೃದ್ಧಿ ಸರಿಯಾಗಿ ಆಗಿಲ್ಲ ಎಂದು ಹೇಳಿದರು ಇಡೀ ರಾಜ್ಯ ಅಭಿವೃದ್ಧಿ ಯಾಗಬೇಕಾಗಿರುವಾಗ ಒಂದು ಭಾಗಕ್ಕೆ ಹೆಚ್ಚು ಸೌಕರ್ಯ ಮಾಡಿಕೊಡಿ ಎಂದು ಹೇಳುವುದು, ಒಂದು ಕಡೆ ಹೆಚ್ಚು ಕೆಲಸವಾಗಿದೆ ಎಂದು ಟೀಕಿಸುವುದು ಸಮಂಜಸವಲ್ಲ. ರಸ್ತೆಗಳ ಅಭಿವೃದ್ಧಿ, ಅಪೂರ್ಣವಾಗಿರುವ ರಸ್ತೆಗಳು ಮುಂತಾದ್ದನ್ನು ಕೂಲಂಕಷವಾಗಿ ವಿಚಾರಮಾಡಿ ನಮ್ಮ ರಾಜ್ಯದಲ್ಲಿ ರಸ್ತೆಗಳೆಷ್ಟಿವೆಯೋ ಅವಕ್ಕನುಗುಣವಾಗಿ ಪಂಚವಾರ್ಷಿಕ ಯೋಜನೆಯಲ್ಲಿ ಹಣ ಒದಗಿಸಿಲ್ಲ. ಇದರ ಮುಖ್ಯ ಜವಾಬ್ದಾರಿ ನಮ್ಮ ಸರ್ಕಾರದ್ದಿರಬಹುದು ಅಥವಾ ಕೇಂದ್ರಸರ್ಕಾರದ್ದಿರಬಹುದು. ಮೂರನೆಯ ಯೋಜನೆಯ ಸಲುವಾಗಿ ರಾಜ್ಯಸರ್ಕಾರ 3,046 ಲಕ್ಷ ರೂಪಾಯಿಗಳ ಒಂದು ಯೋಜನೆ ಮಾಡಿ, ಕೇಂದ್ರಸರ್ಕಾರವನ್ನು ಕೇಳಿದ್ದಾರೆ. ಆದರೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರದಿಂದ ದೊರೆತ ಹಣ 9 ಕೋಟಿ ರೂಪಾಯಿಗಳು ಮಾತ್ರ. ಅದೆಲ್ಲವೂ ಕೂಡ 1961-62 ರಲ್ಲಿ ಅಥವಾ 63 ರಲ್ಲಿ ಖರ್ಚಾಗಿದೆ. ಅದು ಕೂಡ ಸರಿಯಾಗಿ ವಿನಿಯೋಗವಾಗಿಲ್ಲ. ಒಂದು ಕಡೆಗೆ ಹೆಚ್ಚು ಒಂದು ಕಡೆಗೆ ಕಡಿಮೆ ಹಣ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ ಅದನ್ನು ಸ್ವಲ್ಪಮಟ್ಟಿಗೆ ಒಪ್ಪಬಹುದು. ಆದರೆ ಮುಕ್ಕಣ್ಣಪ್ಪನವರು ಹೇಳಿದಹಾಗೆ ಹಳೆಯ ಮೈಸೂರಿನಲ್ಲಿ ಮಾಡಿರುವ ಕೆಲಸ ಸಾಲದು, ಹಳೇ ಮೈಸೂರನ್ನು ಮರೆತಿದ್ದಾರೆ, ಹೊಸ ಮೈಸೂರಿನಲ್ಲಿ ಹೆಚ್ಚಾಗಿ ಮಾಡಿದ್ದಾರೆ ಎಂಬುದಕ್ಕೆ ಅಂಕಿ ಅಂಶ ನೋಡಿದ್ದರೆ ಅವರು ಹಾಗೆ ಹೇಳುವುದಕ್ಕೆ ಧೈರ್ಯ ಮಾಡುತ್ತಿರಲಿಲ್ಲ. ಈಗ ನಮ್ಮ ರಾಜ್ಯದಲ್ಲಿ ಪ್ರತಿ ನೂರು ಚದರ ಮೈಲಿಗೆ 40 ಮೈಲಿ ರಸ್ತೆ ಇದೆ; ತುಮಕೂರು ಜಿಲ್ಲೆಯಲ್ಲಿ 28 ಇದೆ, ಮಂಡ್ಯ ಜಿಲ್ಲೆಯಲ್ಲಿ 129 ಮೈಲಿ ರೋಡು ಇದೆ. ಉಳಿದ ಹೊಸ ಮೈಸೂರು ಜಿಲ್ಲೆಗಳ ಜೊತೆಗೆ ಹಳೆಯ ಮೈಸೂರನ್ನು ತುಲನೆ ಮಾಡಿದರೆ ಅಲ್ಲಿ ರೋಡುಗಳ ಸಲುವಾಗಿ ಹಳೇ ಮೈಸೂರಲ್ಲಿ ಖರ್ಚು ಹೆಚ್ಚಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇನ್ನೊಂದು ಮಾತು ಈ ಸಭೆಗೆ ಅರಿಕೆ ಮಾಡುವುದು ಈಗ ನಾವು ಪ್ರಜಾಸತ್ತಾತ್ಮಕವಾದ ರಾಜ್ಯದಲ್ಲಿರುವಾಗ ಸಮತಾವಾದಿ ಸಮಾಜದ ಗುರಿ ಇಟ್ಟುಕೊಂಡಾಗ ಶ್ರೀಮಂತರಲ್ಲಿ ಆಗಲೀ ಬಡವರಲ್ಲಾಗಲೀ ಯಾವ ಭೇದಭಾವವನ್ನೂ ಎಣಿಸದೇ ನೈಸರ್ಗಿಕ ಸಂಪನ್ಮೂಲಗಳನ್ನು ಸಮಾನವಾಗಿ ಹಂಚಿಕೆಯಾಗುವಂತಹ ಏರ್ಪಾಡು ಮಾಡಬೇಕೆಂದು ಇರುವಾಗ ಅದರಂತೆ ಶ್ರೀಮಂತರಿಂದ ಹೆಚ್ಚಿನ ತೆರಿಗೆ ಹಣದ ವಸೂಲಿ ಮಾಡಿ ಬಡವರ, ಹಿಂದುಳಿದವರ ಏಳ್ಗೆಗಾಗಿ ವಿನಿಯೋಗಿಸುವಂತೆ, ಈಗ ಪ್ರಗತಿ ಹೊಂದಿರುವ ಪ್ರದೇಶಗಳ ಜೊತೆಗೆ ಹಿಂದುಳಿದ ಪ್ರದೇಶಗಳನ್ನೂ ಸಹ ಕರೆದೊಯ್ಯುವ ಅನುಕೂಲವಾಗುವಂತೆ ಸರಕಾರ ಹೆಚ್ಚಿನ ಹಣ ವ್ಯಯ ಮಾಡುವುದು ಯುಕ್ತವಾಗಿರುತ್ತದೆ. ನಿಜವಾಗಿ ರಾಜ್ಯದ ಹಿತದೃಷ್ಟಿ ಯಿಂದ ಹಿಂದುಳಿದಿರುವ ಇತರ ಭಾಗಗಳನ್ನು ಮುಂದುವರೆದ ಇತರ ಭಾಗದಂತೆ ಮಾಡಲು ಮಾಡಿದ್ದಾರೆನ್ನುವುದನ್ನು ಮಾನ್ಯ ಸದಸ್ಯರೆಲ್ಲರೂ ತಿಳಿದುಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ರೈಲ್ವೆ ಸೌಕರ್ಯಕೂಡ ಹೆಚ್ಚಾಗಿ ಇಲ್ಲ. ಇಲ್ಲಿಯವರೆಗೆ ರೈಲ್ವೆಯ ಪ್ರಗತಿ ನಮ್ಮ ರಾಜ್ಯದಲ್ಲಿ ಏನೂ ಸಾಧಿಸಿಲ್ಲ, ಈಗ ಸ್ವಲ್ಪ ಸಾಧಿಸುವ ಭರವಸೆ ಕಾಣುತ್ತದೆ. ಆದರೂ ಉಳಿದ ರಾಜ್ಯಗಳಲ್ಲಿದ್ದಂತೆ

(ಶ್ರೀ ಎಸ್.ಎಂ. ಗುರೆಡ್ಡಿ

ನಮ್ಮ ರಾಜ್ಯದಲ್ಲಿ ಬ್ರಾಡ್‌ಗೇಜ್ ಲೈನು ಬಹಳ ಕಡಿಮೆ ಇವೆ. ನಮ್ಮ ರಾಜ್ಯದ ಕಮ್ಯೂನಿಕೇಷನ್ ಕೇವಲ ರೋಡನ್ನೇ ಅವಲಂಬಿಸಿದೆ. ಕಾರಣ ಪಿ. ಡಬ್ಲ್ಯು. ಡಿ. ಇಲಾಖೆಯವರು ಕಮ್ಯೂನಿಕೇಷನ್ನುಗಳನ್ನು ಅಭಿವೃದ್ಧಿ ಮಾಡಬೇಕು. ಇವನ್ನೆಲ್ಲಾ ಒಂದೇ ದೃಷ್ಟಿಯಿಂದ ಕಾಣಬೇಕು, ವೈಶಮ್ಯದ ದೃಷ್ಟಿಯಿಂದ ಕಾಣಬಾರದು.

ನಮ್ಮಲ್ಲಿ ರೂರಲ್ ಕಮ್ಯೂನಿಕೇಷನ್ನುಗಳಿಗಾಗಿ ಇಲಾಖೆಯುವರು ಹೆಚ್ಚಿನ ಗಮನ ಕೊಡಬೇಕು. ಇದನ್ನು ಅಲಕ್ಷ್ಯ ಮಾಡಬಾರದು. ಆದರೆ ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಮ್ ನೋಡಿದರೆ ಇಲ್ಲಿ ನಮಗೆ ಒದಗಿಸಿರುವ ಪಟ್ಟಿಯಲ್ಲಿ ಪರ್ಸೆಂಟೇಜು ಕೂಡ ಒದಗಿಸಿದ್ದಾರೆ. 1959-60 ರಲ್ಲಿ ಷುರು ಮಾಡಿದ ಪ್ರೋಗ್ರಾಮ್ ಪ್ರಕಾರ ಪ್ರತಿ ತಾಲ್ಲೂಕಿಗೂ 50 ಮೈಲಿಯಂತೆ ರಸ್ತೆ ಹಾಕಬೇಕೆಂದು ಯೋಚಿಸಿದ್ದು ಕೆಲವು ತಾಲ್ಲೂಕುಗಳಲ್ಲಿ ಸೀಲಿಂಗು ಮೀರಿದೆ. ಕೆಲವು ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿ ತಲದೋರಿದಾಗ ಜನರಿಗೆ ಉದ್ಯೋಗ ಕೊಡುವುದಕ್ಕಾಗಿ ಹೆಚ್ಚು ರಸ್ತೆಗಳನ್ನು ತೆಗೆದು ಕೊಂಡದ್ದರಿಂದ ಅಲ್ಲಿ ಆ ತಾಲ್ಲೂಕುಗಳಲ್ಲಿ ಹೆಚ್ಚಿನ ಖರ್ಚು ಆಗಿರಬಹುದು. ಈ ಅಸಮಾನತೆಯನ್ನು ಸರಿಪಡಿಸಿ ಪ್ರತಿಯೊಂದು ತಾಲ್ಲೂಕಿಗೂ 50 ಮೈಲಿ ರಸ್ತೆಯನ್ನು 3ನೇ ಯೋಜನೆ ಮುಗಿಯುವದ ರೊಳಗಾಗಿ ಪೂರೈಸಿ ರೈತರು ಪಡುತ್ತಿರುವ ಕಷ್ಟವನ್ನು ನಿವಾರಿಸಬೇಕು. ಎಲ್ಲ ಭಾಗಗಳೂ ಪ್ರಗತಿ ಹೊಂದಲು ಪ್ರಯತ್ನಿಸುವಾಗ ಹಿಂದುಳಿದ ಭಾಗಗಳನ್ನು ಮುಂದಕ್ಕೆ ತರುವುದು ಸರಕಾರದ ಕರ್ತವ್ಯ. ಇದನ್ನು ಹೇಗೆ ಸಾಧಿಸಲಾಗಿದೆ ಅನ್ನುವುದಕ್ಕೆ ಸರಕಾರದವರು 1956 ರಿಂದ 1963ರ ವರೆಗೆ ಏನೇನು ಮಾಡಿದೆ ಅನ್ನುವುದಕ್ಕೆ ಒಂದು ಕೈ ಹೊತ್ತಿಗೆಯನ್ನು ನಮಗೆ ಒದಗಿಸಿಕೊಟ್ಟಿದ್ದಾರೆ. ಇಲ್ಲಿ ಕೊಟ್ಟಿರುವ ಅಂಕೆ ಸಂಖ್ಯೆಗಳು ಶ್ಲಾಘನೀಯವಾದವು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮ್ಮಲ್ಲಿರುವ ಪಟ್ಟಿಯಂತೆ ಪುಟ 19 ರಲ್ಲಿ 1956-63ರ ವರೆಗೆ ಏನೇನೂ ಡೆವಲಪ್‌ಮೆಂಟುಗಳಾಗಿವೆ ಎನ್ನುವುದನ್ನು ನೋಡಿದರೆ ತಮಗೇ ತಿಳಿಯುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ನೋಡಿದ್ದೇನೆ. ತಾವು ಹೇಳುವಂತೆ, "ಶ್ರೀಮಂತರನ್ನು ಇನ್ನೂ ಹೆಚ್ಚು ಶ್ರೀಮಂತರನ್ನಾಗಿ ಮಾಡಬೇಕೆಂದು ಕಾಣುತ್ತದೆ." ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಹಾಗೂ ಬಿಜಾಪುರ ಇವುಗಳಲ್ಲಿ ಸಾಧಿಸಿದ ಪ್ರಗತಿಯ ಅಂಕೆಗಳನ್ನು ಇಲ್ಲಿ ಕೊಟ್ಟಿದ್ದಾರೆ. ಪ್ರತಿ ನೂರು ಚದರ ಮೈಲಿಗೆ ಬಿಜಾಪುರ ಜಿಲ್ಲೆಯಲ್ಲಿ 32 ಮೈಲಿ ರಸ್ತೆ ಇದೆ. ಬಿಜಾಪುರದಲ್ಲಿ ಉಳಿದ ಮೂರು ಜಿಲ್ಲೆಗಳಿಗಿಂತ ಹೆಚ್ಚಾಗಿ ಕೆಲಸ ಆಗಿದೆ ಎಂದು ಹೇಳಲು ಅಲ್ಲ ಆ ಜಿಲ್ಲೆಗೆ ಒಂದು ಇತಿಹಾಸವೇ ಇದೆ. ಇದು ಬರಗಾಲಕ್ಕೆ ತುತ್ತಾಗುವ ಪ್ರದೇಶವೆಂದೂ ಮೂರು ವರ್ಷಗಳಲ್ಲಿ ಎರಡು ವರುಷ ಬರಗಾಲಕ್ಕೆ ತುತ್ತಾಗುವ ಪ್ರದೇಶವಾದ್ದರಿಂದ ನಮ್ಮ ರಾಜ್ಯಸರಕಾರ ದವರು ಜನರಿಗೆ ಉದ್ಯೋಗ ದೊರಕಿಸಿಕೊಡಲು (ಬರಗಾಲದಲ್ಲಿ) ರೋಡುಗಳನ್ನು ಮಾಡಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಇದಕ್ಕೆ ಬದಲಾಗಿ ಕೆರೆಗಳನ್ನು ಕಟ್ಟಿಸಿದ್ದಾರೆ. ಇಂತಹ ಅಭಾವಕ್ಕೆ ಮೇಲಿಂದಮೇಲೆ ತುತ್ತಾಗುತ್ತಿದ್ದಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ರೋಡುಗಳನ್ನು ಹೆಚ್ಚಾಗಿ ತೆಗೆದು ಕೊಂಡು ಕೆಲಸ ಮಾಡಿದ್ದಾರೆಂದು ಇದರ ಬಗ್ಗೆ ಮಾನ್ಯ ಸದಸ್ಯರು ತಪ್ಪು ತಿಳಿದುಕೊಳ್ಳಬಾರದು. ಬೇಕಾದರೆ ಮಾನ್ಯ ಸದಸ್ಯರು ನನ್ನೊಡನೆ ಒಂದು ಸಲ ಬಿಜಾಪುರಕ್ಕೆ ಬಂದರೆ ಕರೆದುಕೊಂಡು ಹೋಗುತ್ತೇನೆ. ಆಗ ಅಲ್ಲಿಯ ರೋಡುಗಳ ಪರಿಸ್ಥಿತಿ ಹೇಗಿದೆ ಅನ್ನುವುದನ್ನು ಅವರೇ ತಿಳಿದು ಕೊಳ್ಳಬಹುದು. ಬಿಜಾಪುರಕ್ಕೆ ಮೈಲೇಜು ಪರ್ಸೆಂಟೇಜು ಹೆಚ್ಚು ಎಂದು ಹೇಳಬಹುದು. ಆದರೆ ಅಲ್ಲಿಗೆ ಇನ್ನೂ ಒಂದು All weatherproof road ಆಗಿಲ್ಲ. ಸೇತುವೆಗಳಿಲ್ಲ, ಕಾಜ್‌ವೇಗಳೂ ಕೂಡ ಕೆಲವೊಂದು ರಸ್ತೆಯಮೇಲೆ ಒಂದೂ ಇಲ್ಲ. ಮಹತ್ವವಾದ ರಸ್ತೆಗಳಿಗೆ ಅಡ್ಡವಾಗಿ ಹರಿಯುವ ನಾಲಾಗಳನ್ನು ಕಟ್ಟಿರುವುದು ಕೂಡ ಕಂಡುಬಂದಿಲ್ಲ. ಜಿಲ್ಲಾ ಹೆಡ್‌ಕ್ವಾರ್ಟರುಗಳಿಂದ ತಾಲ್ಲೂಕು ಭಾಗಗಳಿಗೆ ಹೋಗಲು ಸರಿಯಾದ ಮಾರ್ಗಗಳಾಗಿಲ್ಲ. ನಮ್ಮ ರಾಜ್ಯದಲ್ಲಿ ನ್ಯಾಷನಲ್ ಹೈವೇ ರಸ್ತೆಯು ಬಹಳ ಕಡಿಮೆ ಇದೆ, ಉಳಿದ ನೆರೆ ರಾಜ್ಯಗಳಿಗಿಂತಲೂ ಪರ್ಸೆಂಟ್ ಕಡಿಮೆ ಇದೆ. National Highways ಎಷ್ಟು ಪ್ರಮಾಣದಲ್ಲಿ ಆಗಬೇಕೋ ಅಷ್ಟೂ ಆಗಿಲ್ಲ. ಮೈಲೇಜು ನೋಡಿದರೆ 500 ಚಿಲ್ಲರೆ ಮೈಲಿ ಇರುವಹಾಗಿದೆ. National Highway No. 13 ಆದರೂ ಒಟ್ಟು 800 ಮೈಲಿ ಆಗಬಹುದು. ನಮಗೆ ಒದಗಿಸಿದ ನಕಾಶೆ ನೋಡಿದರೆ National Highways No. 13 (ಸೋಲಾಪುರದಿಂದ ಚಿತ್ರದುರ್ಗ) ಇದು ಬಿಜಾಪುರ, ಬಾಗೇವಾಡಿ, ಅನಂತರ ಮುದ್ದೇಬಿಹಾಳದಿಂದ ಹುನುಗುಂದಮೇಲಿಂದ ಹೋಗುತ್ತದೆ. ಬಿಜಾಪುರ ಜಿಲ್ಲೆಯಲ್ಲಿ ನ್ಯಾಷನಲ್ ಹೈವೇ ರೋಡು ಹೆಚ್ಚು ಆಗಬೇಕು. ಈ ಪ್ರಕಾರ ತಾವು ನಕಾಶೆಯಲ್ಲಿ ತೋರಿಸಿದ ಪ್ರಕಾರ ಸರಕಾರದವರು ಪ್ರಯತ್ನ ಮಾಡಿ ನ್ಯಾಷನಲ್ ಹೈವೇ ನಂ. 13 ಮುದ್ದೇಬಿಹಾಳ ಮೇಲಿಂದಲೇ ಹೋಗುವಹಾಗೆ ಕೇಂದ್ರ ಸರಕಾರದವರನ್ನು ಒತ್ತಾಯಪಡಿಸಿ ಈ ಮಾರ್ಗ ಆಗುವಂತೆ ಮಾಡಬೇಕು.

ತಂಗಡಿಗಿಯ ಹತ್ತಿರ (ನಾರಾಯಣಪುರ ಡ್ಯಾಮ್ ಆಗುವುದರಿಂದ) ನೀರು ಹೆಚ್ಚು ನಿಲ್ಲುತ್ತಿದ್ದರೆ ಮುದ್ದೇಬಿಹಾಳದಿಂದ ಡೈವರ್ಷನ್ ಮಾಡಿ ಸಂಗಮದ ಮೇಲಿಂದ ರೋಡು ಮಾಡಲಿಕ್ಕೆ ಸಾಧ್ಯವಿದೆ. ಈಗಿನ ಅಲಾಯಿನ್‌ಮೆಂಟ್ ಬದಲಾಯಿಸಿ ಮನಗೂಳಿಯಿಂದ ನೆಟ್ಟಗೆ ನಿಡಗುಂದಿಯ ಮೇಲಿಂದ ನ್ಯಾಷನಲ್ ಹೈವೇ ನಂ. 13, ಇದನ್ನು ಹಾಕಿದರೆ ಕೃಷ್ಣಾ ನದಿಗೆ ಅಡ್ಡಲಾಗಿ ಸಮೀಪದಲ್ಲಿಯೇ ಮೂರು ಸೇತುವೆಗಳು ಬರುತ್ತವೆ. ಆಲಮಟ್ಟಿ ಪ್ರಾಜೆಕ್ಟದವರು ಒಂದು ಬ್ರಿಡ್ಜ್ ಕಟ್ಟುತ್ತಾರೆ. ರೈಲ್ವೆ ಬ್ರಿಡ್ಜು, ನ್ಯಾಷನಲ್ ಹೈವೇ ಬ್ರಿಡ್ಜ್ ಇವುಗಳ ಸ್ಥಳ ನೋಡಿದರೆ ಒಂದು ಮೈಲಿಯೊಳಗೆನೇ ಎಲ್ಲವೂ ಬರುತ್ತವೆ. ಕಾರಣ ನ್ಯಾಷನಲ್ ಹೈವೇ ನಂ. 13 ಇದನ್ನು ಮುದ್ದೇಬಿಹಾಳ ಸಂಗಮ ಮೇಲಿಂದ ಹಾಕಿದರೆ ಮಹತ್ವವಾದಂಥ ಪಟ್ಟಣಗಳ ಮೇಲಿಂದ ಆ ರಸ್ತೆಯು ಹೋಗುತ್ತದೆ. ಬಿಜಾಪುರ ಜಿಲ್ಲೆಯ ರಸ್ತೆಗಳ ಬಗ್ಗೆ ನಾನು ಹೇಳುವುದಕ್ಕಿಂತ ಮಾನ್ಯ ಮಂತ್ರಿಗಳಿಗೆ ಜಿಲ್ಲೆಯ ಸಂಪೂರ್ಣ ಚಿತ್ರ ಚೆನ್ನಾಗಿ ಗೊತ್ತಿದೆ. ಬಿಜಾಪುರದ ದುಸ್ಥಿತಿಯ ಬಗ್ಗೆ ನಾನು ಇನ್ನೂ ಹೇಳಿದರೆ ಇಲ್ಲಿ ಗೊಂದಲ ಏಳುವ ಹಾಗೆ ಕಾಣುತ್ತೆ. ಯಾಕೆಂದರೆ ಸುಮ್ಮಸುಮ್ಮನೆ ಏನೋ ಇಲ್ಲಿ ಹೇಳುತ್ತಾರೆ ಎಂದು ಭಾವಿಸುವ ಸದಸ್ಯರಿದ್ದಾರೆ. ಕಾರಣ ಬಿಜಾಪುರ ಜಿಲ್ಲೆಯ ಬಗ್ಗೆ ಹೆಚ್ಚಿಗೆ ಏನೂ ಹೇಳುವುದಿಲ್ಲ. ದಕ್ಷಿಣ ರಾಜ್ಯಗಳ ಜೊತೆಗೆ ನಮ್ಮ ರಾಜ್ಯವನ್ನು ಹೋಲಿಸಬೇಕಾದರೆ ಮದರಾಸು, ಆಂಧ್ರ, ಮಹಾರಾಷ್ಟ್ರ, ಕೇರಳವಾಗಲಿ ಎಷ್ಟು ವೇಗದಿಂದ ಪ್ರಗತಿ ಸಾಧಿಸಿವೆಯೋ ಅವಕ್ಕೆ ತಕ್ಕಂತೆ ನಮ್ಮ ರಾಜ್ಯವನ್ನು ಒಯ್ಯಬೇಕು. ಅದಕ್ಕಾಗಿ ಕೇಂದ್ರ ಸರಕಾರಕ್ಕೆ ಹೆಚ್ಚು ಹಣ ಕೊಡಲು ಸಹಾಯ ಮಾಡುವಂತೆ ಕೇಳಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಎಲ್ಲ ಜನರೂ ಒಗ್ಗಟ್ಟಿನಿಂದ ಮುಂದೆ ಬಂದು ರಾಜ್ಯದ ಏಳ್ಗೆಗೆ ತಕ್ಕ ಕ್ರಮ ಕೈಗೊಳ್ಳಬೇಕೇ ಹೊರತು ವೈಷಮ್ಯದಿಂದ ಹೋಗಬಾರದು. ರಾಜ್ಯದ ಪ್ರಗತಿಗಾಗಿ ಎಲ್ಲರೂ ಶ್ರಮಿಸಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

[MR. SPEAKER in the Chair.]

**Mr. SPEAKER.**—Before I call upon any Member, I would like to know what time will be required by the Hon'ble Minister for reply.

**Sri VEERENDRA PATIL** (Minister for Public Works).—About 1½ hours, Sir.

**Mr. SPEAKER.**—We will have the rest of the day for the debate and the Minister will reply to-morrow.

*(Some Members rose.)*

**Mr. SPEAKER.**—I do not want any of the Members to be late starters. Till practically all the time is over, Members do not seem to be making up their mind. The Whips do not seem to apply their mind properly. They place me in an embarrassing position. I want to see that every request that is made to the Chair is complied with and the Members are satisfied. But, when they send a number of requests at a time, I have to refuse some.

By to-morrow evening, the Education Demand must be completed, for which 4½ hours have been allotted by the Business Advisory Committee. I have calculated to-morrow's time as under.

| | | |
|---|---|---|
| 8-30 to 9-30 A.M. | ... | Question hour. |
| 9-30 to 11-00 A.M. | ... | Minister's reply for P. W. Demand. |

Then from 11-00 A.M. to 12-30 P.M., we will have 1½ hours for the Education Demand before we disperse for Lunch. Afters that we will have only 3 hours and we will be short of half-an-hour. One day has been allotted by the Business Advisory Committee for the Education Demand.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈಗ ನಾನು ತಮ್ಮ ಮೂಲಕ ಈ ಮಾನ್ಯ ಸಭೆಯ ಗಮನಕ್ಕೆ ಕೆಲವು ವಿಚಾರಗಳನ್ನು ತರಲಿಚ್ಛಿಸುತ್ತೇನೆ. ನಮ್ಮ ಈ ಪಿ. ಡಬ್ಲ್ಯು. ಡಿ. ನಲ್ಲಿ ಅನೇಕ ನ್ಯೂನತೆಗಳಿವೆ. ಇವು ಚೆನ್ನಾಗಿ ಮನವರಿಕೆಯಾಗುವ ಹಾಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಇದಕ್ಕಾಗೇ ರಿಸೋರ್ಸ್‌ಸ್ ಅಂಡ್ ಎಕಾನಮಿ ಕಮಿಟಿಯವರು ಹೇಳಿರತಕ್ಕ ವಿವರಣೆಯ ವಿಚಾರದಲ್ಲಿ ಡಾ. ಭೋಲಾಡಿ ಪಂತ್ ಎಂಬುವವರು ಒಂದು ಡಿಸೆಂಟಿಂಗ್ ನೋಟನ್ನು ಕೊಟ್ಟು ಅದರಲ್ಲಿ ವಿಚಾರಗಳನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ನಮ್ಮ ಸರಕಾರದವರೇ ಈಗ ಒಂದು ಹೊಸ ಇಲಾಖೆಯನ್ನು ಸೃಷ್ಟಿಸಿದ್ದಾರೆ. ಅದು ಯಾವುದೆಂದರೆ—ಕಂಟ್ರಾಕ್ಟರ ಇಲಾಖೆ ಅದು. ಈಗ ಈ ಇಲಾಖೆಯ ಸ್ವರೂಪ ಎಲ್ಲಿಗೆ ಬಂದಿದೆ ಎಂದರೆ—ಸರ್ಕಾರವೇ ಆಗಲೀ, ಜನರೇ ಆಗಲಿ ಏನು ಹೇಳುತ್ತಿದ್ದಾರೆಂಬ ಬಗ್ಗೆ ಅವರು ಹೀಗೆ ಹೇಳಿದ್ದಾರೆ:

> "In course of time, gratuity, consideration, offering, contributions, etc., become a practice and de-facto assume the status of respectability."

ಸಂಭಾವಿತರಾಗಿರತಕ್ಕವರಿಗೆ ಈ ದುರಾಚಾರಗಳೆಲ್ಲಾ ಒಂದು ಕ್ವಾಲಿಫಿಕೇಷನ್ನಾಗಿವೆ —ಎಂದು ಈ ವರದಿಯ ಪುಟ 475ರಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ಶ್ರೀ ಗೋಪಾಲ ಗೌಡರು ಒಂದು ವಿಚಾರವನ್ನು ಹೇಳಿದ್ದಾರೆ. ಸರ್ಕಾರದವರು ಹೀಗೆಲ್ಲಾ ಮಾತನಾಡುತ್ತಿರುವುದರಿಂದಲೇ ಶ್ರೀ ಮುಕ್ಕಣ್ಣಪ್ಪನವರೂ ಸಹಾ ಹಾಗೆ ಮಾತನಾಡುತ್ತಾ ಎರಡು ಕರ್ಣಾಟಕವಾಗಲಿ ಎಂದು ಹೇಳುತ್ತಿದ್ದಾರೆ. ಇದಕ್ಕೆಲ್ಲ ದಾರಿಮಾಡಿಕೊಡತಕ್ಕವರು ಯಾರೆಂದರೆ ಅದು ಆಡಳಿತ ಪಕ್ಷದವರೇ. ದೇಶದಲ್ಲಿ ರಸ್ತೆಗಳನ್ನು ಮಾಡತಕ್ಕ ಬಗ್ಗೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 297 ಲಕ್ಷ ರೂಪಾಯಿಗಳನ್ನೊದಗಿಸಿದ್ದರು. ಆ ಬಳಿಕ ಒದಗಿಸಿರುವುದು 900 ಲಕ್ಷ ರೂಪಾಯಿಗಳು ಇಂಥ ಕಾರಣಗಳಿಂದಲೇ ಆ ಡಾ. ಭೋಲಾಡಿಪಂತ್‌ರವರು ತಮ್ಮ ಡಿಸೆಂಟಿಗ್ ನೋಟಿನಲ್ಲಿ ಹಾಗೆ ಹೇಳಿದ್ದಾರೆ. ಪಿ. ಡಬ್ಲ್ಯು. ಡಿ. ಯವರೇನೋ ಹಣವನ್ನು ಪೂರ್ಣವಾಗಿ ಯುಟಿಲೈಸ್ ಮಾಡುತ್ತಿದ್ದಾರೆ. ಆದರೆ ಕೆಲಸ ಆ ದುಡ್ಡಿಗೆ ತಕ್ಕಷ್ಟು ಇರುವುದಿಲ್ಲ. ಸರ್ಕಾರ ಖರ್ಚುಮಾಡುತ್ತಿರುವ ದುಡ್ಡು ಎಲ್ಲಾ ಜನರಿಂದಲೂ ಬರತಕ್ಕದ್ದಾಗಿದೆ. ಆದಾಗ್ಯೂ ಹೆಚ್ಚಿನ ವರಮಾನ ಕ್ಯಾಪಿಟಲ್ ಇಂಡಸ್ಟ್ರೀಸ್‌ಗಳಿಂದ ಬರುತ್ತದೆ ಎಂದು ಹೇಳುತ್ತಿದ್ದಾರೆ. ಹೀಗೆ ಅವರು ಬಾಯಿನಲ್ಲಿ ಹೇಳುತ್ತಾ ಟ್ಯಾಕ್ಸನ್ನು ಮಾತ್ರ ಎಲ್ಲರಿಂದಲೂ ಒಂದೇ ಸಮನಾಗಿ ವಸೂಲ್ಮಾಡುತ್ತಿದ್ದಾರೆ. ಆದರೆ ಇದು ತತ್ವಕ್ಕೆ ಬಹಳ ವಿರುದ್ಧವಾಗಿದೆ. ಸರ್ಕಾರವು ಕೂಡ ಒಬ್ಬ ಕಂಟ್ರಾಕ್ಟರಂತೆ ಕೆಲಸಮಾಡುವುದಕ್ಕೆ ಪ್ರಾರಂಭಿಸಿದರೆ ಜನರಲ್ಲಿ ಕೆಟ್ಟಭಾವನೆ ಬರುತ್ತದೆ. ನಮ್ಮ ಮುಖ್ಯಮಂತ್ರಿಗಳ ವಿಚಾರದಲ್ಲಿ ಜನರೇನು ಹೇಳುತ್ತಿದ್ದಾರೆಂಬುದನ್ನು ಹೇಳಬೇಕೆಂದರೆ ಅವರಿಗೆ ದುಡ್ಡು ಹೊಡೆಯುವುದಕ್ಕೆ ತುಂಬಾ ಆಸೆಯಿದೆ, ಆದರೆ ಅದನ್ನು ಹೊಡೆಯುವುದು ಹೇಗೆ ಎಂಬ ವಿಚಾರ ಅವರಿಗೆ ಗೊತ್ತಿಲ್ಲ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ನಮ್ಮಲ್ಲಿ ಈ ಪಿ. ಡಬ್ಲ್ಯು. ಡಿ. ಯೇ ಒಂದು ಏಜನ್ಸಿಯಾಗಿರುವಾಗ ಇದಕ್ಕೆ ಇನ್ನೊಂದು ಏಜನ್ಸಿಯನ್ನು ಉಂಟುಮಾಡಿದ್ದಾರೆ. ಇದರಿಂದ ಜನರ ಇಂಟರೆಸ್ಟನ್ನು ಇವರು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆಂದು ಇದರಿಂದಲೇ ವ್ಯಕ್ತವಾಗುತ್ತದೆ. ಜನರು ಇಂಥ ಸ್ವರೂಪಗಳನ್ನೆಲ್ಲಾ ನೋಡಿ ಇವರು ಒಂದು ತಾತ್ವಿಕ ರೀತಿಯಿಂದ ಕೆಲಸಮಾಡದೆ ಇರುವುದರಿಂದ ಇದರಲ್ಲೇನೋ ಇದೆ ಎಂಬ ಒಂದು ಸಂಶಯಭಾವನೆ ಜನರಲ್ಲಿ ಬಂದಿದೆ. ಈ ಭಾವನೆಯನ್ನು ಸಮರ್ಥನೆಮಾಡುದಕ್ಕೆ ಸರಿಯಾಗಿ ದುಡ್ಡು ಸಾಕಷ್ಟು ಖರ್ಚಾಗುತ್ತಿದೆ, ಆದರೆ ಅದಕ್ಕೆ ತಕ್ಕಂತೆ ಕೆಲಸಗಳಾಗಿರುವುದಿಲ್ಲ. ಸರ್ಕಾರದವರು ಪದೇ ಪದೇ ಹೇಳಿದ್ದನ್ನೇ ಹೇಳುತ್ತಿರುವುದರಿಂದ ಜನರಿಗೆ ಸರ್ಕಾರದಲ್ಲಿದ್ದ ನಂಬಿಕೆ ಮಾಯವಾಗುತ್ತಿದೆ. ಇದರಿಂದ ಜನರಲ್ಲಿ ಒಂದು ವಿಭಜನಾತ್ಮಕ ಭಾವನೆ ಉಂಟಾದರೆ ಅದರಲ್ಲಿ ತಪ್ಪೇನಿದೆ? ಸರ್ಕಾರದವರು ಈ ದಿವಸ ಏನೇ ಕೆಲಸಮಾಡಿದರೂ ಬಹಳ ಸಂಕುಚಿತ ಮನೋಭಾವನೆಯಿಂದ ಮಾಡುತ್ತಿದ್ದಾರೆ. ಹೀಗೆ ಸರ್ಕಾರದವರಲ್ಲಿ ಈ ಒಂದು ವಿಶಾಲವಾದ ಸಾಮಾಜಿಕ ಭಾವನೆ ಕುಂಠಿತವಾದರೆ ಭಾವೈಕ್ಯತೆ ಜನರಲ್ಲಿ ಬರಲು ಸಾಧ್ಯವಿಲ್ಲ. ಶ್ರೀ ದೊಡ್ಡಮೇಟಿಯವರೇನೋ ಅವರಲ್ಲಿ ಕೊನೆಯ ಒಂದು ರಕ್ತಬಿಂದುವಿರುವವರೆಗೂ ಎರಡು ಕರ್ಣಾಟಕವಾಗುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದರು.

ಅಧ್ಯಕ್ಷರು.—ದೊಡ್ಡಮೇಟಿಯವರಾಡುವ ಮಾತೆಲ್ಲಾ ದೊಡ್ಡದೇ ಅಲ್ಲವೇ?

ಶ್ರೀ ವಿ. ಎಂ. ದೇವ್.—ನಾವು ಒಂದು ಪೊಜಿಷನ್ನನ್ನು ಕನ್ಸಾಲಿಡೇಟ್ ಮಾಡಬೇಕಾಗಿದ್ದರೆ ಅದಕ್ಕೆ ಹೋರಾಟ ಮಾಡುವುದೊಂದೇ ಸಾಲದು. ಇದಕ್ಕೆ ಒಂದು ಸೂಕ್ತ ಪರಿಹಾರವನ್ನೂ ಸಹಾ ಕಂಡುಹಿಡಿಯಬೇಕು. ನಾನೀದಿವಸ ಶ್ರೀ ಮುಕ್ಕಣ್ಣಪ್ಪನವರಿಗೆ ರುಚಿಸುವಂತೆ ಎರಡುಮಾತುಗಳನ್ನಾಡಿ ಅವರಿಂದ ನಾನು ಬೆನ್ನು ತಟ್ಟಿಸಿಕೊಳ್ಳಬಹುದು. ಬರೀ ವಕ್ಕಲಿಗರೇ ಎಲ್ಲಿ ಹೆಚ್ಚಾಗಿದ್ದಾರೋ

ಅಲ್ಲಿ ಅವರಿಗೊಂದು ರಾಜ್ಯಮಾಡಿಕೊಡಿ, ಎಲ್ಲಿ ಲಿಂಗಾಯಿತರೇ ಹೆಚ್ಚಿಗೆ ಇರುತ್ತಾರೋ ಅಲ್ಲಿ ಲಿಂಗಾಯಿತರಿಗೊಂದು ರಾಜ್ಯವಾಗಲೀ ಎಂತ ನಾನೂ ಹೇಳಬಹುದು. ಆದರೆ ಇದು ತೀರಾ ವಿರೋಧಾಭಾಸವಾಗುತ್ತದೆ. ಹೆಣ್ಣುಗಳನ್ನೇ ಒಂದು ಕಡೆ, ಗಂಡುಗಳನ್ನೇ ಒಂದು ಕಡೆ ಇಡಬೇಕೆಂದು ಹೇಳಿದರೆ ಹೇಗೋ ಇದೂ ಹಾಗೆ ಆಗುತ್ತದೆ.

ಅಧ್ಯಕ್ಷರು.—ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ವಿ. ಎಂ. ದೇವ್.—ಎಂದು ದೇಶಾದ್ಯಂತವೂ ಒಂದೇ ಸಮನಾದ ಆರ್ಥಿಕ ಬೆಳವಣಿಗೆಯನ್ನು ತರುತ್ತಾರೋ, ಅಂದೇ ದೇಶದಲ್ಲಿ ಭಾವೈಕ್ಯತೆ ಬರುವುದು. ಅದಕ್ಕಾಗಿ ಎಲ್ಲಾ ಮಾನ್ಯ ಸದಸ್ಯರೂ ತಮ್ಮ ಕೈಲಾದಮಟ್ಟಿಗೂ ಕಾಂಟ್ರಿಬ್ಯೂಟ್ ಮಾಡಬೇಕೆಂದು ಹೇಳುತ್ತೇನೆ. ನನ್ನ ಕ್ಷೇತ್ರ ಇರುವುದು ರಾಜ್ಯದ ಪೂರ್ವದಿಕ್ಕಿಗೆ ಇರತಕ್ಕ ತುಮಕೂರು ಜಿಲ್ಲೆಯಲ್ಲಿ ಗುಬ್ಬಿ ತಾಲ್ಲೂಕಿನಲ್ಲಿ ಚಿಕ್ಕನಹಟ್ಟಿ ಎಂಬ ಒಂದು ಗ್ರಾಮ ನನ್ನ ಊರು. ಆ ಪ್ರದೇಶ ಬಹಳ ಬೆಂಗಾಡಾದ್ದು. ಅದಕ್ಕಾಗಿ ಈಗ ಸರ್ಕಾರದವರು ಕಟ್ಟಲಿರತಕ್ಕ ಹೇಮಾವತಿ ಡ್ಯಾಮಿನ ಎತ್ತರವನ್ನು ಸ್ವಲ್ಪ ಎತ್ತರಿಸಿದರೆ ನನ್ನ ಕ್ಷೇತ್ರಕ್ಕೂ ಸ್ವಲ್ಪ ನೀರಿನ ಅನುಕೂಲವನ್ನು ಮಾಡಿಕೊಟ್ಟ ಹಾಗಾಗುತ್ತದೆ. ಇನ್ನು ಮುಂದೆ ಈ ಬಾಬಿನಲ್ಲಿ ವ್ಯವಹಾರ ನಡೆಸತಕ್ಕ ಜವಾಬ್ದಾರಿ ಪಂಚಾಯಿತಿ ರಾಜ್ಯಕ್ಕೆ ಹೋಗತಕ್ಕದ್ದಾಗಿದೆ. ಇನ್ನು ಮುಂದೆ ಆಗತಕ್ಕ ಕೆಲಸಗಳ ಕಂಟ್ರಾಕ್ಟನ್ನೆಲ್ಲಾ ಈ ಗ್ರಾಮ ಪಂಚಾಯಿತಿಗಳಿಗೇ ವಹಿಸಬೇಕೆಂದು ಹೇಳುತ್ತೇನೆ. ಹಾಗೆ ಮಾಡಿದರೆ ದೇಶದ ಆದಾಯ ದೇಶಕ್ಕೇ ಸೇರಿದಂತಾಗುವುದು. ದೇಶಕ್ಕೂ ಒಳ್ಳೆಯದಾಗುವುದು, ಈಗ ಹೇಮಾವತಿ ಪ್ರಾಜೆಕ್ಟಿಗೆ ಮೂರು ಕೋಟಿ ರೂಪಾಯಿಗಳನ್ನಿಟ್ಟಿದ್ದಾರೆ. ಇದರ ಏರಿಯನ್ನು ಇನ್ನು ಸ್ವಲ್ಪ ಎತ್ತರಿಸಿದರೆ ಹೆಚ್ಚು ಪ್ರದೇಶಕ್ಕೆ ನೀರಿನ ಸೌಕರ್ಯ ದೊರೆಯುತ್ತದೆ. ನಮ್ಮ ಮಳೆಬೆಳೆಗಳಿಲ್ಲದ ತುಮಕೂರು ಜಿಲ್ಲೆಗೂ ಇದರಿಂದ ಸ್ವಲ್ಪ ಸಹಾಯಮಾಡಿದಂತಾಗುತ್ತದೆ. ನನಗೆ ವೇಳೆಯಾದ್ದರಿಂದ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri BAPU RAO ANANDA RAO HULSOORKER (Hulsur).—Mr. Speaker, Sir, while dealing with the demands on public works, I will first of all to deal with the roads. It is a well known fact that communication plays an important part in the development of the area and it is also a well known fact that the three districts of Hyderabad, namely, Raichur, Bidar and Gulbarga are neglected in respect of roads, etc. Just as the Hyderabad-Karnatak area is neglected in Mysore State, so also Bidar District is neglected in Hyderabad-Karnatak area If I may say further more, in Bidar district three taluks, namely, Santpur, Bhalki and Humnabad which are predominantly Marathi speaking eras are neglected in respect of development and Government has failed to safeguard the interests of the Marathi speaking area. In this connection, I want to bring to the notice of this House that certain areas in Hyderabad Karnatak were formerly Jahgirs and Paigas. The welfare of the people in these areas was not looked after. They were only interested in getting revenue and they did not lookafter the welfare of the people and pay enough attention to the wishes of the people. Even after Independence and even after Hyderabad Karnatak area joining this State, Government has failed to pay proper attention to this area. From the figures given by Government it is clear that there is very inadequate mileage in respect of roads in this area and certainly it is very low mileage that has been covered particularly in Bidar District. To solve the problem of Bidar District regarding roads, I request Government that in order to improve this area which has been neglected, a Sub-Division particularly for roads may be created. If this is not done, there is no possibility of development in respect of roads. Now I will deal with the existing National Highway. The length of National Highway in Bidar District is very small. So I request that the existing State highway road which

(SRI BABU RAO ANANDA RAO HULSOORKER)

adjoins three States, Bidar District being the border area—the Hyderabad-Nanded Road should be upgraded to National Highway. It not only joins Hyderabad and Bihar but also it joins Nanded which is a commercial centre in the State of Maharashtra and by upgrading this Road into National Highway, the economic problems and transport facilities of this area would be solved. Regarding the State highay, my colleague Sri Gopala Rao a few minutes earlier pointed out the difficulties of this area, particularly Bidar. It is very difficult for the people of this District to come to the State capital or even to the Division. They have to go *via* Andhra Pradesh or *via* Maharashtra and people living in Santpur taluk which is on the border of our State are suffering a lot and their difficulties are worth noting. They have to travel in a zig-zag manner and it takes two days to reach the State capital. So, I request that the work of Shantpur-Bhalki-Humnabad Road should be taken up immediately, as also the bridge over Karanja river at Bhalki. This bridge work should be taken up as early as possible. I am very happy in one respect that Hulsur-Kalyani Road is in progress, but I request that the work of this Road should be accelerated so that some of the problems may be solved. I will deal with particularly Marathi speaking area of Shantpur, Bhalki and Humnabad. Even after the passing of the States' Reorganisation Act and the integration of this area with Mysore State, no development has taken place either in respect of State Highway or in respect of rural communications. Since I became a member of this House. I am trying my level best to see that Hulsur and Mahkarpatti in Maharashtra area are joined and connected with Hudgir-Nanded Road. The economic problem of the people living in this Marathi speaking area would be solved thereby. Mahkarpatti becomes an island. No development activities are possible because of the river. The bridge across the river Majra in Mohkarpatti should be taken up immediately. The rural communication road work has been very slow and now the work is practically stopped. Considering the backwardness and border area, more funds should be provided in respect of roads and bridge works and cross drainage work and certain minor bridges on these roads also should be taken up; and particularly the bridge over Karanja, because if the bridge is not completed nothing can be achieved on Bhalki-Humnabad Road. Only one more point. In certain taluks of Hyderabad Karnatak area, there are no travellers' bungalows in taluk headquarters. Government should take early action to provide these bungalows or inspection bungalows in taluk headquarters. One travellers' bungalow should be provided at Hulsur proper, being an important place in Bhalki Taluk. I represented this to the Minister when he visited the place Hulsur.

The Public Works Department has taken up certain wells in Marathi speaking areas and those works are still incomplete for the past six years. I request Government to expedite the construction of those wells and thereby solve the problem of the people living there. With these observations, I close my speech.

ಶ್ರೀ ಎಸ್. ಆವಲರೆಡ್ಡಿ (ಶಿಡ್ಲಘಟ್ಟ).—ಮಾನ್ಯ ಸಭಾಪತಿಗಳೇ 1964-65 ನೇ ಸಾಲಿಗೆ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ನೀಡಬೇಕೆಂದು ನಾನು ಬಯಸುತ್ತೇನೆ. ಎರಡನೆ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ನಮ್ಮ ಸರ್ಕಾರದವರು ಹಳ್ಳಿಗಾಡಿನ ಜನರಿಗೆ ರಸ್ತೆಸಾರಿಗೆಯನ್ನು ಚೆನ್ನಾಗಿ ಮಾಡಬೇಕೆಂದು ಪ್ರಯತ್ನಪಟ್ಟು ಸಾವಿರಾರು ಮೈಲಿಗಳ ರಸ್ತೆಯನ್ನು ಮಾಡಿಸಿದ್ದಾರೆ; ಮತ್ತು ಇಂಟರ್ ವಿಲೇಜ್ ಕಮ್ಯುನಿಕೇಷನ್ ರಸ್ತೆಗಳನ್ನು ಮಾಡಿಸಿದ್ದಾರೆ. ಇದು ಬಹಳ ಒಳ್ಳೆಯದು. ಇದು ಪ್ರಜೆಗಳು ಬಹಳ ಸಂತೋಷಪಡುವಂಥಾ ಯೋಜನೆಯಾಗಿದೆ. ನಮ್ಮ ಸರ್ಕಾರದವರು ನಮ್ಮ ಭಾಗದಲ್ಲಿ ಈಗ ಎರಡು ವರ್ಷಗಳಿಂದಲೂ ರಸ್ತೆಗಳ ಮೇಲೆ ಯಾವ ವಿಧವಾದ ರಿಪೇರಿಯನ್ನಾಗಲೀ ಸೇತುವೆಗಳನ್ನಾಗಲೀ ಪ್ರಜೆಗಳ ಪ್ರಯಾಣದ ಅನುಕೂಲಕ್ಕೆ ಮಾಡಿಕೊಟ್ಟಿಲ್ಲ. ಇದರಿಂದ ಅಲ್ಲಿನ ಜನಗಳಿಗೆ ತುಂಬಾ ಅನಾನುಕೂಲವಾಗಿದೆ. ಈ ವಿಷಯದಲ್ಲಿ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಹೇಳುತ್ತೇನೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ಎಷ್ಟೆಷ್ಟು ಮೈಲಿ ರಸ್ತೆಯನ್ನು ಮಾಡಿದ್ದಾರೆ ಎನ್ನುವಂತಾ ಒಂದು ಲೆಕ್ಕವನ್ನು ತೆಗೆದುಕೊಳ್ಳುವುದಾದರೆ ಆಗ ಯಾವ ಯಾವ ತಾಲ್ಲೂಕಿನಲ್ಲಿ ಏನೇನು ಪ್ರಗತಿ ಸಾಧನೆಯಾಗಿದೆ ಎನ್ನುವುದು ಗೊತ್ತಾಗುತ್ತದೆ. ಒಂದೇ ವರ್ಷದಲ್ಲಿ ಎಲ್ಲಾ ಹಣವನ್ನೂ ಖರ್ಚುಮಾಡಿ ರಸ್ತೆಗಳನ್ನು ಮಾಡಿ ಜನಗಳ ಪ್ರಯಾಣಕ್ಕೆ ಸೌಕರ್ಯವನ್ನು ಒದಗಿಸಿ ಎಂದು ನಾನು ಹೇಳುತ್ತಿಲ್ಲ. ಈ ಬಡ್ಜೆಟ್ಟನ್ನು ನೋಡಿದರೆ ನಮ್ಮ ಭಾಗಕ್ಕೆ ಯಾವುದಾದರೂ ಸೇತುವೆಗಾಗಲೀ, ಕೆರೆ ಕಾಮಗಾರಿಗಾಗಲೀ, ರಿಪೇರಿಗಾಗಲೀ ಯಾವುದಕ್ಕೂ ಸಹ ಹಣವನ್ನು ಒದಗಿಸಿಲ್ಲ. ನಮ್ಮ ರಾಜ್ಯ ಹಳ್ಳಿಗಳಿಂದ ಕೂಡಿರತಕ್ಕ ದೇಶ. ಮತ್ತು ಈ ರಾಜ್ಯದಲ್ಲಿ ಹಲವಾರು ಪ್ರದೇಶಗಳು ಆಗಿಂದಾಗ್ಯೆ ಕ್ಷಾಮಕ್ಕೆ ತುತ್ತಾಗುತ್ತಿವೆ. ಅಂಥಾ ಪ್ರದೇಶಗಳಿಗೆ ರಸ್ತೆ ಮುಂತಾದ ಕಾಮಗಾರಿಗಳನ್ನು ಕೊಡದೆ ಇರುವುದು ಧರ್ಮವಲ್ಲ. ನನ್ನ ಅನೇಕ ಜನ ಮಾನ್ಯ ಸ್ನೇಹಿತರು ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತಂದಿದ್ದಾರೆ.

ಅಧ್ಯಕ್ಷರು.—ಯಾವ ಜಿಲ್ಲೆಯಲ್ಲಿ ಆಗಿಲ್ಲ ಎಂದು ಯಾರು ಹೇಳಿದರು ಎನ್ನುವ ವಾದವನ್ನು ತೋರಿಸಿ.

ಶ್ರೀ ಎಸ್. ಆವಲರೆಡ್ಡಿ.—ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಅನೇಕ ರಸ್ತೆಗಳನ್ನು ಗ್ರಾವಲ್ ರಸ್ತೆಗಳನ್ನಾಗಿ ಮಾಡಿಸಿದ್ದಾರೆ. ಸಾಮಾನ್ಯವಾದ ಮಳೆ ಬಂದರೂ ಕೂಡ ಆ ಮಣ್ಣೆಲ್ಲಾ ಕೊಚ್ಚಿಹೋಗಿ ಅದು ಪ್ರಯಾಣಕ್ಕೆ ಅನಾನುಕೂಲವಾಗಿದೆ. ಈ ರಸ್ತೆಗಳನ್ನು ಮಾಡಿಸುವಾಗ ಸ್ವಲ್ಪ ಚೆನ್ನಾಗಿ, ಭದ್ರವಾಗಿ ಮಾಡಿಸಿದರೆ ಚೆನ್ನಾಗಿರುತ್ತದೆ. ನಮ್ಮ ಜಿಲ್ಲೆಯಲ್ಲಿ ಎರಡು ನ್ಯಾಷನಲ್ ಹೈವೇಸ್ ಮಾಡಿದ್ದಾರೆ. ಅದರಲ್ಲಿ ಬೆಂಗಳೂರು—ಮದ್ರಾಸ್ ರೋಡನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಆದರೆ ಬೆಂಗಳೂರು—ಬಳ್ಳಾರಿ ರಸ್ತೆ ನ್ಯಾಷನಲ್ ಹೈವೇ ನಂಬರ್ 7 ಏನು ಮಾಡಿದ್ದಾರೆಯೋ ಅದನ್ನು ಡಿಕ್ಲೇರ್ ಮಾಡಿದ ತಾರೀಖಿನಿಂದ ಬೆಂಗಳೂರಿನಿಂದ ಬಾಗೇಪಲ್ಲಿಯ ಮಾರ್ಗವಾಗಿ ಹೋಗತಕ್ಕಂಥ ರಸ್ತೆಗೆ ಒಂದು ಕಾಸನ್ನೂ ಖರ್ಚುಮಾಡಿಲ್ಲ. ಆದ್ದರಿಂದ ಆ ಬಗ್ಗೆ ಸರ್ಕಾರದವರು ನಿಗಾಕೊಟ್ಟು ಆ ರಸ್ತೆಯ ಕೆಲಸವನ್ನು ತೆಗೆದುಕೊಂಡು ಅದನ್ನು ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕೆಲವು ರಸ್ತೆಗಳು ಬಸ್ಸಿನ ಪ್ರಯಾಣಕ್ಕೆ ಮತ್ತು ಕಾರಿನ ಪ್ರಯಾಣಕ್ಕೆ ಬಹಳ ಅನಾನುಕೂಲವಾಗಿವೆ. ಆದ್ದರಿಂದ ಮಾನ್ಯ ಮಂತ್ರಿಗಳು ತಕ್ಷಣ ಆ ಕಡೆ ಗಮನಕೊಟ್ಟು ಅದಕ್ಕೆ ಹಣವನ್ನು ಒದಗಿಸಿ ಆ ರಸ್ತೆಯ ಕೆಲಸವನ್ನು ಜಾಗ್ರತೆಯಾಗಿ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಈ ನ್ಯಾಷನಲ್ ಹೈವೇಸ್‌ಗೆ ಸಂಬಂಧಪಟ್ಟ ರಸ್ತೆಗಳಿಗೆ ಇಂಡಿಯಾ ಸರ್ಕಾರದವರು ಹಣವನ್ನು ಕೊಡುತ್ತಾರೆಂದು ಹೇಳುತ್ತೀರಿ. ನ್ಯಾಷನಲ್ ಹೈವೇಸ್ ಅನ್ನು ಇಂಡಿಯಾ ಸರ್ಕಾರದವರ ಅಜ್ಞೆಯ ಪ್ರಕಾರ ಇಷ್ಟು ಮೈಲಿ ಎಂದು ಡಿಕ್ಲೇರ್ ಮಾಡಿದಮೇಲೆ ಕೇಂದ್ರ ಸರ್ಕಾರದವರು ಕೊಟ್ಟಂತಹ ಹಣವನ್ನೆಲ್ಲಾ ಆ ರಸ್ತೆಗಳಿಗೆ ಉಪಯೋಗಿಸಬೇಕು. ಬಹಳ ಮುಖ್ಯವಾದ ರಸ್ತೆಗಳನ್ನು ಆಂಧ್ರಕ್ಕೂ ಮತ್ತು ಮೈಸೂರಿಗೂ ಕನೆಕ್ಷನ್ ಕೊಡಬೇಕು. ಅದು ಒಳ್ಳೆಯ ವ್ಯಾಪಾರ ಮಾರ್ಗ, ಅದನ್ನು ಆದಷ್ಟು ಜಾಗ್ರತೆ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಹಳೆಯ ಮೈಸೂರು ಭಾಗದಲ್ಲಿ ಸಾಲುಮರಗಳನ್ನೇನು ಮಾಡಿದ್ದಾರೆಯೋ ಅವು ತಾತ ಮುತ್ತಾತಂದಿರಕಾಲದಲ್ಲಿ ರೈತರು ಹಾಕಿರತಕ್ಕಂಥ ಮರಗಳು. ಇವೊತ್ತು ಆ ಮರಗಳಲ್ಲಿ ಬಿಡತಕ್ಕ ಫಸಲನ್ನು ರೂಢಿಸಿಕೊಳ್ಳುವ ಹಕ್ಕುದಾರರು ಬೇರೆಯವರಾಗಿದ್ದಾರೆ. ಈ ವಿಷಯವನ್ನು ಶ್ರೀಮಾನ್ ರಾಮೇಗೌಡರು ಹೇಳಲಿಲ್ಲ. ಅವರು ಆ ಸಾಲುಮರಗಳ ಹಕ್ಕುದಾರಿಕೆಯ ವಿಷಯವನ್ನೂ ಬಹಳ ಚೆನ್ನಾಗಿ ಹೇಳಿದ್ದಾರೆ. ಈ ಸಾಲುಮರಗಳ ಜವಾಬ್ದಾರಿ ಪಬ್ಲಿಕ್‌ವರ್ಕ್ಸ್ ಇಲಾಖೆಯವರಿಗೆ ಬಂದಮೇಲೆ ಇವುಗಳಿಗೆ ಹಕ್ಕುದಾರರು ಬಹಳ ಜನ ಆಗಿದ್ದಾರೆ. ನಮ್ಮ ಜಿಲ್ಲೆಯಲ್ಲಿಯೇ ಈ ಸಾಲುಮರಗಳ ಹಕ್ಕುದಾರಿಕೆಯ ಸಂಬಂಧದಲ್ಲಿ ಎರಡು ಕೇಸುಗಳನ್ನು ಹಾಕಿ ಅದರಮೇಲೆ ಸ್ಟೇ ಆರ್ಡರ್ ಮಾಡಿ ಅನಂತರ ಆ ಮರಗಳ ಫಸಲನ್ನು ರೈತರು ರೂಢಿಸಿಕೊಳ್ಳುವ ಹಾಗೆ ಮಾಡಿದ್ದಾರೆ. ಈ ಸಾಲು

(ಶ್ರೀ ಎಸ್. ಅವಲರೆಡ್ಡಿ)

ಮರಗಳ ಹಕ್ಕುದಾರಿಕೆಯ ವಿಷಯದಲ್ಲಿ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಮತ್ತು ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳೂ ಸೇರಿ ಇದನ್ನು ಕೂಲಂಕಷವಾಗಿ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬರಬೇಕು. ರೈತ ತನ್ನ ತಾತ ಮುತ್ತಾಂದಿರ ಕಾಲದಿಂದಲೂ ಸಾಲುಮರಗಳ ಹಕ್ಕುದಾರಿಕೆಯನ್ನು ಹೊಂದಿದ್ದಾನೆ. ಆದ್ದರಿಂದ ಅದನ್ನು ಅವರಿಗೇ ಕೊಡುವುದು ಒಳ್ಳೆಯದು. ಆಯಾ ರೈತ ತನ್ನ ಜಮೀನಿನಲ್ಲಿರತಕ್ಕಂಥ ಸಾಲು ಮರಗಳಲ್ಲಿ ಬಿದ್ದುಹೋದ ಮರಗಳನ್ನು ಹಾಕುವ ಕೆಲಸವನ್ನೂ ಅವನೇ ಮಾಡಿಕೊಂಡು ಬಂದಿದ್ದಾನೆ. ಅದೇ ಪದ್ಧತಿಯನ್ನೇ ಅವನು ಈಗಲೂ ಉಳಿಸಿಕೊಂಡು ಬರುತ್ತಾನೆ. ಆದ್ದರಿಂದ ಆ ಸಾಲುಮರಗಳ ಹಕ್ಕುದಾರಿಕೆಯನ್ನು ರೈತನಿಗೆ ಕೊಡುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಇನ್ನು ನಮ್ಮ ಸಂಸ್ಥಾನದಲ್ಲಿ ಎರಡು ವರ್ಷಗಳಿಂದಲೂ ಪ್ರೈಮರಿ ಸ್ಕೂಲುಗಳ ಕಟ್ಟಡಗಳಿಗೆ ಹಣವನ್ನು ಒದಗಿಸುವುದನ್ನು ನಿಲ್ಲಿಸಿದ್ದಾರೆ. ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದ ಮೇಲೆ ಹಳ್ಳಿಗಳಲ್ಲಿ ಸ್ಕೂಲ್ ಕಟ್ಟಡಗಳನ್ನು ಕಟ್ಟುವುದಕ್ಕೋಸ್ಕರ ಹಣವನ್ನುಕೊಡಲು ಗ್ರಾಮ ಪಂಚಾಯಿತಿಯವರು ಮುಂದೆ ಬರುತ್ತಿದ್ದಾರೆ. ತಾಲ್ಲೂಕುಬೋರ್ಡಿನವರು ಹಣವನ್ನುಕೊಡುವುದಕ್ಕೆ ಮುಂದೆ ಬರುತ್ತಿದ್ದಾರೆ. ಡೋನಾರ್ಸ್ ಮುಂದೆ ಬರುತ್ತಿದ್ದಾರೆ. ಆದರೆ ವಿದ್ಯಾ ಇಲಾಖೆಯವರು ಮಾತ್ರ ಆ ಬಗ್ಗೆ ಹಣವನ್ನು ಒದಗಿಸುವುದನ್ನು ನಿಲ್ಲಿಸಿದ್ದಾರೆ. ಮಕ್ಕಳ ಸಂಖ್ಯೆ ಜಾಸ್ತಿ ಆದಹಾಗೆಲ್ಲಾ ಸ್ಕೂಲು ಬಿಲ್ಡಿಂಗುಗಳೂ ಜಾಸ್ತಿಯಾಗಬೇಕಾಗಿದೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಕೆಲವು ರಸ್ತೆಗಳಿಗೆ ಒಂದು ಮೈಲಿ ರಸ್ತೆಗೂ ಕೂಡ ಟಾರ್ ಹಾಕಿಲ್ಲ. ಆ ರಸ್ತೆಗಳಲ್ಲಿ ನೂರಾರು ಬಸ್ಸುಗಳು, ಲಾರಿಗಳು ಓಡಾಡುತ್ತವೆ. ಆ ರಸ್ತೆಗಳಲ್ಲಿ ಪ್ರಯಾಣಕ್ಕೆ ತುಂಬಾ ಅನಾನುಕೂಲವಾಗಿದೆ. ಆದ್ದರಿಂದ ಆ ರಸ್ತೆಗಳಿಗೆ ಸರ್ಕಾರದವರು ಆದಷ್ಟು ಜಾಗ್ರತೆ ಟಾರುಹಾಕಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಈ ನಮ್ಮ ರಾಜ್ಯದ ಹಣಕಾಸಿನ ಬಡ್ಜೆಟ್ಟನಲ್ಲಿ ನಾನು ನೋಡಿದ್ದೇನೆ. ನಮ್ಮ ಸಂಸ್ಥಾನದಲ್ಲಿ ಅನೇಕ ಜಿಲ್ಲೆಗಳಿವೆ. ಇದರಲ್ಲಿ ಡಿಸ್ಟ್ರಿಕ್ಟ್‌ವಾರು ಹಾಕಿರತಕ್ಕ ಅಂಕಿ ಅಂಶಗಳನ್ನು ನಾನು ನೋಡಿದ್ದೇನೆ. ಇದರಲ್ಲಿ ನಾನು ಹೇಳಬೇಕಾಗಿದ್ದರೆ ಈ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಡೆವಲಪ್‌ಮೆಂಟ್ ಕೆಲಸಕ್ಕೋಸ್ಕರ ಇಂಟಿಗ್ರೇಟೆಡ್ ಏರಿಯಾಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಹಾಕಿದ್ದಾರೆ. ಆದರೆ ಅರ್ಸ್ಟ್‌ವೈಲ್ ಮೈಸೂರಿಗೆ ಹಲವಾರು ಲಕ್ಷ ರೂಪಾಯಿಗಳೂ ಕೂಡ ಇಲ್ಲ. ಇದೇ ರೀತಿ ಇನ್ನೂ ಎರಡು ಮೂರುವರ್ಷಗಳು ಡೆವಲಪ್‌ಮೆಂಟ್ ಕೆಲಸಗಳಿಗೆ ಹಣವನ್ನು ಒದಗಿಸುವುದಾದರೆ ನಾನಿನ್ನು ಈ ಸಭೆಯಮುಂದೆ ಹೇಳುತ್ತೇನೆ. ಮೈಸೂರು ಬೇರ್ಪಡೆ ಆಗುವುದು ಒಳ್ಳೆಯದು. ಏತಕ್ಕೆಂದರೆ ಪ್ರಜೆಗಳು ಸರ್ಕಾರದ ದೃಷ್ಟಿಯಲ್ಲಿ ಎಲ್ಲರೂ ಒಂದೇ. ಒಂದೇ ಸ್ಥಳದವರು, ಒಂದೇ ಇಲಾಖೆಯವರು. ಬಡ್ಜೆಟ್ಟನ್ನು ತಯಾರು ಮಾಡುವಾಗ ಎಲ್ಲಕಡೆಗೂ ಒಂದೇ ಸಮನಾಗಿ ಕೆಲಸಕಾರ್ಯಗಳಿಗೆ ಹಣವನ್ನು ಒದಗಿಸಬೇಕು. ಮತ್ತು ಯೋಜನೆಗಳನ್ನು ತಯಾರು ಮಾಡುವಾಗಲೂ ಅಷ್ಟೆ. ಎಲ್ಲಾ ಭಾಗಗಳಿಗೂ, ಎಲ್ಲಾ ಕೆಲಸಗಳನ್ನೂ ಸರಿಸಮನಾಗಿ ಮಾಡುವ ಹಾಗೆ ಹಣವನ್ನು ಒದಗಿಸುವ ಹಾಗೆ ಯೋಜನೆಯನ್ನು ತಯಾರು ಮಾಡಿದರೆ ಅಂಥಾ ಯೋಜನೆಯನ್ನ ಈ ಸಭೆ ಎಲ್ಲಾ ದೃಷ್ಟಿಯಿಂದಲೂ ಒಪ್ಪುತ್ತದೆ. ಆದ್ದರಿಂದ ಎಲ್ಲಾ ಭಾಗಗಳಿಗೂ ಸರಿಸಮನಾಗಿ ಡೆವಲಪ್‌ಮೆಂಟ್ ಕೆಲಸಕಾರ್ಯಗಳಿಗೆ ಹಣವನ್ನು ಒದಗಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

6 P.M.

† Sri **SANJEEVANATH AIKALA**.–Sir, roads are constructed but there are bottle-necks everywhere. Houses, shops and other spaces are not acquired and we find bottle-neck everywhere. Sir, a major irrigation project was built and afterwards, water was made to flow back into the river. (Laughter). So, I call this Department as "Plundering Wealth Department". It is plundering the wealth of the State. I do not want to make any general observations on this because the House is not in a good mood to bear with me for 25 or 30 minutes.

Mr. **SPEAKER**.—After 6-30 P.M. the Hon'ble Member can take one hour. (Laughter).

**Sri SANJEEVANATH AIKALA.**—If I am left with the gentlemen of the press, it is sufficient; Sir.

(*Laughter*).

**Sri S. M. KRISHNA.**—How about the Speaker ?

**Sri SANJEEVANATH AIKALA.**—I cannot press. Sir, in presenting my cut motions, I will first move them and then speak.

**Mr. SPEAKER.**— Nothing to move. If he wants to exhaust his time, he can do so.

**Sri SANJEEVANATH AIKALA.**—Very well, Sir. They are self-illuminating and self-explanatory. Sir, the Government wanted to construct quarters for the N. G. Os. In Mangalore they propose to acquire nearly 100 to 125 acres which is five miles away from the centre of the town. If houses are built at such a distance, how is it possible for these officials to come to the offices? This is entirely an ill-advised and ill-planned proposal of the engineers.

Coming to payment of compensation for the individuals for the lands acquired for Karnataka Engineering College, Suratkal, I have made several references to this matter and memorandums have been submitted to every Minister—to all the 27 in the Ministry but no payment has been made towards compensation. On the other hand Government propose to acquire another 120 acres of land, which is very fertile on which three crops of paddy is raised. The Engineering College does not require such a vast area, but still Government insists for this. There are cocoanut gardens there and it is a very fertile land. There are several vacant lands, if they want to acquire but out of vengence, Government is persisting in the acquisition of this particular land.

**Sri G. V. GOWDA.**—Sir, I think, this is *sub-judice*.

**Mr. SPEAKER.**—Is a case pending before the High Court?

**Sri SANJEEVANATH AIKALA.**—No Sir. It went against the Government and Government wants to take this land in another way, *i.e.*, back door method. The High Court has given a decision.

**Sri G. V. GOWDA.**—Sir, a piece of land is subject matter of *sub-judice*.

**Sri SANJEEVANATH AIKALA.**—That is about an elementary school. Sri, Krishna Setty knows about it.

Then Sir, about failure of Government to pay compensation to the land owners for the land acquired for national high-ways. There is inordinate delay in this matter also. Then, there is unnecessary and inordinate delay in calling for tenders for minor irrigation works. Then buildings for locating offices. Sir, the Government was paying 16,000 rupees rent per month for buildings where offices are located. I do not know how much rent they are paying now. I suggested and even wrote to the concerned department to construct adequate buildings to locate the Government offices but, as usual, the Government has a deaf ear for such suggestions.

I now come to the more important matter of capital outlay on ports and failure of Government to meet the basic needs of the people in the matter of rehabilitation of the displaced persons at Panambur.

(SRI SANJEEVANATH AIKALA)

I am repeatedly saying here about the ill-advised and ill-planned construction of the port there. I want the rehabilitation work to go on in a systematic and proper way. Every displaced family wants 25 cents sites. There is enough land at Katipalla. Especially, arrangement for drinking water is very inadequate. Sir, in Mangalore every house has got a well.

Mr. SPEAKER.—After all, the pipe system is introduced.

Sri SANJEEVANATH AIKALA.—But the people want to have wells though I suggested pipe system. So, I suggest that every displaced family should be provided with a well in that area.

Sri B. RACHIAH (Minister for Forests and Fisheries).—One well for every family!

Sri SANJEEVANATH AIKALA.—Yes. In South Kanara there are two wells in each house because we are people who take two baths every day. (laughter)

Sri, regarding providing shops sites for the displaced people who are petty traders, representations have been made to provide them with shop sites. We have recently submitted a memorandum to the Hon'ble Minister for Public Works. I request that this matter may be considered sympathetically.

Then, I come to the very tardy progress made in the port work. The officers were not very anxious and during these three months very little progress has taken place.

Mr. SPEAKER.—It would not be a fair criticism. At this moment they are in Dehli fighting to get money. The member may proceed to the next point.

Sri SANJEEVANATH AIKALA.—The progress is halting and tardy in this behalf. The dreadgering machine has not yet come. Consequently people feel that the Mysore Government, as usual, would give up the project. That gives the impression in the minds of the people as to how the work is done by the Department. If at all any work has to be done, it is to be done now only because on the 15th of May monsoon sets in. There is hardly 1½ months only left to execute the work.

About the indiscriminate acquisition of a large tract of very fertile land, in Mangalore Taluk, South Kanara District for the purpose of laying down Panambur-Mangalore Harbour Railway lines, it runs for 13½ miles.

Mr. SPEAKER.—Which Survey Number does the member really object to? Is it that a port is to be there without a basin?

Sri SANJEEVANATH AIKALA.—For the railway lines, the Government propose to acquire in some places certain fertile lands.

Mr. SPEAKER.—Sri G. V. Gowda has been saying that it should be broad-guage.

Sri SANJEEVANATH AIKALA.—The Government is acquiring 250 ft. width area in certain places and in certain places to a margin of 350 ft. What is the necessity of acquiring such wide area? Very fine and big houses are situated on this tract. To acquire this land, Government has to pay very heavy compensation. I was told that the Acquisition Officers say: "why worry, the Central Government is paying the money." That is the charge of the Acquisition Officers. I request the Hon'ble Minister to direct the officers suitably in this behalf. As a lay man, I say that there is absolutely no necessity of aqcuiring such a wide tract alround for the railway lines. Where it is possible to take the railway line in hilly region and in forests, the Acquisition Officer propose to take the line right in the middle of the fertile land. I do not know whether the marked lines are correct and proper.

Mr. SPEAKER.—Has the member seen the railway plan?

Sri SANJEEVANATH AIKALA.—I have not only seen the railway plan, but I have seen the blue-print also. There are some of the suggestions that I wish to give with regard to certain works. In the last year's budget also I had made a reference about the Sangeri-Subramanya Ghat Road. Of course, roads have been constructed in certain places. This Sangeri-Subramanya Ghat Road is a very important ghat road connecting two famous temples. The road runs right through the middle of the Western Ghat and it provides a very good scenery. But, some bridges and culverts have not been completed on this road, and I request the Government to see that this road is completed as early as possible.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೆ, ಈ ದೇಶದ ಹಣದ ಹೆಚ್ಚು ಭಾಗವನ್ನು ಖರ್ಚು ಮಾಡತಕ್ಕ ಇಲಾಖೆ ಎಂದರೆ, ಅದು ಲೋಕೋಪಯೋಗಿ ಇಲಾಖೆ. ಭುವನೇಶ್ವರದಲ್ಲಿ ಕಾಂಗ್ರೆಸ್ ಅಧಿವೇಶನದಲ್ಲಿ ದೇಶದಲ್ಲಿ ಸಮಾಜವಾದವನ್ನು ಅನುಷ್ಠಾನಕ್ಕೆ ತರುತ್ತೇವೆಂದು ನಿರ್ಣಯ ಮಾಡಿದರು, ಕಾಮರಾಜ್ ಯೋಜನೆ ಬಂತು. ಅದನ್ನು ಜಾರಿ ಮಾಡುವ ಒಂದು ನವ ಸಮಾಜವನ್ನು ಶ್ರೀಮಂತ ಸಮಾಜವನ್ನು ನಿರ್ಮಾಣ ಮಾಡುವುದು ಎಂದರೆ ಅದು ಪಬ್ಲಿಕ್ ವರ್ಕ್ಸ್ ಇಲಾಖೆ. ಕಂಟ್ರಾಕ್ಟರುಗಳಿಂದ ಕೂಡಿದ ಶ್ರೀಮಂತ ವರ್ಗವನ್ನು ಸೇರಿಸಿಕೊಂಡು ಲೋಕೋಪಯೋಗಿ ಇಲಾಖೆ ಕೆಲಸ ಮಾಡುತ್ತಿದೆ. ಈ ವಿಷಯವನ್ನು ಈಗಾಗಲೇ ಕೆಲವರು ಸಭೆಯ ಗಮನಕ್ಕೆ ತಂದಿದ್ದಾರೆ. ಕಂಟ್ರಾಕ್ಟರುಗಳನ್ನು ಈ ದೇಶದಲ್ಲಿ ಹೆಚ್ಚು ಮಾಡಬೇಕು, ಅವರ ಅಭಿವೃದ್ಧಿಯಾಗಬೇಕು, ಈ ಶ್ರೀಮಂತವರ್ಗ ದೇಶದಲ್ಲಿ ಬೆಳೆಯಬೇಕು ಎಂಬುದು ಕಾಂಗ್ರೆಸ್ಸಿನ ಧ್ಯೇಯವೆಂದು ಕಾಣುತ್ತದೆ. ಇದಕ್ಕೇ ಪಬ್ಲಿಕ್ ವರ್ಕ್ಸ್ ಇಲಾಖೆಯ ನಿರ್ಮಾಣವಾಗಿದೆಯೆಂದು ಕಾಣುತ್ತದೆ. ಅವರು ಅದನ್ನು ಗಮನಕ್ಕೆ ತೆಗೆದುಕೊಂಡಿದ್ದರೆ ನಾನು ಹೇಳಬೇಕಾದ ಅವಶ್ಯಕತೆಯಿರಲಿಲ್ಲ. ಈ ಲೋಕೋಪಯೋಗಿ ಇಲಾಖೆಯ ಬಗ್ಗೆ ಮಾಡಬೇಕಾದ ಆರೋಪಣೆಯನ್ನು ಮಾಜಿ ಮಂತ್ರಿಗಳು ಶ್ರೀ ಚನ್ನಬಸಪ್ಪನವರು ಮಾಡಿ ಅದನ್ನು ಸಮರ್ಥಿಸಲು ಅಂಕಿಅಂಶಗಳೊಡನೆ ಸವಾಲು ಹಾಕಿದ್ದಾರೆ. ಅಲ್ಲಿ ನಡೆದಿರುವ ಅನ್ಯಾಯ ಮತ್ತು ಭ್ರಷ್ಟಾಚಾರದ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಯಲಿ ಎಂದು ಹೇಳಿದ್ದಾರೆ. ಇದು ಶರಾವತಿಯ ಬಗ್ಗೆ. ಹೀಗೆಯೇ ರಸ್ತೆಗಳು, ಕಲ್‌ವರ್ಟ್‌ಗಳು, ಸೇತುವೆಗಳು ಎಲ್ಲದರಲ್ಲಿಯೂ ನಡೆಯುತ್ತಿದೆ. ಸುಮಾರು 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ತಂದ ಯಂತ್ರೋಪಕರಣಗಳು ಎಂದರೆ ಮೆಷಿನರಿಗಳು ಕೆಲಸವಿಲ್ಲದೆ ತುಕ್ಕು ಹಿಡಿದು ಬಿದ್ದಿರುವ ಸಂದರ್ಭವನ್ನು ಪದೇ ಪದೇ ಹೇಳುತ್ತಿದ್ದೇನೆ. ಅನೇಕ ಲಾರಿಗಳು, ಸರಿಯಾಗಿರುವ ಲಾರಿಗಳು ಕೂಡ ಕೆಲಸಮಾಡದೆ ಕಂಡೆಮ್ ಆಗಿರುವ ಲಾರಿಗಳೊಡನೆ ಸಹಸ್ರಾರು ಇತರ ವಾಹನಗಳೊಡನೆ ಬಿದ್ದಿರುವುದನ್ನು ಬೆಂಗಳೂರಿನ ಸ್ಟೋರ್ಸ್‌ನಲ್ಲಿ ನೋಡಬಹುದು. ಅನ್ಯಾಯವಾಗಿ ದೇಶದ ಹಣವನ್ನು ಹೇಗೆ ಪೋಲು ಮಾಡುತ್ತಿದ್ದಾರೆಂಬುದನ್ನು ಮಂತ್ರಿಗಳು ನೋಡಿದ್ದಾರೆಯೆ ? ಅಂಕಿಅಂಶಗಳನ್ನು ಈ ಬಗ್ಗೆ ಶೇಖರಿಸಿದ್ದಾರೆಯೆ ? ಅನೇಕ

(ಶ್ರೀ ಕೆ. ಲಕ್ಕಪ್ಪ)

ಲಾರಿಗಳನ್ನೂ ಇತರ ಯಂತ್ರೋಪಕರಣಗಳನ್ನೂ ಉಪಯೋಗ ಮಾಡದೇಯಿರುವ ವಿಷಯವನ್ನು ತನಿಖೆಮಾಡಲು ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಹೇಳಬಯಸುತ್ತೇನೆ.

ಅಧಿಕಾರಿಗಳ ವರ್ಗಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಮಾಡತಕ್ಕ ವಿಚಿತ್ರವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಯಾವ ಕ್ಷೇತ್ರದಲ್ಲಿ ಯಾವ ಜಾತಿಯವರು ಕಾಂಗ್ರೆಸ್ ಟಿಕೆಟ್‌ನಲ್ಲಿ ಚುನಾವಣೆಯಲ್ಲಿ ಸೋತಿದ್ದಾರೆ ನೋಡಿ, ಅವರಿಗನುಕೂಲವಾಗುವಂತೆ ಅವರ ಜಾತಿಯವರನ್ನೇ ಅಲ್ಲಿ ಹಾಕಿ, ಕಂಟ್ರಾಕ್ಟರುಗಳನ್ನು ನಿರ್ಮಾಣಮಾಡಿ ಅವರ ಮೂಲಕ ಓಟು ಪಡೆಯುವ ನೀತಿ ಖಂಡನೀಯ ಮತ್ತು ಹೇಯವಾದುದು. ಅದೇ ಡಿಸ್ಟ್ರಿಕ್ಟಿನ ಅದೇ ತಾಲ್ಲೂಕಿಗೆ ಸೇರಿರತಕ್ಕಂಥ ಎಗ್ಸಿಕ್ಯುಟಿವ್ ಎಂಜಿನಿಯರ್ ಅವರನ್ನು ಈಗ ತಾನೆ ಅಲ್ಲಿ ಪೋಸ್ಟ್ ಮಾಡಿದ್ದೀರಿ. ಇದನ್ನು ಯಾವ ಆಧಾರದ ಮೇಲೆ ಮಾಡಿದ್ದೀರಿ? ಇದರಲ್ಲಿ ಏನಾದರೂ ಒಂದು ನೀತಿ ಇದೆಯೇ? ಅದೇ ಡಿಸ್ಟ್ರಿಕ್ಟಿನ ಅಧಿಕಾರಿಯನ್ನು ಅದೇ ಜಿಲ್ಲೆಯ ಅಧಿಕಾರ ಸ್ಥಾನಕ್ಕೆ ಹಾಕುವುದಿಲ್ಲ ಎಂದು ಹೇಳತಕ್ಕಂಥ ನೀತಿ ಎಲ್ಲಿ ಹೋಯಿತು? ಕೊರಟಗೆರೆ ತಾಲ್ಲೂಕಿನಲ್ಲಿ ಯಾವ ಕೆಲಸವಾಗಿಲ್ಲ ಯಾವ ಪ್ರಾಜೆಕ್ಟು ಇಲ್ಲ. ಅಂಕಿಅಂಶಗಳನ್ನು ತಿಳಿಸಿಲ್ಲ. ಅಧಿಕಾರಿಗಳಿಗೆ ಯಾರು ಜಲಪುಷ್ಪ ಅಂದರೆ ಮಾನನ್ನು ಕೊಡುತ್ತಾರೆಯೋ ಅಂಥವರಿಗೆ ಕಂಟ್ರಾಕ್ಟ್ ಕೆಲಸ ಕೊಡಲಾಗುತ್ತದೆ. ಇಂಥ ಅಧಿಕಾರಿಗಳು ಇರದೆ ಬೇರೆ ಅಧಿಕಾರಿಗಳು ಇರಬೇಕು. ಕೊರಟಗೆರೆ ಚುನಾವಣೆಯಲ್ಲಿ ಯಾರು ಕೆಲಸ ಮಾಡಿದರೋ ಅಂಥ ಅಧಿಕಾರಿಗಳನ್ನು ಇಟ್ಟುಕೊಂಡು ನೀವು ಬಹಿರಂಗವಾಗಿ ಕಾಂಗ್ರೆಸ್ ಸರಕಾರ ಇರಬೇಕು ಎಂದು ಹೇಳತಕ್ಕಂಥವರನ್ನು ಇಟ್ಟುಕೊಂಡು ಕೆಲಸ ಕಾರ್ಯಮಾಡಲು ಅಧಿಕಾರ ಚಲಾವಣೆ ಮಾಡಿದರೆ ಬಹುಶಃ ನಮ್ಮ ದೇಶದಲ್ಲಿ ಪ್ರಜಾ ಪ್ರಭುತ್ವ ಉಳಿಯಲಾರದು.

**Mr. SPEAKER.**—This irrelevant cricism I am not permitting.

ಶ್ರೀ ಕೆ. ಲಕ್ಕಪ್ಪ.—ನಮ್ಮ ತುಮಕೂರು ಜಿಲ್ಲೆಯಲ್ಲಿ ರಸ್ತೆ ರಚನೆ ಕಡೆಗೆ ಸರಕಾರ ಗಮನ ಕೊಟ್ಟಿಲ್ಲ. ಮಂತ್ರಿಗಳಿಗೆ ಹತ್ತಾರು ಅರ್ಜಿಗಳನ್ನು ಕಳಿಸಿದ್ದೇವೆ. ಆದರೂ ಯಾವ ಕೆಲಸವಾಗಿಲ್ಲ. ನೂರಾರು ಸೇತುವೆ, ಅನೇಕ ಬ್ರಿಡ್ಜ್‌ಗಳ ಎಸ್ಟಿಮೇಟು ಮಾಡಿದ್ದರೂ ಕೂಡ ಇದುವರೆಗೆ ಸ್ಯಾಂಕ್ಷನ್ ಮಾಡಿಲ್ಲ. ಒದಗಿಸಿದ ಹಣ ಲ್ಯಾಪ್ಸ್ ಆಗಿವೆ. ಬಹಳ ಅನ್ಯಾಯವಾಗುತ್ತಿದೆ. ನಾವು ಏನು ಹೇಳಿದರೂ ಅದು ಅವರ ಕಿವಿಗೆ ಹೋಗುವುದಿಲ್ಲ. ಅಂಕಿಅಂಶಗಳನ್ನು ಬೇಕಾದರೆ ಒದಗಿಸುತ್ತೇನೆ. ರೋಡ್ ರಚನೆ ಎಷ್ಟು ಆಗಬೇಕೋ ಅಷ್ಟು ಆಗಿಲ್ಲ.

ಶ್ರೀ ಟಿ. ಕೆ. ಕಂಬಳಿ (ಕುಂದಗೋಳ).—ಮಾನ್ಯ ಅಧ್ಯಕ್ಷರೇ, ಇಂದು ಸಭೆಯ ಮುಂದೆ ಚರ್ಚೆಗೆ ಬಂದಿರುವ ಲೋಕೋಪಯೋಗಿ ಇಲಾಖೆಯ ಡಿಮ್ಯಾಂಡ್ಸ್ ಸ್ವಾಗತಿಸುತ್ತಾ ಒಂದೆರಡು ಸಲಹೆ ಕೊಡಲು ಬಯಸುತ್ತೇನೆ. ನಮ್ಮ ಕುಂದಗೋಳ ತಾಲ್ಲೂಕಿನಲ್ಲಿ ರಸ್ತೆಗಳು ಇಲ್ಲ. ಅದರಲ್ಲಿಯೂ ವಿಶೇಷವಾಗಿ ಮಳೆಗಾಲದಲ್ಲಿ ಉಪಯೋಗಿಸಲು ಒಂದೂ ರಸ್ತೆ ಇಲ್ಲ. ನಮ್ಮ ತಾಲ್ಲೂಕಿನ ಉತ್ಪತ್ತಿ ಜಾಸ್ತಿ ಇದ್ದರೂ ಕೂಡ ನಮ್ಮ ತಾಲ್ಲೂಕಿಗೆ ಐದು ಮೈಲಿ ರಸ್ತೆ ಸಿಕ್ಕಿಲ್ಲ. ಕುಂದಗೋಳ ಊರಿಗೆ ಬರುವ ಯಾವ ಮಾರ್ಗದಲ್ಲಿಯೂ ಒಂದು ಬ್ರಿಡ್ಜ್ ಇಲ್ಲ. ಸದ್ಯಕ್ಕೆ ತುರ್ತುಪರಿಸ್ಥಿತಿಯ ಮೂಲಕ ಈ ಕೆಲಸ ತೆಗೆದುಕೊಳ್ಳಲು ಬರುವುದಿಲ್ಲ ಎಂದು ಹೇಳುತ್ತಾರೆ. ರಸ್ತೆ ದುರಸ್ತಿ ಕೆಲಸ ಪೂರ್ತಿ ಮಾಡಬೇಕು ಮತ್ತು ಸಂಪರ್ಕ ಒದಗಿಸಿಕೊಡಬೇಕು ಎಂದು ಬಹಳ ಕಳಕಳಿಯಿಂದ ಹೇಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಎರಡು ಬ್ರಿಡ್ಜ್‌ಗಳನ್ನು ಕಟ್ಟಲು 60 ಸಾವಿರ ರೂಪಾಯಿ ಹಣ ಒದಗಿಸಿದ್ದೀರಿ. ಈ ಕೆಲಸ ತಾಬಡತೋಬಡ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಕುಂದಗೋಳದಲ್ಲಿ ತಾಲ್ಲೂಕ್ ಕಚೇರಿಯಾದ ಮೇಲೆ ಅದಕ್ಕೆ ಸರಿಯಾದ ಕಟ್ಟಡ ಇಲ್ಲ. ಒಂದು ಶಾಲೆಯ ಕಟ್ಟಡದಲ್ಲಿ ಕಚೇರಿ ಇಡಲಾಗಿದೆ. 1948ರಿಂದ ತಾಲ್ಲೂಕ್ ಕಚೇರಿ ಕಟ್ಟಡ ಆಗಬೇಕೆಂದು ಕೇಳಿಕೊಳ್ಳಲಾಗುತ್ತಿದೆ. ಬೇರೆ ಸರಕಾರಿ ಬಿಲ್ಡಿಂಗ್ ಸಹ ಅಲ್ಲಿ ಇಲ್ಲ. ಇವನ್ನು ಆದಷ್ಟು ಬೇಗನೆ ಮಾಡಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಕುಂದಗೋಳ ನಗರದಲ್ಲಿ ಒಂದು ಟ್ರಾವಲರ್ಸ್ ಬಂಗಲೋ ಇಲ್ಲ. ಟ್ರಾವಲರ್ಸ್ ಬಂಗಲೋ ಕಟ್ಟಿಸಬೇಕೆಂದು ಅರ್ಜಿ ಕೊಟ್ಟಿದ್ದೇವೆ. ಆದುದರಿಂದ ಈ ಕೆಲಸವನ್ನು ಬೇಗನೆ ಮಾಡಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಯಾಕೆಂದರೆ ಟಿ. ಬಿ. ಅವಶ್ಯಕತೆ ನಮ್ಮ ಊರಿಗೆ ಬಹಳ ಇದೆ. ಇದು ಮಂತ್ರಿಗಳಿಗೆ ಗೊತ್ತಿದೆ.

ನಮ್ಮ ಕುಂದಗೋಳ ತಾಲ್ಲೂಕಿನಲ್ಲಿ 38 ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲ. ಕುಡಿಯಲು ನೀರು ಸಿಕ್ಕುವುದಿಲ್ಲ. ಇದನ್ನು ಬಹಳ ಕಳಕಳಿಯಿಂದ ಹೇಳುತ್ತೇನೆ. ಕುಡಿಯಲು ನೀರು ಇಲ್ಲದೆ ಇರುವುದು ಉದ್ರೇಕ ಬರುವ ಪರಿಸ್ಥಿತಿ ಇದೆ. ಜನರಿಗೆ ಬಹಳ ಕಷ್ಟವಾಗುತ್ತಿದೆ. ಕುಡಿಯುವ

ನೀರು ತರಲು ಜನರು ಐದಾರು ಮೈಲಿ ದೂರ ಹೋಗಬೇಕಾಗುತ್ತದೆ. ಒಂದು ಕಡೆ ಒಬ್ಬ ಮನುಷ್ಯನಿಗೆ ಎರಡು ಗ್ಯಾಲನ್ ನೀರು ಒಂದು ದಿನಕ್ಕೆ ಕೊಡುತ್ತಾರೆ. ಇದು ಒಳ್ಳೆಯದಲ್ಲ, ಒಂದು ಖಾಯಂ ಯೋಜನೆ ಮಾಡಿ ಈ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಟಾರ್ ರೋಡ್, ಆಸ್ಫಾಲ್ಟ್ ರೋಡ್ ಊರ ಪಕ್ಕದಲ್ಲಿ ಒಂದು ಮೈಲಿವರೆಗೆ ಮಾಡಿಸಿಕೊಡಬೇಕೆಂದು ಇದೆ. ನಮ್ಮ ಊರ ನಡುವೆ ರಸ್ತೆ ಹೋಗುತ್ತದೆ. ಸ್ಟೇಟ್ ಟ್ರಾನ್ಸ್‌ಪೋರ್ಟ್ ಬಸ ಸ್ಟ್ಯಾಂಡ್ ಊರ ನಡುವೆ ಇದೆ. ಅದನ್ನು ಊರ ಹೊರಗೆ ಇರುವ ಹಾಗೆ ಮಾಡಬೇಕು. ಹಾಗೂ ಆಸ್ಫಾಲ್ಟ್ ರೋಡ್ ಮಾಡಿಸಬೇಕು. ಈಗ ತುರ್ತು ಪರಿಸ್ಥಿತಿ ಇದೆ ಎಂದು ಈ ಕೆಲಸ ಕೈಬಿಡಬಾರದು. ನಾವು ಮೊದಲು ಸಂಸ್ಥಾನ ರಾಜ್ಯದಲ್ಲಿ ಇದ್ದೆವು, ಈಗ ಮೈಸೂರು ರಾಜ್ಯದಲ್ಲಿ ಅಂದರೆ ನಮ್ಮ ಮನೆಯಲ್ಲಿ ನಾವು ಇದ್ದೇವೆ. ನಮ್ಮ ಕಡೆ ಯಾವರೀತಿಯಿಂದಲೂ ದುರ್ಲಕ್ಷ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಉತ್ಪನ್ನ ಇಲ್ಲ ಎಂದು ಹೇಳಬಹುದು. ಉತ್ಪನ್ನದ ಮೇಲೆ ನಮ್ಮ ಜಿಲ್ಲೆ ಎರಡನೆ ನಂಬರ್ ಇದೆ. ಕುಂದಗೋಳ—ಬಂಡಿವಾಡ—ಗದಗ ರೋಡ್ ತೆಗೆದುಕೊಂಡಿದ್ದೀರ. ಇಪ್ಪತ್ತು ವರ್ಷದಿಂದ ಅದು ಹಾಗೆಯೆ ಉಳಿದಿದೆ. ಕಲ್ಲು ಹಾಕಿದ್ದು ಹಾಗೆಯೇ ಇದೆ, ಅದೂ ಕೂಡ ಹಾಳಾಗುವುದಕ್ಕೆ ಹತ್ತಿದೆ. ಸದ್ಯಕ್ಕೆ ಐದು ಮೈಲಿ ಆದರೆ ಅನುಕೂಲವಾಗುತ್ತದೆ. ಮಿನಿಸ್ಟರು ಮಾಡಿಕೊಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದಾರೆ, ಅವರು ಮಾಡಿಕೊಡುವರು ಎಂಬ ಭರವಶೆ ಇದೆ.

ಇಷ್ಟು ಹೇಳಿ ನಮ್ಮ ಮುಂದೆ ಈ ಸಣ್ಣ ಸಣ್ಣ ಬೇಡಿಕೆಗಳು ಏನಿವೆ ಅಷ್ಟನ್ನೂ ಸಂಪೂರ್ಣವಾಗಿ ಅನುಮೋದಿಸುತ್ತೇನೆ.

Mr. SPEAKER.—The general debate is over. The reply will begin to-morrow soon after the question hour. The House will stand adjourned to meet again at 8-30 A.M. to-morrow.

---

*The House adjourned at Thirty-two Minutes past Six of the Clock to meet again at Thirty Minutes past Eight of the Clock on Tuesday, the 17th March 1964.*

---

WD 2499—GPB—900—9-6-64